ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

25 ಜನವರಿ 2017 ಪುಟ 20 ರೂ. 15/-


ಓಂ ಪುರಿ



ಕಣ್ಮರೆಯಾದ ಕಾಮ್ರೇಡ್




ಹಣ – ಹೆಣ್ಣು ಬೇಟೆಗೆ ಜ್ಯೋತಿಷ್ಯ



ಒಕ್ಕಲಿಗರ ಸಂಘ ಮುಳುಗಲು ಮೂರೇ ಗೇಣು

ಂಜನಗೂಡು
ಪ್ರಸಾದ್‌ಗೆ
ಣ್ಣು ಮುಕ್ಕಿಸಲು
ಂಗ್ರೆಸ್ ಕಸರತ್ತು



ಮಂಡ್ಯ
ನಗರಸಭೆಯಲ್ಲಿದ್ದಾರೆ
ಪೇಮೆಂಟ್ ಸದಸ್ಯರು





ಚಿತ್ರದುರ್ಗ
ಹಮಾಲಿ ಕಾಂತನದ್ದೇ ಕಾರುಬಾರು!



ಯಲಬುರ್ಗ
ರಾಯರೆಡ್ಡಿ ಬುಡದಲ್ಲಿ
ಕಮಲದ ಕಲರವ

ತಿಗಣೆಗಳ ನಿರ್ನಾಮ: ಅನಾಣ್ಯೀಕರಣಕ್ಕೆ ಸಂಬಂಧವೇ ಇರದ ಸಣ್ಣ ಕ

ಉರ್ವಿಶ್ ಕೊಥಾರಿ ಎಂಬುವವರು ಗುಜರಾತಿ ಭಾಷೆಯಲ್ಲಿ 'ಮರದಿಂದ ಮಾಡಿದ್ದ ಮನೆಯಲ್ಲಿನ ತಿಗಣೆಗಳ ಕಾಟವನ್ನು ವಿನೂತನವಾಗಿ ಪರಿಹರಿಸಿದ ಅತಿಥಿಯ ವೃತ್ತಾಂತ' ಎಂಬ ಸಣ್ಣ ಪ್ರಸಂಗವನ್ನು ಬರೆದಿದ್ದಾರೆ. ಅದನ್ನು ವಿಸ್ಪಾಸ್ಪ್ ಹೂಡಿವಾಲಾ ಎಂಬುವವರು 'ತಿಗಣೆಗಳ ನಿರ್ನಾಮ: ಅನಾಣ್ಯೀಕರಣಕ್ಕೆ ಸಂಬಂಧವೇ ಇರದ ಸಣ್ಣ ಕತೆ' ಎಂದು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಅದರ ಕನ್ನಡ ಅನುವಾದ ಇಲ್ಲಿದೆ.



ಒಂದು ಮನೆಯಿತ್ತು, ಮರದಿಂದ ನಿರ್ಮಿಸಲಾಗಿದ್ದ ಮನೆ ಅದು. ತುಂಬಾ ಜನ ಅದರಲ್ಲಿ ನೆಲಸಿದರೆ ಆ ಕಟ್ಟಡ ಅದುರುತ್ತಿತ್ತು. ಆದರೂ, ಅದು ಹಲವಾರು ಆಘಾತಗಳನ್ನು, ಭೂಕಂಪನಗಳೂ ಸೇರಿದಂತೆ, ಎದುರಿಸಿಯೂ ಅಲ್ಲೇ ನಿಂತಿತ್ತು.



ಆ ಮನೆಯಲ್ಲಿ ಇದ್ದ ಸ್ಥಳಾವಕಾಶಕ್ಕಿಂತಲೂ ಹೆಚ್ಚಿನ ಜನ ವಾಸಿಸುತ್ತಿದ್ದರು. ಜೊತೆಗೆ ಮಂಚದ ಮೇಲೆ, ನೆಲದ ಮೇಲೆ ಹಾಕಿದ್ದ ಹಾಸಿಗೆಯ ಮೇಲೆಲ್ಲಾ ತಮ್ಮ ಕೆಲಸವನ್ನು ದಕ್ಷತೆಯಿಂದ ಮಾಡುತ್ತಿದ್ದ ತಿಗಣೆಗಳು ಆ ಮನೆಯ ತುಂಬಾ ಹರಿದಾಡುತ್ತಿದ್ದವು. ಆ ಮನೆಗೆ ಅತಿಥಿಗಳೂ ಆಗಮಿಸುತ್ತಿದ್ದರಿಂದ ಬಹಳಷ್ಟು ಸಲ ಈ ಬೇಡವಾದ, ಉಪದ್ರವಕಾರಿ ತಿಗಣೆಗಳನ್ನು ಹೇಗೆ ಮನೆಯಿಂದ ಓಡಿಸುವುದು ಎನ್ನುವುದರ ಕುರಿತೇ ಮಾತುಕತೆಗಳು ನಡೆಯುತ್ತಿದ್ದವು. ಆದರೆ ಪರಿಸ್ಥಿತಿಯಲ್ಲಿ ಮಾತ್ರ ಯಾವ ಬದಲಾವಣೆಯೂ ಆಗುತ್ತಿರಲಿಲ್ಲ, ಹಲವೊಮ್ಮೆ ಅತಿಥಿಗಳ ನಿರ್ಗಮನದ (ಅವರು ಯಾಕೆ ಹೊರಟುಹೋಗುತ್ತಿದ್ದರು ಎಂಬುದು ಅವರಿಗೆ ಮಾತ್ರ ಗೊತ್ತಿರುತ್ತಿತ್ತು) ನಂತರವೂ ತಿಗಣೆಗಳ ಕಾಟ ಹೆಚ್ಚಾಗುತ್ತಿತ್ತು.

ಹೀಗಿರುವಾಗ ಒಬ್ಬ ವಿಭಿನ್ನವಾದ ಅತಿಥಿಯ ಆಗಮನವಾಯಿತು. ಆತ ಮನೆಯನ್ನು ಪ್ರವೇಶಿಸಿದ ಕೂಡಲೇ ಸದ್ಯದಲ್ಲೇ ತಿಗಣೆಗಳನ್ನೆಲ್ಲ ನಿರ್ನಾಮ ಮಾಡುತ್ತೇನೆಂದು ಮನೆಯಲ್ಲಿದ್ದ ಎಲ್ಲ ಜನರಿಗೆ ಖಡಾಖಂಡಿತವಾಗಿ ಭರವಸೆ ಕೊಟ್ಟ. ಆದರೆ ದಿನಗಳುರುಳಿದರೂ ಆತ ಏನನ್ನೂ ಮಾಡದಿದ್ದಾಗ ಜನ ಸಣ್ಣದಾಗಿ ಗೊಣಗಲಾರಂಭಿಸಿದರು. "ತಿಗಣೆಗಳನ್ನು ನಿರ್ನಾಮ ಮಾಡುವುದರ ಬಗ್ಗೆ ನೀನು ಕೊಟ್ಟ ಭರವಸೆ ಏನಾಯಿತು" ಎಂದು ಆತನನ್ನು ಪ್ರಶ್ನಿಸಲಾರಂಭಿಸಿದರು.

ಆಗ ಒಂದು ರಾತ್ರಿ, ಎಲ್ಲರೂ ಇನ್ನೇನು ನಿದ್ರೆಗೆ ಜಾರಬೇಕು ಎನ್ನುವ ಹಂತದಲ್ಲಿದ್ದಾಗ, ಆ ಅತಿಥಿ ಮನೆಯಲ್ಲೆಲ್ಲಾ ಸೀಮೆಎಣ್ಣೆ ಸುರಿದು, ಬೆಂಕಿಕಡ್ಡಿ ಗೀರಿ ಮನೆಗೆ ಬೆಂಕಿ ಹಚ್ಚಿದ. ಕೆಲವೇ ಕ್ಷಣಗಳಲ್ಲಿ ಬೆಂಕಿ ದೊಡ್ಡದಾಗಿ ಉರಿಯಲಾರಂಭಿಸಿತು. ಜನರೆಲ್ಲಾ ಮನೆಯಿಂದ ಹೊರಗೆ ಓಡಿದರು. ಹಾಗೆ ಓಡುವಾಗ ಕೆಲವರು ಜಾರಿ ಬಿದ್ದು ಗಾಯ ಮಾಡಿಕೊಂಡರೆ, ಹಲವರು ತಮ್ಮ ಪ್ರಾಣವನ್ನೇ ಕಳೆದುಕೊಂಡರು.


ಅನಿರೀಕ್ಷಿತವಾಗಿ ಇಂತಹ ಆಘಾತಕ್ಕೆ ತುತ್ತಾದ ಜನರೆಲ್ಲರೂ "ನೀನು ಏನು ಮಾಡಿದೆ? ತಿಗಣೆಗಳನ್ನು ಸಾಯಿಸಲು ಇಡೀ ಮನೆಗೇ ಬೆಂಕಿ ಹಾಕಿದೆಯಲ್ಲಾ" ಎಂದು ಅತಿಥಿಯನ್ನು ಪ್ರಶ್ನಿಸಿದರು.

ಅದಕ್ಕೆ ಅತಿಥಿ "ಚಿಂತಿಸಬೇಡಿ. ಈ ಬೆಂಕಿ ಎಲ್ಲಾ ತಿಗಣೆಗಳನ್ನು ಕೊಂದು ಹಾಕುವುದರಿಂದ ನೀವು ಇನ್ನು ಮುಂದೆ ನೆಮ್ಮದಿಯಿಂದ ಬದುಕಬಹುದು. ಈ ಕ್ಷಣ ಈ ಬೆಂಕಿಯಲ್ಲಿ ಬೆಂದು ಹೋಗುತ್ತಿರುವ ತಿಗಣೆಗಳ ಬಗ್ಗೆ ಯೋಚಿಸಿ. ಅಲ್ಲಿ, ಇಲ್ಲಿ, ಎಲ್ಲೆಲ್ಲೂ ಅವು ಪ್ರಾಣ ಉಳಿಸಿಕೊಳ್ಳಲು ಪರದಾಡುತ್ತಿರಬಹುದು. ಮನೆಗೆ ಬೆಂಕಿ ಬಿತ್ತು ಎಂದು ದೂರುವ ಬದಲು ನೀವು ಕೃತಜ್ಞತೆಯನ್ನು ವ್ಯಕ್ತಪಡಿಸಬೇಕು" ಎಂದು ಉತ್ತರಿಸಿದ.

ಆತ ತನ್ನ ಮಾತುಗಳನ್ನು ಮುಗಿಸಿದ್ದೇ ತಡ, ಕೆಲವರು ಗಟ್ಟಿಯಾಗಿ ಆತನನ್ನು ಬೆಂಬಲಿಸಲಾರಂಭಿಸಿದರು. "ಹೌದೌದು, ಈ ಮನೆಯನ್ನು ತಿಗಣೆ ಮುಕ್ತ ಮಾಡಲು ಅನ್ಯ ಮಾರ್ಗಗಳೇ ಇರಲಿಲ್ಲ, ಹೊಸ ಕಟ್ಟಡ ನಿರ್ಮಾಣವಾದಾಗ ಅದರಿಂದ ಎಲ್ಲರಿಗೂ ಲಾಭವಾಗುತ್ತದೆ" ಎಂದರು.

ಇದನ್ನು ಕೇಳಿದ ಜನರೆಲ್ಲ ಒಮ್ಮತದಿಂದ ತಲೆದೂಗಿಸಲಾರಂಭಿಸಿದರಲ್ಲದೆ, ಸುಟ್ಟು ಹೋಗಿದ್ದ ಮನೆಯ ಅವಶೇಷವನ್ನು ತೆಗೆದುಹಾಕಲು ಮುಂದಾದರು. ಆದರೆ ಅವರು ಅವಶೇಷವನ್ನು ತೆಗೆಯುತ್ತಿದ್ದಾಗ ಬಹಳಷ್ಟು ತಿಗಣೆಗಳು ನೆಲದಡಿ ಬಚ್ಚಿಟ್ಟುಕೊಂಡಿದ್ದು, ಕೆಂಡ ನಂದುತ್ತಿದ್ದಂತೆ ಮೇಲೆ ಬಂದು ಹೊಸ ಕಟ್ಟಡವನ್ನು ಪ್ರವೇಶಿಸಲು ತಯಾರಾಗಿದ್ದಾವೆ ಎಂಬುದನ್ನು ಅರಿತರು.

ಕೆಲ ತಿಗಣೆಗಳನ್ನು ಮಟ್ಟಹಾಕಲು ಇಡೀ ಮನೆಯನ್ನೇ ಸುಟ್ಟುಹಾಕಿದ್ದು ಸೂಕ್ತವೇ ಎಂದು ತಜ್ಞರು ಚರ್ಚಿಸಲಾರಂಭಿಸಿದರು. ಹಾಗೆ ಮಾಡಿದ್ದರಿಂದ ಲಾಭವೋ ಅಥವಾ ನಷ್ಟವೋ ಎಂದೆಲ್ಲ ಮಾತನಾಡಿದರು. ಆ ಮನೆಯಲ್ಲಿದ್ದ (ಹಾಸಿಗೆಗಳಲ್ಲೂ ಬಚ್ಚಿಟ್ಟುಕೊಂಡಿದ್ದ)



ತಿಗಣೆಗಳಲ್ಲಿ ಸಾಕಷ್ಟು ತಿಗಣೆಗಳು ಸುಟ್ಟು ಕರಕಲ... ಸಕಾರಾತ್ಮಕ ಫಲಿತಾಂಶ ಎಂದೇ ಹೆಚ್ಚಿನವರು ಅಭಿ... ಪಟ್ಟರು. ಬದುಕುಳಿದ ತಿಗಣೆಗಳು ಈಗ ಭಯ... ವಾಗಿರುವುದರಿಂದ ಅವು ಇನ್ನು ಮುಂದೆ ಉ... ಕೊಡುವುದಿಲ್ಲ ಎಂದೇ ಭಾವಿಸಲಾಯಿತು. ಕೆಲವ... "ಮನೆ ನಾಶವಾಗಿದ್ದರೇನಂತೆ, ತಿಗಣೆಗಳನ್ನು ನಿ... ಮಾಡಲು ಒಂದು ಪ್ರಯತ್ನವನ್ನಂತೂ ಮಾಡಿದಂತಾ... ಹಿಂದೆ ಇಂತಹ ಕೆಚ್ಚೆದೆಯ ಹೆಜ್ಜೆ ... ಯಾರೊಬ್ಬರಾದರೂ ಯೋಚಿಸಿದ್ದಾದರೂ ಇದೆಯೇ ... ಸುಮ್ಮನೆ ಕಾದು ನೋಡುತ್ತಿರಿ... ಹಿಂದೆ ಇದ್ದ ... ಜಾಗದಲ್ಲೇ ಎಂತಹ ಅದ್ಭುತವಾದ ಹೊಸ ... ನಿರ್ಮಾಣವಾಗಲಿದೆ" ಎಂದರು.

ಸ್ವಲ್ಪ ಹೊತ್ತಿನ ನಂತರ ಆ ಅತಿಥಿಯು ಮತ್ತ... ತನ್ನ ಚೇತೋಹಾರಿ ಶೈಲಿಯಲ್ಲಿ ಹೊಸ ಘೋಷಣೆ... ಪ್ರಕಟಿಸಿದ: "ಈ ತಿಗಣೆಗಳ ಕಾಟವನ್ನು ತಡೆಯಲು ... ಹೊಸ ವಿಧಾನವನ್ನು ಪತ್ತೆಮಾಡಲಾಗಿದೆ. ಇನ್ನು ಮ... ಯಾರೊಬ್ಬರೂ ಹಾಸಿಗೆಯ ಮೇಲೆ ಮಲಗಬಾ... ಕುರ್ಚಿಗಳ ಮೇಲೆ ಕೂರಬಾರದು. ಈ ಮನೆ... ಸಂಪೂರ್ಣವಾಗಿ 'ಕುರ್ಚಿ-ರಹಿತ' ಮನೆಯನ್ನಾ... ಮೂಲಕ ಯಾರಿಗೂ ತಿಗಣೆಗಳ ಕಾಟ ಇಲ... ಮಾಡಲಾಗುತ್ತದೆ."

(ಕೃಪೆ: ಸ್ಕ್ರೋಲ್.ಇ...)

ತುಘಲಕ್ ನರೇಂದ್ರ ಮೋದಿ

ಸತ್ಯ ಸತ್ತು ಹೋಗುವುದಿಲ್ಲ, ಹೇಳಿದ ಸುಳ್ಳು ಬಹಳ ದಿನ ಬದುಕುವುದಿಲ್ಲ, ಇದು ತುಘಲಕ್ ನರೇಂದ್ರ ಮೋದಿಯವರಿಗೆ ಗೊತ್ತಿರಬೇಕಾಗಿತ್ತು, ಅಧಿಕಾರದ ನಶೆ ನೆತ್ತಿಗೆ ಏರಿದ ಮೇಲೆ ವ್ಯಕ್ತಿ ಹುಚ್ಚನಂತೆ ವರ್ತಿಸುತ್ತಾನೆ. ಯಾವುದು ಮಾಡ್ಲಿ ಯಾವುದು ಬಿಡ್ಲಿ ಎಂಬ ಅವಸರದಲ್ಲಿ ಯಾವುದನ್ನೂ ಸರಿಯಾಗಿ ಮಾಡದೆ ಸುಳ್ಳಿನ ಮೇಲೆ ಸುಳ್ಳು ಹೇಳುತ್ತ ತಪ್ಪಿನ ಮೇಲೆ ತಪ್ಪು ಮಾಡುತ್ತಾ ಹೋಗುತ್ತಾನೆ. ಇದೆ ಪರಿಸ್ಥಿತಿ ಮೋದಿಯವರದಾಗಿದೆ. ಮೋದಿಯ ಕಾರ್ಯವೈಖರಿ ನೋಡಿದರೆ ನಮ್ಮ ಕಡೆ ಹಳ್ಳಿಯಲ್ಲಿ ಒಂದು ಗಾದೆ ಮಾತಿದೆ. 'ಹದ್ದು ಮಾಡಾದು ಥೋಡೆ ಚೀರಾದೆ ಭಾಳ' ಅಂದಹಾಗೆಯೆ ಒಂದು ಸಣ್ಣ ಕಾಯ್ದೆ ಮಾಡುವುದಿದ್ದರೆ ಅದರ ಬಗ್ಗೆ ಇಲ್ಲದ ಸುಳ್ಳು ಸೇರಿಸಿ ಜೋರಾಗಿ ಮಾತಾಡುವುದು. 500 ಮತ್ತು 1000 ರೂಪಾಯಿ ನೋಟು ರದ್ದತಿಯ ಬಗ್ಗೆಯೂ ಹೀಗೆಯೇ, ನೋಟು ರದ್ದತಿ ಹಿಂದ್ಯಾರು ಮಾಡಿಲ್ಲ, ನಾನೊಬ್ಬನೆ ಮಾಡಿದ ಮಹಾಶೂರನಂತೆ ಹೇಳುವುದು. ಈ ಹಿಂದೆ ಎರಡು ಮೂರು ಸಲ ನೋಟು ರದ್ದತಿಯಾಗಿರುವುದು ದೇಶಕ್ಕೆ ಗೊತ್ತಿದ್ದರೂ ಗೊತ್ತಿಲ್ಲದಂತೆ ಸುಳ್ಳು ಹೇಳುವುದು ಕಂಡರೆ ಬಿಜೆಪಿಯವರ ಇತಿಹಾಸಪ್ರಜ್ಞೆಯ ಬಗ್ಗೆ ಮರುಕ ಉಂಟಾಗುತ್ತದೆ.

ಅಗ್ಗದ ವಸ್ತುಗಳು ಮಾರಬೇಕಾದರೆ ಜೋರಾಗಿ ಚೀರಬೇಕಾಗುತ್ತದೆ. ಸಂತೆಯಲ್ಲಿ ನಿಂತು ಜೋರಾಗಿ ಚೀರಿದರೆ ಬದನೆಕಾಯಿಯೂ ಮಾರಾಟವಾಗುತ್ತದೆ. ಸುಮ್ಮನೆ ಕುಂತು ಮಾಡಿದರೆ ಸೇಬು ಮಾರಾಟವಾಗುವುದಿಲ್ಲ, ಈ ವಿಷಯ ತುಘಲಕ್ ಮೋದಿಯವರಿಗೆ ಚೆನ್ನಾಗಿ ಗೊತ್ತು, ಅದಕ್ಕಾಗಿಯೆ ಚುನಾವಣೆಯಲ್ಲಿ ಶಾಸ್ತ್ರ ಹೇಳಿ ಈಗ ಸಾರ್ವಜನಿಕ ಸಭೆಗಳಲ್ಲಿ ಜೋರಾಗಿ ಚೀರಿ ಬದನೆಕಾಯಿ ಮಾರುತ್ತಿದ್ದಾರೆ. ಜನ ಕೊಳ್ಳುತ್ತಿದ್ದಾರೆ. ಇನ್ನೂ ಕೆಲವು ದಿನಗಳು ಮಾರಾಟ ಜೋರಾಗಿಯೇ ನಡೆಯುತ್ತದೆ. ಮೋದಿಗೆ ಗೊತ್ತಾಗಬೇಕು. ಸುಳ್ಳಿನ ಮೇಲೆ ಸವಾರಿ ಮಾಡಿ ಸತ್ಯವನ್ನು ಮುಚ್ಚಿಹಾಕುವುದು ಸಾಧ್ಯವಿಲ್ಲ, ನಮ್ಮ ದೇಶದ ಜನರು ಅವಿವೇಕಿಗಳು ನಿಜ. ಆದರೆ ಬುದ್ಧಿವಂತರೂ ಇದ್ದಾರೆ. ದಿಲ್ಲಿ ಮತ್ತು ಬಿಹಾರದಲ್ಲಿ ದಿನಕ್ಕೊಂದು ಸುಳ್ಳು ಹೇಳುವವರಿಗೆ ಸರಿಯಾಗಿ ಬುದ್ಧಿ ಕಲಿಸಿದ್ದಾರೆ.



ಒಂದು ತಪ್ಪನ್ನು ಮುಚ್ಚಿ ಹಾಕಲು ಸಾವಿರ ಸುಳ್ಳುಗಳನ್ನು ಹೇಳಬೇಕಾಗುತ್ತದೆ. 500 ಮತ್ತು 1000 ರೂಪಾಯಿಗಳ ನೋಟು ರದ್ದು ಮಾಡಿದ ದಿನದಿಂದಲೂ ಇಲ್ಲಿಯವರೆಗೆ 50 ದಿನಗಳಲ್ಲಿ 70 ಕ್ಕೂ ಹೆಚ್ಚು ನಿಯಮಗಳನ್ನು ಮಾಡುವುದು ಕಂಡರೆ ಮೋದಿಯವರ ಕಾರ್ಯವೈಖರಿಯನ್ನು ಬಿಚ್ಚಿ ತೋರಿಸಲು ಕನ್ನಡಿ ಹಿಡಿಯಬೇಕಾಗಿಲ್ಲ, ಈಗ ದಿಕ್ಕು ತಪ್ಪಿದೆ ಹೇಗಾದರೂ ಮಾಡಿ ಅದನ್ನು ಸರಿ ಮಾಡಬೇಕೆಂದು ಶತಪ್ರಯತ್ನ ಮಾಡುತ್ತಿದ್ದಾರೆ. ವಿನಾಶಕಾಲಕ್ಕೆ ವಿಪರೀತ ಬುದ್ಧಿ ಪ್ರದರ್ಶಿಸುವಂತೆ ಸ್ವಕ್ಷೇತ್ರ ವಾರಣಾಸಿಯಲ್ಲಿ ನೋಟು ರದ್ದತಿಯನ್ನು ವಿರೋಧಿಸುವವರು ಪಾಕಿಸ್ತಾನಕ್ಕೆ ಹೋಗಬೇಕೆಂದು ಹೇಳಿರುವುದು ಪ್ರಧಾನಿ ಹುದ್ದೆಗೆ ಗ... ತರುವ ಮಾತಂತೂ ಅಲ್ಲ, ಮೋದಿಯವರ ವರ್ತನೆ... ಕಂಡರೆ ಪಾಪ ಅವರ ಪರಿಸ್ಥಿತಿ ಎಲ್ಲಿಗೆ ಬಂದುಮು... ಎಂಬುದು ಗೊತ್ತಾಗುತ್ತದೆ. ಬಿಜೆಪಿಯವರಿಗೆ ಪಾಕಿ... ಹೋಗುವ ಮನಸ್ಸಿದ್ದರೆ ಹೋಗಲಿ ನಮ್ಮ ಅಭ್ಯಂತ... ಬಿಜೆಪಿಯನ್ನು ವಿರೋಧಿಸುವವರು ದೇಶಪ್ರೇಮಿ... ಅವರು ಪಾಕಿಸ್ತಾನಕ್ಕೆ ಹೋಗಬೇಕೆಂಬುದು ... ಬಾಲಿಶತನವನ್ನು ಎತ್ತಿ ತೋರಿಸುತ್ತದೆ.

ಮೋದಿ ಸರಕಾರವೆಂದರೆ, ಸುಗ್ರೀವಾಜ್ಞೆಯ ಸ... ವಿರೋಧ ಪಕ್ಷದಲ್ಲಿದ್ದಾಗ ಬಿಜೆಪಿಯವರು ಸುಗ್ರೀ... ಯನ್ನು ಕಟುವಾಗಿ ವಿರೋಧಿಸಿರುವುದು ಈಗ ... ನೆನಪಿಲ್ಲ, 2016 ಡಿಸೆಂಬರ್ 30ರ ನಂತರದಲ್ಲಿ 1... ರೂಪಾಯಿ ನೋಟುಗಳು ರದ್ದಾದ ಮೇಲೆ ಇದ್ದರ... ಇರದಿದ್ದರೇನು? ಹಳೆಯ ನೋಟುಗಳು ರಿಸರ್ವ್ ಬ್ಯಾ... ಕಟ್ಟಲು, ಇನ್ನೂ ಮೂರು ತಿಂಗಳ ಕಾಲಾವಕಾಶ... ಅಷ್ಟರೊಳಗೆ ಕಟ್ಟಬಹುದು. 1000 ರೂಪಾಯಿ ... ನೋಟುಗಳು ಇಟ್ಟುಕೊಂಡವರಿಗೆ ದಂಡ ಇಲ್ಲವೆ ಜೈ... ಶಿಕ್ಷೆಯಾಗುವುದೆಂದು ಹೇಳುವುದರಲ್ಲಿ ಏನರ್ಥ... ಗೊತ್ತಾಗುತ್ತಿಲ್ಲ, ಹಳೆ ನೋಟುಗಳಿಗೆ ಯಾವ ಬೆಲೆಯ... ಅವುಗಳನ್ನು ಯಾರೂ ಮುಟ್ಟುವುದಿಲ್ಲ, ಕಸಕ್ಕಿಂತ... ಕಡೆ. ಅಂಥವುಗಳನ್ನು ಇಟ್ಟುಕೊಂಡವರಿಗೆ ಜೈಲ್ ... ಅಥವಾ ದಂಡ ವಿಧಿಸುವುದನ್ನು ಸುಗ್ರೀವಾಜ್ಞೆ ಮೂ... ಜಾರಿ ಮಾಡುವುದರಲ್ಲಿ ಯಾವ ಪುರುಷಾರ್ಥವಿದೆ, ... ಹೊಣೆಗೇಡಿ ಸರಕಾರದ ಅಪ್ರಬುದ್ಧ ನಡತೆ. ... ಹುಚ್ಚನೂ ಇಂಥ ಕಾನೂನು ಮಾಡಲಾರ. ಇಂಥ ಮೂ... ನಿರ್ಣಯವನ್ನು ಯಾವ ಬುದ್ಧಿವಂತರೂ ಬೆಂಬಲಿಸುವುದಿ...

■ ಪ್ರಭು ಖಾನಾಪುರೆ, ಕಲಬುರ...

ಅಭಿಷೇಕ್ ಸಾವಿಗೆ ಯಾರು ಕಾರಣ?




• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಸಂಘಪರಿವಾರದ ಕೋಮುವಾದಿ ಷಡ್ಯಂತ್ರಕ್ಕೆ ದರಾಬಾದಿನ ದಲಿತ ವಿದ್ಯಾರ್ಥಿ ರೋಹಿತ್ ವೇಮುಲ ಪ್ರಾಣವನ್ನೇ ಕಳೆದುಕೊಂಡ. ಹಾಗೆಯೇ ದೆಹಲಿಯ ಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಮುಸ್ಲಿಮ್ ್ಯಾರ್ಥಿ ನಜೀಬ್ ನಾಪತ್ತೆಯಾಗಿ ಎರಡು ತಿಂಗಳಾದರೂ ನನ್ನು ಪತ್ತೆ ಮಾಡಲಾಗಿಲ್ಲ. ಈಗ ನೋಡಿದರೆ, ನಮ್ಮ ್ಟಕದಲ್ಲೇ ಸಂಘಪರಿವಾರದ ಅಂಗವಾದ ಅಖಿಲ ರತ ವಿದ್ಯಾರ್ಥಿ ಪರಿಷತ್ತಿನ ಸದಸ್ಯನೇ ಬಲಿಯಾಗಿದ್ದಾನೆ. ಿರಲಿ, ರೋಹಿತ್ ವೇಮುಲ ಮತ್ತು ನಜೀಬ್ ಮೇಲೆ ಮಾಡಿದ್ದು, ಸಂಚು ರೂಪಿಸಿದ್ದು, ಬಿಕ್ಕಟ್ಟಿಗೆ ದೂಡಿದ್ದು ೇ ಎಬಿವಿಪಿ.

ಎಬಿವಿಪಿಯ ಶೃಂಗೇರಿ ಘಟಕದಲ್ಲಿ ಅಭಿಷೇಕ್ ಎಂಬ ಾಂ. ವಿದ್ಯಾರ್ಥಿ ಸಕ್ರಿಯ ಸದಸ್ಯನಾಗಿದ್ದ. ಎಷ್ಟರಮಟ್ಟಿಗೆ ದರೆ ಆತ ತನ್ನ ಫೇಸ್‌ಬುಕ್ ವಾಲ್‌ನಲ್ಲಿ ಚಕ್ರವರ್ತಿ ಮುನ್ ಅಲಿಯಾಸ್ ಚಕ್ರವರ್ತಿ ಸೂಲಿಬೆಲೆ 'ಯುವ ೇಡ್'ನಲ್ಲಿ ತನ್ನ 'ಮೆಂಟರ್' ಎಂದು ದಾಖಲಿಸಿದ್ದ. ತೆಗೆ ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಎಬಿವಿಪಿ ಘಟನೆಯ ಅಧ್ಯಕ್ಷನೂ ಆಗಿದ್ದ. ಇಂತಹ ಅಭಿಷೇಕ್ ಅಂದರೆ ಜನವರಿ 10ರಂದು, ನೇಣು ಬಿಗಿದುಕೊಂಡು ್ದಾನೆ. ಆತನ ಸಾವಿಗೂ ಮತ್ತು ಚಕ್ರವರ್ತಿ ಸೂಲಿಬೆಲೆಗೂ ಾನೇರ ನಂಟಿದೆ.


ಜನವರಿ 7ರಂದು ಜೆಸಿಬಿಎಂ ಕಾಲೇಜಿನ



ಎಸ್‌ಎಸ್ ತಂಡ 'ಯೋಧರ ನಮನ' ರ್ಯಕ್ರಮವನ್ನು ಹಮ್ಮಿಕೊಂಡಿತ್ತು. ದೇಶದ ರಕ್ಷಣೆಗಾಗಿ ಪ್ರಾಣವನ್ನೇ ಕಳೆದುಕೊಂಡ ಯೋಧರಿಗೆ ನಮನ ುವುದು ಸರಿಯಾದದ್ದೆ. ಆದರೆ ಆ ಕಾರ್ಯಕ್ರಮದಲ್ಲಿ ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಲು ಚಕ್ರವರ್ತಿ ಲಿಬೆಲೆಯನ್ನು ಆಹ್ವಾನಿಸಲಾಗಿತ್ತು. ದೇಶವನ್ನು ರಕ್ಷಿಸುವ ೋಧರಿಗೂ, ದೇಶಕ್ಕೆ ಕೊಳ್ಳಿ ಇಡುವ ಸೂಲಿಬೆಲೆಗೂ ಂದೆತ್ತಣ ಸಂಬಂಧ ಎಂದು ಕಾಲೇಜಿನ ಪ್ರಜ್ಞಾವಂತ ್ಯಾರ್ಥಿಗಳು ತಕರಾರೆತ್ತಿದರು. ಅವರೊಂದಿಗೆ ಕಾಂಗ್ರೆಸ್ ರ ವಿದ್ಯಾರ್ಥಿ ಸಂಘಟನೆಯಾದ ಎನ್‌ಎಸ್‌ಯುಐ ಸ್ಯರೂ ದನಿಗೂಡಿಸಿದರು. ಹೋದಲ್ಲೆಲ್ಲ ಮುದ್ವೇಷವನ್ನು ಬಿತ್ತುವ, ಮೋದಿ ಭಜನೆಯೇ ಪ್ರೇಮ ಎಂದು ಪೋಸು ಕೊಡುವ, ವಿನಾಯಕ ಗಾನ ಕೊಲೆ ಪ್ರಕರಣದಲ್ಲಿ ಪ್ರಮುಖ ಆರೋಪಿ ುವ ನರೇಶ್ ಶೆಣೈನ ಮಿತ್ರನಾಗಿರುವ ಸೂಲಿಬೆಲೆಯನ್ನು ೇಜಿಗೆ ಕರೆಯಕೂಡದೆಂದು ಅವರೆಲ್ಲ ಾಗೋಷ್ಠಿಯನ್ನು ನಡೆಸಿ ತಮ್ಮ ವಿರೋಧವನ್ನು ಪಡಿಸಿದರು. ಮಾತ್ರವಲ್ಲ, ಕಾಲೇಜು ಮುಂದೆ ಟನೆಯನ್ನೂ ನಡೆಸಿದರು. ಆದರೆ ಸೂಲಿಬೆಲೆಯನ್ನು ಮುಂದೆ ನಿಂತು ಆಹ್ವಾನಿಸಿದ್ದ ಅಭಿಷೇಕ್ ಮತ್ತು ವಿಪಿ ಸದಸ್ಯರಿಗೆ ಇದೆಲ್ಲದರಿಂದಾಗಿ ಮಾಧಾನವಾಗಿತ್ತು. ಹೀಗೆ ಎರಡು ವಿದ್ಯಾರ್ಥಿಗಳ ಗಳು ಸೂಲಿಬೆಲೆ ಬೇಡ, ಸೂಲಿಬೆಲೆ ಬೇಕು ಎಂದು ಹಚ್ಚಿಕೊಂಡಿದ್ದರಿಂದ ಕಾಲೇಜಿನ ಆಡಳಿತವರ್ಗ ಮಸ್ಯೆಯೇ ಬೇಡವೆಂದು ಸೂಲಿಬೆಲೆಗೆ ಕೊಟ್ಟಿದ್ದ ್ರಣವನ್ನು ಹಿಂದೆ ಪಡೆದರೋ ಅಥವಾ ಆತನೇ ಗದಿರಲು ನಿರ್ಧರಿಸಿದನೋ ಗೊತ್ತಿಲ್ಲ, ಒಟ್ಟಾರೆಯಾಗಿ ್ಲಿ ಆದನಂತರ ಕಾಲೇಜಿನಲ್ಲಿ 'ಯೋಧರ ನಮನ' ರ್ಯಕ್ರಮ ಯಾವ ತಕರಾರೂ ಇಲ್ಲದೆ ಶಾಂತಿಯುತವಾಗಿ ಯಿತು. ಯಾಕೆಂದರೆ ಪ್ರಜ್ಞಾವಂತ ವಿದ್ಯಾರ್ಥಿಗಳ ರಿದ್ದದ್ದು ಸೂಲಿಬೆಲೆಯನ್ನು ಆಹ್ವಾನಿಸಿದ್ದಕ್ಕೆ ಹೊರತು ಧರಿಗೆ ನಮನ ಸಲ್ಲಿಸಬಾರದೆಂದೇನಾಗಿರಲಿಲ್ಲ.

ಆದರೆ ತಮ್ಮ ಕಾಲೇಜಿಗೆ ಸೂಲಿಬೆಲೆಯನ್ನು ಕರೆದು ಂದ ಭಾಷಣ ಮಾಡಿಸಿ, ತಮ್ಮ ಬೇಳೆ ಿಸಿಕೊಳ್ಳಬೇಕೆಂದು ಬಯಸಿದ್ದ ಎಬಿವಿಪಿ ಸದಸ್ಯರಿಗೆ ಬೆಳವಣಿಗೆಗಳಿಂದ ಪಿತ್ತ ನೆತ್ತಿಗೇರಿತ್ತು. ರಾಜ್ಯದಲ್ಲಿ ್ ಸರ್ಕಾರವಿದ್ದರೂ ಚಿಕ್ಕಮಗಳೂರು ಮತ್ತು ಕರಾವಳಿ ಲ್ಲಿ ಇನ್ನೂ ಸಂಘಪರಿವಾರಿಗಳ ಗೂಂಡಾಗಿರಿಗೆ ಲಂಗುಲಗಾಮು ಹಾಕುವವರು ಇಲ್ಲದಿರುವುದೂ ಅವರಲ್ಲಿ ಹುರಿದುಂಬಿಸಿರಬಹುದು. ಜನವರಿ 9ರಂದು ಎನ್‌ಎಸ್‌ಯುಐನ ಸದಸ್ಯನೂ ಆಗಿರುವ, ಅದೇ ಜೆಸಿಬಿಎಂ ಕಾಲೇಜಿನಲ್ಲಿ ಬಿಕಾಂ ಎರಡನೇ ವರ್ಷ ಓದುತ್ತಿರುವ ಅಂಜನ್ ಕೆ.ಪಿ ಎಂಬಾತ ಶೌಚಾಲಯಕ್ಕೆ ಹೋಗುತ್ತಿದ್ದಾಗ ಆತನ ಮೇಲೆ ಎಬಿವಿಪಿಯ ಗೂಂಡಾಪಡೆ ದಾಳಿ ಮಾಡಿದೆ. ಈ ದಾಳಿಯಿಂದ ಕಂಗಾಲಾದ ಅಂಜನ್ ಆನಂತರ ಪೊಲೀಸರಿಗೆ ಸಲ್ಲಿಸಿರುವ ದೂರಿನಲ್ಲಿ ಹೀಗೆ ದಾಖಲಿಸಿದ್ದಾನೆ:

"ದಿನಾಂಕ 7.1.2017 ರಂದು ಕಾಲೇಜುವತಿಯಿಂದ ಯೋಧರಿಗೆ ನಮನ ಸಲ್ಲಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮಕ್ಕೆ ಅತಿಥಿಯಾಗಿ ಸೂಲಿಬೆಲೆ ಚಕ್ರವರ್ತಿಯವರನ್ನು ಆಹ್ವಾನಿಸಿದ್ದರು. ಅವರು ಪ್ರಚೋದನಾಕಾರಿ ಭಾಷಣ ಮಾಡುತ್ತಾರೆ ಎಂಬ ಕಾರಣಕ್ಕೆ ನಮ್ಮ ಸಂಘಟನೆ (ಎನ್‌ಎಸ್‌ಯುಐ) ವತಿಯಿಂದ ಅವರನ್ನು ಕರೆಸುವುದು ಬೇಡವೆಂದು ಪ್ರತಿಭಟನೆ ಮಾಡಿದ್ದೆವು. ಈ ವಿಚಾರವಾಗಿ ಎಬಿವಿಪಿ ಸಂಘಟನೆಯ ಸದಸ್ಯರಾದ ಅರ್ಜುನ್ ಡಿ.ಜಿ. ಅನಿರುಧ್, ಕಾರ್ತಿಕ್, ಕೌಶಿಕ್, ಅಭಿಷೇಕ್ ಇವರುಗಳೆಲ್ಲ ಈ ದಿನ ಜನವರಿ 9ರಂದು, 12.25 ಸಮಯದಲ್ಲಿ ಶೌಚಾಲಯಕ್ಕೆ ಹೋಗಲು ಬರುತ್ತಿದ್ದಾಗ ಕಾಲೇಜು ಆವರಣದಲ್ಲಿ ನನ್ನನ್ನು ಅಡ್ಡಹಾಕಿ ನನ್ನನ್ನು ಬೋಳೀಮಗನೆ ಎಂದು ಅವಾಚ್ಯ ಶಬ್ದಗಳಲ್ಲಿ ಬೈದು, ನನ್ನ ಕಪಾಳಕ್ಕೆ, ಮೈಗೆ ಹೊಡೆದಿರುತ್ತಾರೆ. ನೀನು ಭಾರಿ



ಮಾಡುತ್ತಿದ್ದೀಯಾ, ನಿನ್ನನ್ನು ನೋಡಿಕೊಳ್ಳುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ಅಷ್ಟರಲ್ಲಿ ನನ್ನ ಸ್ನೇಹಿತ ಅಶ್ವತ್ ಬಿ.ಎಸ್. ಜಗಳ ಬಿಡಿಸಲು ಬಂದಾಗ ಆತನ ಕಪಾಳಕ್ಕೂ ಎಲ್ಲರೂ ಸೇರಿ ಹೊಡೆದಿರುತ್ತಾರೆ. ಇವರುಗಳ ಮೇಲೆ ಕಾನೂನುಕ್ರಮ ಕೈಗೊಳ್ಳಬೇಕೆಂದು ಕೋರಿಕೊಳ್ಳುತ್ತೇನೆ." ಆತನ ದೂರಿನ ಮೇಲೆ ಪೊಲೀಸರು ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದರು.

ತನ್ನ ವಿರುದ್ಧ ಎಫ್‌ಐಆರ್ ದಾಖಲಾದಾಗ ಅಭಿಷೇಕ್ ಥಂಡಾ ಹೊಡೆದಿದ್ದಾನೆ. ಆಗ ಆತನ ನೆರವಿಗೆ ಆತನ ಎಬಿವಿಪಿ ಸಂಘಟನೆಯ ಸದಸ್ಯರಾಗಲಿ, ಸಂಘಪರಿವಾರದ ಹಿರಿಯರಾಗಲಿ, 'ಮೆಂಟರ್' ಸೂಲಿಬೆಲೆ ಸಾಹೇಬರಾಗಲಿ ಬಂದಂತಿಲ್ಲ. ಅವರಲ್ಲಿ ಯಾರಾದರೊಬ್ಬರು ಬಂದು "ಇದಕ್ಕೆಲ್ಲ ಹೆದರಬೇಡ. ನಾವು ನಿನ್ನೊಂದಿಗೆ ಇದ್ದೀವಿ" ಎಂದು ಧೈರ್ಯ ತುಂಬಿದ್ದರೆ ಆತನಿಗೆ ದಿಕ್ಕುತೋಚದಂತಾಗುತ್ತಿರಲಿಲ್ಲ. ತನ್ನ ವಿರುದ್ಧ ಎಫ್‌ಐಆರ್ ದಾಖಲಾಗಿದ್ದರಿಂದ ತನ್ನ ಭವಿಷ್ಯವೇ ಹಾಳಾಯಿತು ಎಂಬ ಭ್ರಮೆಗೆ ಬಿದ್ದ ಅಭಿಷೇಕ್ ನೇಣು ಬಿಗಿದುಕೊಂಡು ಈ ಲೋಕವನ್ನೇ ತ್ಯಜಿಸಿದ್ದಾನೆ. ಆತನ ವಯಸ್ಸು ಕೇವಲ 21.

ಇಂತಹ ಯುವಕರ ಸಾವು ಎಂತಹವರಲ್ಲೂ ಬೇಸರ ಮೂಡಿಸುತ್ತದೆ. ಈ ಯುವಕರು ಯಾಕೆ ಜೀವನದಲ್ಲಿ ಜಿಗುಪ್ಸೆಗೆ ತುತ್ತಾಗಿ ತಮ್ಮನ್ನೇ ಬಲಿ ಕೊಡುತ್ತಾರೋ ಎಂದು ದುಃಖವಾಗುತ್ತದೆ. ಇನ್ನು ಅವರ ಹೆತ್ತವರಿಗೆ ಆಗುವ ನೋವಂತೂ ಹೇಳತೀರದು. ರೋಹಿತ್ ವೇಮುಲನ ತಾಯಿ, ನಜೀಬನ ತಾಯಿ, ಅಭಿಷೇಕನ ತಾಯಿ.... ಎಲ್ಲರ ನೋವು ಒಂದೆ ತೆರನಾದದ್ದು.

ಆದರೆ ಈಗ ಎಬಿವಿಪಿ ಅಭಿಷೇಕ್ ಪರವಾಗಿ ಬೀದಿಗಿಳಿದಿದೆ. ಇವತ್ತು ಅಭಿಷೇಕನ ಸಾವಿನ ಸುದ್ದಿ ಹರಡುತ್ತಿದ್ದಂತೆ ರಾಜ್ಯದ ವಿವಿಧ ಕಡೆ ಕೇಸರಿ ಧ್ವಜಗಳನ್ನು ಹಿಡಿದು ಪ್ರತಿಭಟನೆಗಳನ್ನು ನಡೆಸಿದೆ. ಅದಕ್ಕಿಂತ ಮುಖ್ಯವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದೆ. ತಮಾಷೆ ಎಂದರೆ ಒಬ್ಬಾತ "ರೋಹಿತ್ ವೇಮುಲನ ಫೋಟೋ ಹಿಡಿದು ಬೀದಿಗೆ ಬಂದವರು ಈಗ ಎಲ್ಲಿದ್ದಾರೆ" ಎಂದು ಫೇಸ್‌ಬುಕ್‌ನಲ್ಲಿ ಪ್ರಶ್ನಿಸಿದ್ದಾನೆ. ಆತ ತಾನು ಯಾಕೆ ರೋಹಿತ್ ವೇಮುಲ ಸತ್ತಾಗ ಪ್ರತಿಭಟಿಸಲಿಲ್ಲ ಎಂದು ತನ್ನನ್ನೇ ಪ್ರಶ್ನಿಸಿಕೊಂಡಿದ್ದರೆ ಸಂಘಪರಿವಾರದ ವಿನಾಶಕಾರಿ ಸಿದ್ಧಾಂತ ಅರ್ಥವಾಗುತ್ತಿತ್ತು.

ನಿತ್ಯಾನಂದ ವಿವೇಕವಂಶಿ ಎಂಬಾತ ಫೇಸ್‌ಬುಕ್‌ನಲ್ಲಿ "ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಆಳ್ವಿಕೆಯಲ್ಲಿ ದೇಶಭಕ್ತರಿಗೆ ಸಾವೇ ಗತಿ ಎಂಬುದು ಮತ್ತೊಮ್ಮೆ ದೃಢಪಟ್ಟಿದೆ... ತಮ್ಮ ಅಧಿಕಾರ ಮದದಿಂದ ಎಳೆಯ ಪ್ರಾಯದ ರಾಷ್ಟ್ರಭಕ್ತ ವಿದ್ಯಾರ್ಥಿ ಸಂಘಟನೆಗೆ ಸೇರಿದ ಎಬಿವಿಪಿಯ ವಿದ್ಯಾರ್ಥಿಯೊಬ್ಬನನ್ನು ಯಮಪುರಿಗೆ ಅಟ್ಟಿಬಿಟ್ಟಿದ್ದಾರೆ... ಮುಂದೊಂದು ದಿನ ಈ ಸರ್ಕಾರದ ಆಡಳಿತದಲ್ಲಿ ತ್ರಿವರ್ಣ ಧ್ವಜ ಹಾರಿಸಿದವರ ಕೈ ಕತ್ತರಿಸಿದರೂ ಅಚ್ಚರಿಪಡುವಂತಿಲ್ಲ" ಎಂದು ಕೆಂಡಕಾರಿದ್ದಾನೆ.

ಸಮಸ್ಯೆ ಎದುರಾಗುವುದು ಇಲ್ಲೇ. ಚೆನ್ನೈನ ಪ್ರತಿಷ್ಠಿತ ಐಐಟಿ ಸಂಸ್ಥೆಯಲ್ಲಿ ದಲಿತ ಮತ್ತು ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳು 'ಅಂಬೇಡ್ಕರ್ ಪೆರಿಯಾರ್ ಸ್ಟಡಿ ಸರ್ಕಲ್' ಸ್ಥಾಪಿಸಿ ಜಾತಿವಿನಾಶಕ್ಕೆ ಕರೆಕೊಟ್ಟಿದ್ದರ ವಿರುದ್ಧ ಪಿತೂರಿ ನಡೆಸಿ ಆ ಸಂಘಟನೆ ನಿಷೇಧಕ್ಕೆ ಗುರಿಯಾಗುವಂತೆ ಮಾಡಿದ್ದು ಇದೇ ಎಬಿವಿಪಿ. ಆಗ ಆ ಸಂಘಟನೆ ಪರ ನಿಂತದ್ದು ಐಐಟಿ ದೆಹಲಿ, ಐಐಟಿ ಮುಂಬೈ ಮಾತ್ರವಲ್ಲ, ಕೊಲ್ಕತ್ತಾದ ಜಾಧವಪುರ ವಿಶ್ವವಿದ್ಯಾಲಯ ಮತ್ತು ಜೆಎನ್‌ಯು ವಿದ್ಯಾರ್ಥಿಗಳು. ಎಬಿವಿಪಿಯ ಇಂತಹ ಕುತಂತ್ರವನ್ನು ನಿತ್ಯಾನಂದ ತರಹದವರು ಮರೆಯುತ್ತಾರೆ.

ಹಾಗೆಯೇ ಹೈದರಾಬಾದಿನ ಕೇಂದ್ರ ವಿಶ್ವವಿದ್ಯಾಲಯದಲ್ಲಿ ಅಂಬೇಡ್ಕರ್ ವಿದ್ಯಾರ್ಥಿ ಸಂಘಟನೆ ಸೇರಿಕೊಂಡು ಸಂಘಪರಿವಾರದ ಸಿದ್ಧಾಂತವನ್ನು ವಿರೋಧಿಸಿದ್ದಕ್ಕೆ ಇದೇ ಎಬಿವಿಪಿಯ ಕೆಂಗಣ್ಣಿಗೆ ಗುರಿಯಾಗಿ, ವಿಶ್ವವಿದ್ಯಾಲಯದ ಹಾಸ್ಟಲ್‌ನಿಂದ ಹೊರದಬ್ಬಿಸಿಕೊಂಡು, ವಿವಿಯ ಆವರಣದಲ್ಲೇ 'ದಲಿತರ ಕೇರಿ' ಸ್ಥಾಪಿಸಿ ಪ್ರತಿಭಟಿಸಿದರೂ ಫಲಕಾಣದಿದ್ದರಿಂದ 'ಸಾಂಸ್ಥಿಕ ಕೊಲೆ'ಗೆ ರೋಹಿತ್ ವೇಮುಲ ಬಲಿಯಾದ ಎಂಬುದನ್ನೂ ನಿತ್ಯಾನಂದ ಮತ್ತಾತನ ಮಿತ್ರರು ಬೇಕಂತಲೇ ಮುಚ್ಚಿಡುತ್ತಾರೆ.

ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷನಾಗಿದ್ದ ಕನ್ಹಯ್ಯ ಕುಮಾರನ ವಿರುದ್ಧ ಪಿತೂರಿ ಮಾಡಿ ಆತ ಜೈಲಿಗೆ ಹೋಗುವಂತೆ ನಕಲಿ ವಿಡಿಯೋ ತಯಾರಿಸಿದ್ದು ಬೇರೆ ಯಾರೂ ಅಲ್ಲ, ಬದಲಾಗಿ ಆಗ ಮಾನವಸಂಪನ್ಮೂಲ ಸಚಿವೆಯಾಗಿದ್ದ ಸ್ಮೃತಿ ಇರಾನಿಗೆ ಹತ್ತಿರವಾಗಿದ್ದ ಅಧಿಕಾರಿಣಿ ಎಂಬುದಕ್ಕೂ ಚೆಡ್ಡಿಗಳು ತೇಪೆ ಹಚ್ಚುತ್ತಾರೆ.

ಅಷ್ಟೇ ಅಲ್ಲ, ಕನ್ಹಯ್ಯನ ಬಂಧನವನ್ನು ಪ್ರತಿಭಟಿಸಿ ಕೊಲ್ಕತ್ತಾದ ಜಾಧವಪುರ ವಿವಿಯ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದ್ದಾಗ ಅವರ ಮೇಲೆ ದಾಳಿ ಮಾಡಿದ್ದು, ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ಹಲ್ಲೆ ಮಾಡಿದ್ದೂ ಇದೇ ಎಬಿವಿಪಿ ಸದಸ್ಯರು. ದಾಳಿಯನ್ನು ಖಂಡಿಸಿದಾಗ ಪಶ್ಚಿಮ ಬಂಗಾಳದ ಬಿಜೆಪಿ ಅಧ್ಯಕ್ಷ ಏನಂದಿದ್ದ ಗೊತ್ತೆ? "ಆ ಮಹಿಳೆಯರು ಪುರುಷರ ಸಂಗ ಬಯಸಿ ಅವರೇ ಹುಡುಗರ ಮೇಲೆ ಬೀಳುತ್ತಾರೆ" ಎಂದಿದ್ದ ಆ ಭೂಪ. ಅಂಥವನಿಂದ ಎಬಿವಿಪಿಯ ಹೆಣ್ಣುಬಾಕರನ್ನು ನಿಯಂತ್ರಿಸಲು ಸಾಧ್ಯವೇ? ಅಂತಹ ರಾಜ್ಯಾಧ್ಯಕ್ಷನ ವಿರುದ್ಧ ನಿತ್ಯಾನಂದ ತರಹದವರು ಎಂದಾದರೂ ಚಕಾರ ಎತ್ತಿದ್ದು ಇದೆಯೇ?

ವಿಪರ್ಯಾಸದ ಸಂಗತಿ ಯಾವುದೆಂದರೆ ತನ್ನ ಹಿಂದೂತ್ವವಾದದಿಂದಾಗಿ ಇಲ್ಲಿತನಕ ಅಲ್ಪಸಂಖ್ಯಾತರನ್ನು ಬಲಿ ತೆಗೆದುಕೊಳ್ಳುತ್ತಿದ್ದ ಸಂಘಪರಿವಾರ ಈಗ ತನ್ನ ಸದಸ್ಯರನ್ನೇ ಸಾವಿಗೆ ದೂಡುತ್ತಿದೆ. ಇಲ್ಲವೆಂದರೆ ದನಗಳನ್ನು ಸಾಗಿಸುತ್ತಿದ್ದ ಪ್ರವೀಣ್ ಪೂಜಾರಿ ಎಂಬ ಬಿಜೆಪಿ ಸದಸ್ಯ ಗೋರಕ್ಷಕರ ದಾಳಿಗೆ ಸಾಯುತ್ತಿದ್ದನೆ? ಬಿಜೆಪಿಗೆ ಸೈದ್ಧಾಂತಿಕವಾಗಿ ಹತ್ತಿರವಾಗಿದ್ದ ವಿನಾಯಕ ಬಾಳಿಗಾ ಎಂಬ ಆರ್‌ಟಿಐ ಕಾರ್ಯಕರ್ತ ನಮೋ ಬ್ರಿಗೇಡಿನ ನರೇಶ್ ಶೆಣೈ ಹೆಣೆದಿದ್ದ ಕುತಂತ್ರಕ್ಕೆ ರಸ್ತೆಬದಿ ಭೀಕರವಾಗಿ ಕೊಲೆಯಾಗುತ್ತಿದ್ದನೆ? ಹರೀಶ್ ಪೂಜಾರಿ ಎಂಬ ಯುವಕ ಮುಸಲ್ಮಾನನೆಂದು ಆತನನ್ನು ಭುವಿತ್ ಶೆಟ್ಟಿ ಎಂಬ ಭಜರಂಗ ದಳದ ಸದಸ್ಯ ಕೊಂದು ಜೈಲು ಪಾಲಾಗುತ್ತಿದ್ದನೆ? ಅಭಿಷೇಕ್ ತರಹದ ಯುವಕರು ಚಕ್ರವರ್ತಿ ಸೂಲಿಬೆಲೆ ಕಾರುವ ನಕಲಿ ರಾಷ್ಟ್ರಭಕ್ತಿಗೆ ಮರುಳಾಗಿ ಪೊಲೀಸ್ ಕೇಸು ಎದುರಿಸುವಂತಾಗುತ್ತಿತ್ತೆ?

ಕೋಮುವಾದ ರಾಷ್ಟ್ರಕಟ್ಟಲು ನೆರವಾಗುವುದಿಲ್ಲ. ಯೋಧರಿಗೆ ತೋರಿಕೆಯ ನಮನ ಸಲ್ಲಿಸಿದರಷ್ಟೇ ದೇಶ ಉದ್ಧಾರವಾಗುವುದಿಲ್ಲ. ಹಿಂದೂತ್ವವಾದವನ್ನು ಬೆಂಬಲಿಸುವ ಎಬಿವಿಪಿ ರಾಷ್ಟ್ರಭಕ್ತ ಸಂಘಟನೆಯಲ್ಲ. ಚಕ್ರವರ್ತಿ ಸೂಲಿಬೆಲೆ ಹಿಂದೂ ರಾಷ್ಟ್ರವಾದಿ ಮಾತ್ರವಾಗಿರುವುದರಿಂದ ಅಂಥವರಿಂದಾಗಿ ದೇಶಕ್ಕೆ ಹೆಚ್ಚು ಹಾನಿ ಹೊರತು ಒಳ್ಳೆಯದಂತೂ ಆಗುವುದಿಲ್ಲ.


ಇಷ್ಟು ಸರಳ ಸತ್ಯಗಳನ್ನು ಅಭಿಷೇಕ್ ತರಹದ ಯುವಕರು ಅರಿತುಕೊಂಡರೆ ಸೂಲಿಬೆಲೆಯನ್ನು ತಮ್ಮ ಕಾಲೇಜಿಗೆ ಕರೆಸುವುದನ್ನೇ ಪ್ರತಿಷ್ಠೆಯ ವಿಷಯವಾಗಿಸಿಕೊಂಡು ಇತರೆ ವಿದ್ಯಾರ್ಥಿಗಳ ಮೇಲೆ ದಾಳಿ ಮಾಡುತ್ತಿರಲಿಲ್ಲ, ದಾಳಿ ಮಾಡಿದ್ದರಿಂದ ಎಫ್‌ಐಆರ್ ಹಾಕಿಸಿಕೊಂಡು ಬೆದರಿ ತಮ್ಮ ಪ್ರಾಣವನ್ನೇ ತೆಗೆದುಕೊಳ್ಳುತ್ತಿರಲಿಲ್ಲ.

ಕೊನೆಗೆ ಅಭಿಷೇಕ್ ಸಾವಿಗೆ ಕಾರಣ ಯಾರು ಎಂಬ ಪ್ರಶ್ನೆ ಉಳಿಯುತ್ತದೆ. ನನ್ನ ಪ್ರಕಾರ ಅಂತಹ ಯುವಕರಲ್ಲಿ ಕೋಮುವಾದದ ವಿಷಬಿತ್ತಿ ಅವರನ್ನು ಗೂಂಡಾಗಿರಿಗೆ ಇಳಿಸುವ ಸಂಘಪರಿವಾರ ಮತ್ತು ಯುವ ಬ್ರಿಗೇಡಿನ 'ಮೆಂಟರ್' ಚಕ್ರವರ್ತಿ ಸೂಲಿಬೆಲೆ ಥರದವರು ಕಾರಣವೇ ಹೊರತು ಅಭಿಷೇಕ್ ಮತ್ತು ಮಿತ್ರರಿಂದ ಅವಾಚ್ಯ ಶಬ್ದಗಳಿಂದ ನಿಂದಿಸಿಕೊಂಡು, ದೈಹಿಕ ದಾಳಿಗೆ ತುತ್ತಾಗಿ ಪೊಲೀಸರಿಗೆ ದೂರು ಕೊಟ್ಟ ಅಂಜನ್ ಅಥವಾ ಆತ ಸದಸ್ಯನಾಗಿರುವ ಎನ್‌ಎಸ್‌ಯುಐ ಅಲ್ಲ.

ಅಭಿಷೇಕ್‌ನನ್ನು ಹೆತ್ತವರಿಗೆ ಈ ದುಃಖವನ್ನು ಸಹಿಸಲು ಶಕ್ತಿ ಸಿಗಲಿ ಎಂದಷ್ಟೇ ಆಶಿಸಬಹುದು... ■

ಪ್ರಶಸ್ತಿ ಸ್ವೀಕರಿಸಲಾರೆ ಎಂದ ಜಿ. ರಾಜಶೇಖರ್

ಉಡುಪಿಯ ಸಾಕ್ಷಿಪ್ರಜ್ಞೆಯಂತಿರುವ ಹಿರಿಯ ಚಿಂತಕ, ಖ್ಯಾತ ವಿಮರ್ಶಕ ಜಿ.ರಾಜಶೇಖರ್ ಅವರ 'ಬಹುವಚನ ಭಾರತ' ಕೃತಿಗೆ 2015ನೇ ಸಾಲಿನ ಪುಸ್ತಕ ಬಹುಮಾನ ಪ್ರಶಸ್ತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿದೆ. ಆದರೆ ಜಿ.ರಾಜಶೇಖರ್ ಅವರು ತಾನು ಈ ಪ್ರಶಸ್ತಿಯನ್ನು ಸ್ವೀಕರಿಸಲಾರೆ ಎಂದು ತಿಳಿಸಿ ಅದಕ್ಕೆ ಕಾರಣವನ್ನು ನೀಡಿದ್ದಾರೆ. ಸದ್ಯ ಅವರು ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವುದರಿಂದ ಅವರ ನಿರ್ಧಾರವನ್ನು ಮಾಧ್ಯಮಗಳಿಗೆ ನೀಡಲು ಅನಾನುಕೂಲವಾಗಿರುವುದರಿಂದ ನನಗೆ ಆ ಕಾರ್ಯಭಾರವನ್ನು ವಹಿಸಿದ್ದಾರೆ.




ಆದುದರಿಂದ ಜಿ.ರಾಜಶೇಖರ್ ಅವರ ನಿರ್ಧಾರವನ್ನು ತಮ್ಮ ಮಾಧ್ಯಮಗಳಲ್ಲಿ ಪ್ರಕಟಿಸಿ ಸಹಕರಿಸಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ.


ಜಿ. ರಾಜಶೇಖರ್ ಅವರ ಹೇಳಿಕೆ ಇಂತಿದೆ:

ರಾಜ್ಯ ಸಾಹಿತ್ಯ ಅಕಾಡೆಮಿ ನನ್ನ 'ಬಹುವಚನ ಭಾರತ' ಕೃತಿಗೆ ಪ್ರಶಸ್ತಿ ನೀಡಿದೆ. ಅಕಾಡೆಮಿ ನನ್ನ ಬಗ್ಗೆ ತೋರಿದ ಗೌರವಕ್ಕೆ ನಾನು ಕೃತಜ್ಞ. ಆದರೆ, 2015ರಲ್ಲಿ ಸಾಹಿತಿಗಳು ತಮಗೆ ನೀಡಿದ ಪ್ರಶಸ್ತಿಗಳ ನಿರಾಕರಣೆ / ವಾಪಸಾತಿಗೆ ಯಾವ ಸನ್ನಿವೇಶ ಕಾರಣವಾಯಿತೋ, ಆ ಸನ್ನಿವೇಶ ಈಗ ಇನ್ನಷ್ಟು ಹದಗೆಟ್ಟಿದೆ. ಹಾಗಾಗಿ ಈ ಪ್ರಶಸ್ತಿಯನ್ನ ನಾನು ಸ್ವೀಕರಿಸಲಾರೆ.

– ಜಿ. ರಾಜಶೇಖರ್, *11 ಜನವರಿ 2017*

■ ಇತಿ ತಮ್ಮ ವಿಶ್ವಾಸಿ, ದಿನಕರ ಎಸ್ ಬೆಂಗ್ರೆ





ಅಪ್ಪಾಜಿಗೌಡ

ಒಕ್ಕಲಿಗರ ಸಂಘ ಮುಳುಗಲಿನ್ನು ಮೂರೇ ಗೇಣು!

ಜನಾಂಗವೊಂದರ ಆತ್ಮವಂಚನೆ, ಹಸಿದ ತೋಳಗಳಂತೆ ಅದರ ಭವಿಷ್ಯವನ್ನೇ ಮುಕ್ಕಿ ತಿನ್ನಲು ಹೊಂಚಿ ಕೂತ ಅದರ ನಾಯಕರು, ಸಿಕ್ಕ ಮೂಳೆ ಚಕ್ಕಳವನ್ನೂ ಬಿಡದೆ ನೆಕ್ಕಲು ನಿಂತ ಆ ಜನಾಂಗದ ಅಳಿದುಳಿದವರು; ಎಲ್ಲರೂ ಸೇರಿ ಮಾರಿಹಬ್ಬದ ಬಾಡೂಟಕ್ಕೆ ಹಸಿದು ಹಪಹಪಿಸು ವಂತಿದೆ-ಒಕ್ಕಲಿಗರ ಸಂಘದ ದುರ್ಗತಿ!

ಮುಳುಗಲಿನ್ನು ಒಕ್ಕಲಿಗರ ಸಂಘಕ್ಕೆ ಮೂರೇ ಗೇಣು. ಹಾಲಿ ಅಧ್ಯಕ್ಷ ಅಪ್ಪಾಜಿ ಗೌಡರನ್ನು ಕಿತ್ತೊಗೆದಿದ್ದೇವೆಂದು ಬೊಬ್ಬೆ ಹಾಕುತ್ತಿರುವ ಮಂಡ್ಯದ ಬೆಟ್ಟೇಗೌಡ, ಶಿವಲಿಂಗಯ್ಯ, ನಾರಾಯಣಮೂರ್ತಿಯ ಕೂಟ. ಅದಕ್ಕೆ ಕುಮ್ಮಕ್ಕಾಗಿ ನಿಂತ ಮಂಜೇಗೌಡ, ಅ. ದೇವೇಗೌಡ, ಎಚ್.ವಿ. ಅಶ್ವತ್ಥರ ಪಡೆ. ನ್ಯಾಯ ಅನ್ಯಾಯದ ಪರಿವೆಯಿದ್ದೂ ಮೂಕಪ್ರೇಕ್ಷಕರಾದ ಪ್ರೊ. ನಾಗರಾಜ್, ಎ. ಪ್ರಸಾದ್ ಮತ್ತು ಹಾಸನದ ರಾಮಚಂದ್ರರಂಥವರ ತಂಡ. ಒಟ್ಟಾರೆ ಸಾವಿರ ಕೋಟಿಯ ಸಂಘದ ಸೊತ್ತನ್ನು ರಿಯಲ್ ಎಸ್ಟೇಟ್ ಖದೀಮರ ಬಾಯಿಗಿಕ್ಕಿ ಜನಾಂಗದ ಭವಿಷ್ಯಕ್ಕೆ ಕೊಳ್ಳಿ ಇಡಹೊರಟ ದುಷ್ಟಕೂಟದ ವಿರುದ್ಧ ಒಕ್ಕಲಿಗರಿಗೆ ಒಕ್ಕಲಿಗರೇ ಬಾಯಿ ಮುಚ್ಚಿ ಕೂತ ದುರಂತಕ್ಕೆ ಬಿದ್ದ ರಾಜ್ಯ ಒಕ್ಕಲಿಗರ ಸಂಘದಲ್ಲೀಗ ಕುರುಡು ಕಾಂಚಾಣ ನೃತ್ಯ!

ಹೊಸ ವರ್ಷದ ಹೊಸ್ತಿಲಲ್ಲೇ ಗೌಡರ ಗದ್ದಲವೆಂಬಂತೆ ಭುಗಿಲೆದ್ದದ್ದು ಒಕ್ಕಲಿಗರ ಸಂಘದ ಸೊತ್ತಿಗೆ ಕಚ್ಚಾಟ. ಈ ಹಿಂದೆ ಅಧ್ಯಕ್ಷನಾಗಿದ್ದ ಕೆಂಚಪ್ಪ ಗೌಡ ಇನ್ನಿಲ್ಲದಂತೆ ಜನಾಂಗದ ಸೊತ್ತಿಗೆ ಕನ್ನ ಹಾಕಿದ್ದು ಹಳೇ ಕತೆ. ಅದರ ವಿರುದ್ಧ ಜನಾಂಗದ ಹಿತರಕ್ಷಕರೆಂಬಂತೆ ಹೋರಾಡಿದ್ದು ಅಪ್ಪಾಜಿಗೌಡ ವ್ಯಾಪಾರಸ್ಥರ ಅಧಿಕೃತ ಚಾನಲ್ಲೆಂದೇ ಕುಖ್ಯಾತವಾದ ಬಿಟೀವಿಯಲ್ಲಿ ಅಪ್ಪಾಜಿಗೌಡ ಸಂಘದ ಮೆಡಿಕಲ್ ಸೀಟುಗಳನ್ನು ದುಡ್ಡಿಗೆ ಮಾರಿಕೊಳ್ಳುತ್ತಿದ್ದಾರೆಂದೂ, ಸೀಟು ಬ್ರೋಕರುಗಳು ಕೋಟಿ ಕೋಟಿ ರೊಕ್ಕ ತುಂಬಿದ ಬ್ರೀಫ್‌ಕೇಸುಗಳನ್ನು ಅಪ್ಪಾಜಿಗೌಡರ ಕಾರಿಗೆ ತಂದಿಡುವ ಸ್ಟಿಂಗ್ ಆಪರೇಷನ್ ಎಂದೂ ದಿನಗಟ್ಟಲೇ ತಲೆಹರಟೆಯನ್ನೂ ಬಿತ್ತರಿಸಲಾಯಿತು. ಸದರಿ ಟೀವಿ ವರದಿಯಲ್ಲಿ ಅಪ್ಪಾಜಿಗೌಡರ ಹೇಳಿಕೆಗಾಗಲಿ, ಸಮಜಾಯಿಷಿಗಾಗಲಿ ಯಾವುದೇ ಅವಕಾಶವಿರಲಿಲ್ಲ. ಹಕೀಕತ್ತೆಂದರೆ ಜಯನಗರದ ಹೋಟೆಲೊಂದಕ್ಕೆ ಅಪ್ಪಾಜಿಗೌಡರು ಬಂದಿದ್ದಾಗ ಅವರು ಹೋಟೆಲಿಗೆ ಹೋಗುವುದನ್ನೇ ಕಾದಿದ್ದು ಅವರಿಲ್ಲದ ವೇಳೆಯಲ್ಲಿ ಅವರ ಡ್ರೈವರ್‌ಗೆ 'ಸ್ವಾಹಬರಿಗೆ ಹಣ್ಣು ತಂದಿದ್ದೇವೆ' ಎಂದು ಎರಡು ಬಾಕ್ಸ್‌ಗಳನ್ನು ಕಾರಿನ ಡಿಕ್ಕಿಗೆ ತಂದಿಡುತ್ತಿದ್ದ ವೀಡಿಯೋ ಅದಾಗಿತ್ತು.


ಅಂದರೆ ಎರಡು ಬಾಕ್ಸ್‌ಗಳಲ್ಲಿ ಏನಿತ್ತೆಂಬುದು ಯಾರಿಗೂ ಗೊತ್ತಿಲ್ಲ, ಅಪ್ಪಾಜಿಗೌಡರೇ ಅದನ್ನು ಕೈಯಾರೆ ತೆಗೆದುಕೊಂಡಿರಲಿಲ್ಲ, ಹಾಗೊಮ್ಮೆ ಮೆಡಿಕಲ್ ಸೀಟಿಗೆಂದು ದುಡ್ಡು ಕೊಟ್ಟಿದ್ದೇ ಆಗಿದ್ದರೆ ಮರಿಯಪ್ಪನಪಾಳ್ಯದ ಶಿವು ಉರ್ಫ್ ಶಿವಕುಮಾರ್ ಎಂಬಾತ ಏಕೆ ಅಪ್ಪಾಜಿಗೌಡರ ಕಾರಿನ ಡಿಕ್ಕಿಗೆ ಬಾಕ್ಸ್‌ಗಳನ್ನು ತಂದಿಡುತ್ತಿದ್ದ? ಏಕೆಂದರೆ ಮರಿಯಪ್ಪನಪಾಳ್ಯದ ಶಿವಕುಮಾರ್ ಬೆಂಗಳೂರಿನ ಕುಖ್ಯಾತ ನೆಲಕಂಟಕ ಮತ್ತು ಈತನೇ ಒಕ್ಕಲಿಗರ ಸಂಘದ ಸಜ್ಜೇಪಾಳ್ಯದ ಸಾವಿರ ಕೋಟಿಯ ಸೊತ್ತಿಗೆ ನಾಲಿಗೆ ಚಾಚಿರುವಾತ.

ಬಿಟೀವಿ ಪಾತ್ರ


ಬಿಟೀವಿಯವರು ಅಪ್ಪಾಜಿಗೌಡರ ವಿರುದ್ಧ ಮಾಡಿದ ಷಡ್ಯಂತ್ರವೇ ಒಕ್ಕಲಿಗರ ಸಂಘದ ವಿರುದ್ಧ ನಡೆಯುತ್ತಿದ್ದ ರಿಯಲ್ ಎಸ್ಟೇಟ್ ಮಸಲತ್ತಿಗೆ ಪುರಾವೆ ಕಲ್ಪಿಸಿತ್ತು. ಕೋಟಿ ಕೋಟಿ ದುಡ್ಡೆಂದು ಅಪ್ಪಾಜಿಗೌಡರ ಕಾರಿನ ಡಿಕ್ಕಿಗೆ ಬಾಕ್ಸ್‌ಗಳನ್ನು ಶಿವಕುಮಾರ್ ತಂದಿಡುತ್ತಿದ್ದ ದೃಶ್ಯವನ್ನು ಸ್ವತಃ ಆತನೇ ತನ್ನ ಚೇಲಾ ರಮೇಶ್ ರಾಜು ಮೂಲಕ ಮೊಬೈಲಿನಿಂದ ವೀಡಿಯೋ ಮಾಡಿಸಿದ್ದ. ಹೋಟೆಲಿನಿಂದ ವಾಪಸ್ಸು ಬಂದ ಅಪ್ಪಾಜಿಗೌಡರಿಗೆ ಯಾರೋ [illegible] ಕೊಟ್ಟು ಹೋಗಿದ್ದಾರೆಂದು ಡ್ರೈವರ್ ಹೇಳಿದಾಗಲೂ [illegible] ಹಿಂದಿದ್ದ ಕಾರಾಸ್ಥಾನ ಗೊತ್ತಿರಲಿಲ್ಲ. ಇದೇ ವೀಡಿ[illegible] ಇಟ್ಟುಕೊಂಡು ಖದೀಮ ಶಿವಕುಮಾರ್ ಸಜ್ಜೇಪಾ[illegible] 44 ಎಕರೆ ಸಂಘದ ಜಮೀನನ್ನು ತನಗೆ ಬಿಟ್ಟುಕೊಡು[illegible] ಅಪ್ಪಾಜಿಗೌಡರ ವಿರುದ್ಧ ಬ್ಲಾಕ್‌ಮೇಲ್‌ಗಿಳಿದಿದ್ದ. [illegible] ವೀಡಿಯೋ ಅನ್ನು ಸಂಘದ ಇತರೇ ನಿರ್ದೇಶಕರಿ[illegible] ತೋರಿಸಿ ತಾನು ಅಪ್ಪಾಜಿಗೌಡರಿಗೆ ಈಗಾಗಲೇ 20 ಕೋ[illegible] ತಲುಪಿಸಿದ್ದೇನೆಂದು ಕತೆ ಕಟ್ಟಿದ್ದ.

ಅಧ್ಯಕ್ಷನೇ 20 ಕೋಟಿ ತಿಂದ ಮೇಲೆ ತಮಗೆ [illegible] ಎರಡೆರಡು ಕೋಟಿ ಕೊಡಿಸಲೇಬೇಕೆಂದು ಸಂ[illegible] ಅರ್ಧದಷ್ಟು ಮಂದಿ ನಿರ್ದೇಶಕರು ಹಠಕ್ಕೆ ಬಿದ್[illegible] ಯಾವತ್ತು ಅಪ್ಪಾಜಿಗೌಡರು ಸಂಘದ ಸೊತ್ತು ಬಿಟ್ಟುಕೊ[illegible] ಒಪ್ಪಲಿಲ್ಲವೋ ಪ್ರತಿಯೊಬ್ಬರಿಗೂ ತಲಾ ಮ[illegible] ಕೋಟಿಯಂತೆ ನಾನು ಕೊಡುತ್ತೇನೆ ಅಪ್ಪಾಜಿಗೌಡ[illegible] ಮೊದಲು ಇಳಿಸಿ ಎಂಬ ರಿಯಲ್ ಎಸ್ಟೇಟ್ ಶಿವಕುಮ[illegible] ಆಮಿಷಕ್ಕೆ ಅನೇಕ ನಿರ್ದೇಶಕರು ಬಲಿಯಾದ ಫ[illegible] ಅಪ್ಪಾಜಿಗೌಡರ ಪದಚ್ಯುತಿಯ ನಾಟಕ!


ಇದಿಷ್ಟನ್ನೇ ಹೇಳಿಬಿಟ್ಟರೆ ಒಕ್ಕಲಿಗರ ಸಂಘದ ದಾವಾ[illegible] ಯಾರಿಗೂ ಅರ್ಥವಾಗುವುದಿಲ್ಲ. ಮರಿಗೌಡ[illegible] ವೆಂಕಟಗಿರಿಗೌಡರಂಥ ಧೀಮಂತರು ಕಟ್ಟಿ ಬೆಳೆಸಿದ ಒಕ್ಕ[illegible] ಸಂಘಕ್ಕೀಗ ನೂರು ವರ್ಷ ತುಂಬಿದೆ. ಮೆಡಿಕ[illegible]




ಅ. ದೇವೇಗೌಡ




ಪ್ರೊ. ನಾಗರಾಜ್



ಆನಂದ



ಡಾ. ಬಿ. ಶಿವಲಿಂಗಯ್ಯ



ಎ. ಪ್ರಸಾದ್

ಮತ್ತು ಪ್ರೊ. ನಾಗರಾಜ್ ತಂಡ. ಕಳೆದ ಸಂಘದ ಚುನಾವಣೆಯಲ್ಲಿ ಕೆಂಚಪ್ಪ ಗೌಡನ ದುಷ್ಟಕೂಟವನ್ನು ಇನ್ನಿಲ್ಲದಂತೆ ನೆಲಕಚ್ಚಿಸಿದ ಒಕ್ಕಲಿಗರು ಇದ್ದುದ್ದರಲ್ಲಿ ಸಭ್ಯರನ್ನೇ ಗೆಲ್ಲಿಸಿದ್ದರು. ಅಪ್ಪಾಜಿ ಗೌಡ ಅಧ್ಯಕ್ಷರಾದರು. ಪ್ರೊ. ನಾಗರಾಜ್ ಕಾರ್ಯದರ್ಶಿಯಾದರು. ಮಿಕ್ಕಂತೆ ಡಿಸಿಕೆ ಕಾಳೇಗೌಡ, ಬಾಗೂರು ಮಂಜೇಗೌಡ, ಎ. ಪ್ರಸಾದ್, ಪೂಜಾರಿಪಾಳ್ಯದ ಕೃಷ್ಣಮೂರ್ತಿ, ಸಿ.ಎನ್. ಬಾಲಕೃಷ್ಣ ಮುಂತಾದವರೆಲ್ಲರೂ ಒಟ್ಟಿಗೆ ಇದ್ದರು. ಸಂಘದ ಬೈಲಾ ಪ್ರಕಾರ ಪ್ರತಿ 30 ತಿಂಗಳಿಗೊಮ್ಮೆ ಹೊಸ ಪದಾಧಿಕಾರಿಗಳ ಆಯ್ಕೆಯಾಗಬೇಕು. ಅದರಂತೆ ಎರಡನೇ ಬಾರಿಗೂ ಅಂದರೆ ಇಲ್ಲಿಗೆ ಐದು ತಿಂಗಳ ಹಿಂದೆ ಮತ್ತೆ ಅಪ್ಪಾಜಿಗೌಡರೇ ಅಧ್ಯಕ್ಷರಾದರು.

1000 ಕೋಟಿಯ ಸೊತ್ತು!


ಆದರೆ ಹಿಂದಿನ ಒಗ್ಗಟ್ಟು ಮಾತ್ರ ಈಗುಳಿದಿರಲಿಲ್ಲ. ಅಪ್ಪಾಜಿಗೌಡರ ಜೊತೆ ಹೆಗಲಿಗೆ ಹೆಗಲು ಕೊಟ್ಟು ಸಂಘದ ಆಸ್ತಿ ಕಂಟಕರ ವಿರುದ್ಧ ಹೋರಾಟಕ್ಕಿಳಿದಿದ್ದ ಪ್ರೊ. ನಾಗರಾಜ್, ಎ. ಪ್ರಸಾದ್, ಅ. ದೇವೇಗೌಡ ಮುಂತಾದವರೀಗ ಅವರ ವಿರೋಧಿ ಪಾಳೆಯದಲ್ಲಿದ್ದರು. ಪ್ರತಿನಿತ್ಯ ಅಪ್ಪಾಜಿಗೌಡರ ವಿರುದ್ಧ ಒಂದಲ್ಲ ಒಂದು ಆರೋಪಗಳನ್ನು ಮಾಡುತ್ತಿದ್ದ ವಿರೋಧಿ ಸದಸ್ಯರ ವರ್ತನೆ ಮೇಲುನೋಟಕ್ಕೆ ಸಂಘದ ಹಿತರಕ್ಷಣೆಗೆ ಎಂಬಂತೆಯೇ ಕಾಣಿಸುತ್ತಿತ್ತು. ಅಪ್ಪಾಜಿಗೌಡ ಮೆಡಿಕಲ್ ಸೀಟುಗಳನ್ನು ಮಾರಿಕೊಂಡರೆಂದೋ, ಆಸ್ಪತ್ರೆಗಳು ಕುಲಗೆಟ್ಟಿವೆಯೆಂದೋ, ಸಂಘಕ್ಕೆ ಸೇರಿದ ಸಜ್ಜೇಪಾಳ್ಯದ ಸಾವಿರ ಕೋಟಿಯ ಸೊತ್ತನ್ನು ಮಾರಿ ಹಾಕಲು ನೆಲಕಂಟಕರಿಂದ 20 ಕೋಟಿಯ ಲಂಚ ಪಡೆದರೆಂದೋ... ಕೇಳಿಬರುತ್ತಿದ್ದ ಇಂಥ ಆರೋಪಗಳು ನಿಜವಿರಬಹುದೆಂದೂ ಅನ್ನಿಸಿದ್ದುಂಟು.

ಇಲ್ಲಿಗೆ ಎರಡು ತಿಂಗಳ ಹಿಂದೆ ರಿಯಲ್ ಎಸ್ಟೇಟ್


ಗೂಂಡಾಗಳಿಂದ ಹೈಜಾಕಾದ ಸಂಘ!

ಸಂಘದ ಮೂವತ್ತೈದು ಮಂದಿ ಕಾರ್ಯಕಾರಿ ಸದಸ್ಯರ ಪೈಕಿ ಅವಿಶ್ವಾಸ ಮಂಡಿಸಬೇಕೆಂದರೆ ಅದಕ್ಕೆ ಮೂರನೇ ಎರಡರಷ್ಟು ಮಂದಿಯ ಸಮ್ಮತಿ ಬೇಕು. ಆದರೆ ಡಾ. ಮಹದೇವ್ ಮತ್ತು ಬೆಟ್ಟೇಗೌಡರ ಬಣವೆಂದು ಸಹಿ ಹಾಕಿರುವುದು ಕೇವಲ ಹದಿನೆಂಟು ಮಂದಿ ಮಾತ್ರ. ಎತ್ತಿಂದೆತ್ತ ಲೆಕ್ಕ ಹಾಕಿದರೂ ಇಪ್ಪೊಂದು ಮಂದಿಯ ಸಹಿಸಮೇತ ಅವಿಶ್ವಾಸ ಮಂಡಿಸುವುದು ಸಾಧ್ಯವೇ ಇಲ್ಲ. ಹಾಗಿದ್ದರೂ ಡಿಸೆಂಬರ್ 27ಕ್ಕೆ ರಿಯಲ್ ಎಸ್ಟೇಟ್ ಬೆಂಬಲಿತ 18 ಮಂದಿ ಅವಿಶ್ವಾಸ ಗೊತ್ತುವಳಿಯ ಪತ್ರ ನೀಡುತ್ತಾರೆ. ಈ 18 ಮಂದಿಯ ಪೈಕಿ ಎಚ್.ಕೆ. ಶೇಖರ್ ಅದರ ಮರುದಿನವೇ ಸಹಿ ತನ್ನದಲ್ಲ ಎಂದು ಪತ್ರ ಕೊಡುತ್ತಾರೆ. ಅಲ್ಲಿಗೆ ವಿರೋಧಿ ಬಣದ ಸಂಖ್ಯೆ ಹದಿನೇಳಾಯಿತು. ಇಷ್ಟಾಗ್ಯೂ ಜನವರಿ 5 ಕ್ಕೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಕಚೇರಿಗೆ ನುಗ್ಗಿದ ಮಾದೇವ್, ಬೆಟ್ಟೇಗೌಡ, ದೇವೇಗೌಡ, ಮಂಜೇಗೌಡ ಇತ್ಯಾದಿಗಳೆಲ್ಲ ತಾವು ಕರೆದ ಅವಿಶ್ವಾಸ ಗೊತ್ತುವಳಿ ಸಭೆಗೊಬ್ಬ ವೀಕ್ಷಕರನ್ನು ನೇಮಿಸುವಂತೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರನ್ನು ದಬಾಯಿಸುತ್ತಾರೆ. ಎತ್ತಿಂದೆತ್ತ ಲೆಕ್ಕ ಹಾಕಿದರೂ ಜಿಲ್ಲಾ ನೋಂದಣಾಧಿಕಾರಿಗೆ ವೀಕ್ಷಕರನ್ನು ನೇಮಿಸುವ ಅಧಿಕಾರವಿಲ್ಲ. ಹಾಗಿದ್ದೂ ಜನವರಿ 6 ಕ್ಕೆ ಮಹದೇವ್, ಅ. ದೇವೇಗೌಡ, ಮಂಜೇಗೌಡ, ಬೆಟ್ಟೇಗೌಡ, ಶಿವಲಿಂಗಯ್ಯ, ಪ್ರೊ. ನಾಗರಾಜ್, ಪ್ರಸಾದ್, ರಾಮಚಂದ್ರ, ಡಾ. ಬೊಮ್ಮಯ್ಯ ಕೋಲಾರದ ಸತೀಶ್ ರಮೇಶ್, ರಾಮಚಂದ್ರ ಇತ್ಯಾದಿ 17 ಮ[illegible] ಸಂಘಕ್ಕೆ ನುಗ್ಗುತ್ತಾರೆ. ಅಲ್ಲಿಗೆ ಬಸವಯ್ಯ ಎಂಬ ಎಆರ್‌ಓರನ್ನು ವೀಕ್ಷಕರನ್ನಾಗಿ ಕಳಿಸಲಾ[illegible] ಆತನಕ ಅಪ್ಪಾಜಿಗೌಡರ ಜೊತೆಗಿದ್ದ ಪ್ರೊ. ಮಲ್ಲಯ್ಯರನ್ನು ಬಲವಂತವಾಗಿ ಹೊತ್ತೊ[illegible] ತಾವು 18 ಮಂದಿ ಎಂದೂ ಅಪ್ಪಾಜಿಗೌಡ, ಕಾಳೇಗೌಡ, ಉಲ್ಲೂರು ಮ[illegible] ಶಶಿಕಿರಣ್‌ರನ್ನು ಪದಚ್ಯುತಿಗೊಳಿಸಲಾಗಿದೆಯೆಂದೂ ಘೋಷಿಸುತ್ತಾರೆ. ಮೊದ[illegible] ಅಣಿಯಾಗಿದ್ದ ರೌಡಿ ಪಡೆ ಅಪ್ಪಾಜಿಗೌಡ ಛೇಂಬರಿಗೆ ನುಗ್ಗುತ್ತದೆ, ತಮ್ಮದೇ ಸಂಘವೆ[illegible] ಕಚೇರಿಯನ್ನು ವಶಪಡಿಸಿಕೊಂಡಿದೆ.


ಇದು ಗೂಂಡಾಗಿರಿಯಲ್ಲದೆ ಮತ್ತೇನು? ಪ್ರತಿಷ್ಠಿತ ಜನಾಂಗವೊಂದರ ಸಹಸ[illegible] ಕೋಟಿ ವಹಿವಾಟಿನ ಸಂಘವನ್ನು ಈ ರೀತಿ ತೋಳ್ಬಲದಿಂದ ಯಾರಾದರೂ ಹೈಜ[illegible] ಮಾಡುವುದಾದರೆ ಅದಕ್ಕೆ ಸರ್ಕಾರವೇಕಿರಬೇಕು ಪೊಲೀಸು, ಕೋರ್ಟ್, ಕಾನೂನಿಗ[illegible] ಬೆಲೆ? ಈಗ ಯಾರೆಲ್ಲ ಅಪ್ಪಾಜಿಗೌಡರ ಪದಚ್ಯುತಿಗೆ ಕೈಜೋಡಿಸಿದ್ದಾರೋ ಅವರೆಲ್ಲ[illegible] ನೆಲಗಳ್ಳರ ಜೊತೆ ರಾಜಿ ಮಾಡಿಕೊಂಡು ಅವರ ಭಿಕ್ಷೆಯ ಆರೆಕರೆಗೆ ಸಂಘದ ಎಕರೆ ಬಿಟ್ಟು ಕೊಡಿ ಎಂದು 2015ರ ಡಿಸೆಂಬರ್‌ನಲ್ಲಿ ಅರ್ಜಿ ಕೊಟ್ಟವರೇ. ಸಂಘದ ಹಿತರಕ್ಷಕರ್ಯಾರು, ದ್ರೋಹಿಗಳ್ಯಾರು ಎಂಬುದಕ್ಕೆ ಇದಕ್ಕಿಂತ ಬೇಕೆ?




ಡಾ. ಮಹದೇವ್



ಬೆಟ್ಟೇಗೌಡ



ಕೆಂಚಪ್ಪ ಗೌಡ




ಪ್ರೊ. ಮಲ್ಲಯ್ಯ




ಸಜ್ಜೇಪಾಳ್ಯದ ಒಕ್ಕಲಿಗರ ಸಂಘದ ಸ್ವತ್ತು

ನಿಯರಿಂಗ್ ಕಾಲೇಜುಗಳಲ್ಲದೆ ಕೆಂಪೇಗೌಡ ಆಸ್ಪತ್ರೆ, ಧ ವಿದ್ಯಾಸಂಸ್ಥೆಗಳಿವೆ. ಆದಿಚುಂಚನಗಿರಿ ಮಠಕ್ಕೂ ಾಬಿಟ್ಟ ವಿದ್ಯಾಸಂಸ್ಥೆಗಳಿವೆಯಾದರೂ ಅದರಲ್ಲಿ ಿಗರಿಗೆ ಅನುಕೂಲ ಕಮ್ಮಿಯೇ. ದುಡ್ಡು ಕೊಟ್ಟವರಿಗಷ್ಟೇ ರ ಹೈಟೆಕ್ ಸೀಟುಗಳು ಮೀಸಲು. ಸಾಯುವ ಮುನ್ನ ಂಗಂಗಾಧರನಾಥರಿಂದ ಹೆಬ್ಬೆಟ್ಟೊತ್ತಿಸಿಕೊಂಡು ರ್‌ಸ್ವಾಮಿ ಅಲಿಯಾಸ್ ಪ್ರಕಾಶನಾಥ ಮಠದ ಕಲ್, ಡೆಂಟಲ್, ಗ್ಲೋಬಲ್ ಸ್ಕೂಲುಗಳನ್ನೆಲ್ಲ ತನ್ನ ಾಗಿಸಿಕೊಂಡ ಮೇಲಂತೂ ಒಕ್ಕಲಿಗರ ಪಾಲಿಗೆ ಚುಂಚನಗಿರಿ ಮಠವೆಂಬುದು ಬಿಟ್ಟೀ ಆಶೀರ್ವಾದಕ್ಕಷ್ಟೇ ತವಾಯಿತು. ಇಂಥಾದ್ದರಲ್ಲಿ ಬಡ ಒಕ್ಕಲಿಗರ ಪಾಲಿಗೆ ಷ್ಟು ಪ್ರಯೋಜನಕ್ಕಂತ ಇದ್ದದ್ದು ಒಕ್ಕಲಿಗರ ಸಂಘ ್ರ. ಆದರೆ ಸಜ್ಜೇಪಾಳ್ಯದ ಎರಡು ಸಾವಿರ ಕೋಟಿ ಾಯಿ ಬೆಲೆಬಾಳುವ ಸೊತ್ತಿತ್ತಲ್ಲ, ಅದೇ ಸಂಘಕ್ಕೂ ಿಗ ಜನಾಂಗಕ್ಕೂ ಶಾಪವಾಗಿ ಪರಿಣಮಿಸಿತು.

ಇವತ್ತು ಬೆಂಗಳೂರಿನ ಕಾಮಾಕ್ಷಿಪಾಳ್ಯ ಮತ್ತು ಗಾಳ ಏರಿಯಾಗಳಲ್ಲಿ ಅಡಿ ಭೂಮಿಯೊಂದಕ್ಕೆ ಯೆಂದರೂ ಹತ್ತು ಸಾವಿರ ಾಯಿ ಬೆಲೆಯಿದೆ. ಅಂದರೆ ಯೊಂದಕ್ಕೆ 25 ಕೋಟಿ. ಮಾಗಡಿ ರಸ್ತೆಗೆ ಹೊಂದಿಕೊಂಡಂತೆ ವಿಶಾಲ ಪ್ರದೇಶವೊಂದು ಕಾಣಿಸುತ್ತದೆ. ಸಜ್ಜೇಪಾಳ್ಯದ 96.23 ಎಕರೆ ಲಿಗರ ಸಂಘದ ಸೊತ್ತು. ಕ್ಷಿಪಾಳ್ಯದ ಶ್ರೀಮತಿ ರಂಗಮ್ಮ ಂವವರು ತಮ್ಮ ಪತಿ ಕೃಷ್ಣಪ್ಪನವರ ಲ್ಲಿ ಜನಾಂಗದ ಬಡಮಕ್ಕಳ ್ಯಾಸ, ವಸತಿ, ಸಮಾಜದ ಆರ್ಥಿಕ ಯಾಗಲೆಂದೇ 96.23 ಎಕರೆ ನನ್ನು 1978 ರಲ್ಲಿ ಸಂಘಕ್ಕೆಂದು ಕೊಟ್ಟಿದ್ದರು. ಅದಕ್ಕೆಂದು ತಮ್ಮ ಮಗ ಪುಟ್ಟಸ್ವಾಮಿ ಎಂಬಾತನನ್ನು ವಾರಿ ಮಾಡಿ ಸಂಘಕ್ಕೆ ಕೊಟ್ಟ ಸಾರ್ಥಕಪಡಿಸುವ ಎಲ್ಲಾ ತ್ನವನ್ನೂ ವಿಲ್ ಮೂಲಕ ಟ್ಟಿದ್ದರು.


ಶಿವಕುಮಾರ್


ರಮೇಶ್ ರಾಜು

ದರೆ ಕಾಲಕ್ರಮೇಣ ರಿಯಲ್ ್ ಖದೀಮರ ಕಣ್ಣು ಈ ಜಮೀನಿನ ಮೇಲೆ 96.23 ಎಕರೆಯಲ್ಲಿ ಸರಿಸುಮಾರು 52 ಳಷ್ಟನ್ನು ಬಿಜೆಪಿ ನಾಯಕ ಮತ್ತು ಮಾಜಿ ಮಂತ್ರಿ ಚಂದ್ರೇಗೌಡರ ಸಂಬಂಧಿಗಳು ಮತ್ತು ಇತರರು ಯಿಸಿದರು. ತಾವೇ ಇದರ ಸಾಗುವಳಿದಾರರೆಂದು ದಾಖಲೆ ಸೃಷ್ಟಿಸಿಕೊಂಡ ಕಾಮಾಕ್ಷಿಪಾಳ್ಯದ ಖದೀಮರ ಒಕ್ಕಲಿಗರ ಸಂಘದ ಆಗಿನ ಪದಾಧಿಕಾರಿಗಳಾಗಿದ್ದ ಗೌಡ ಮುಂತಾದವರು ಕೈಜೋಡಿಸಿದ ಫಲವಾಗಿ ಕರೆ ಕೈತಪ್ಪಿ ಹೋಯಿತು. ಹೀಗೆ ಕೈ ತಪ್ಪಿದ 52 ಲ್ಲಿ 20 ಎಕರೆ ದಯಾನಂದ ಪೈ ಮೂಲಕ ಸಾಲಾರ್‌ಪುರಿಯಾನ ಪಾಲಾದರೆ 22 ಎಕರೆಯ ಂದು ಭಾಗ ಮಾಜಿ ಉಪ ಮೇಯರ್ ಪುಟ್ಟರಾಜು ಕ ಯಲಹಂಕ ಬಿಜೆಪಿ ಶಾಸಕ ವಿಶ್ವನಾಥ್ ರೆಡ್ಡಿಯ ಯಿತು. ಇದರ ವಿರುದ್ಧ ಜನಾಂಗದ ಪರವಾಗಿ ಾಟಕ್ಕಿಳಿದವರು ಅಪ್ಪಾಜಿಗೌಡ. ಇವತ್ತಿಗೂ ಗಲೆಯುತ್ತಲೇ ಇದ್ದಾರೆ.

ಳಿಕೆ 44.36 ಎಕರೆಯಿತ್ತಲ್ಲ, ಅದನ್ನಾದರೂ ಕ್ಕಾಗಿ ಉಳಿಸಿಕೊಳ್ಳಬೇಕಿತ್ತಲ್ಲವೆ? 2001ರಲ್ಲಿ ಈ ಗೆ ತಾವೇ ನಿಜವಾದ ವಾರಸುದಾರರೆಂದು ತಗಾದೆ ರು ಮಲ್ಲತ್ತಹಳ್ಳಿ ಶಿವು ಅಲಿಯಾಸ್ ಮರಿಯಪ್ಪನ ಶಿವಕುಮಾರ್. ದಾನಿ ರಂಗಮ್ಮನ ಸಾಕುಮಗ ಿಯ ಪುತ್ರ ಮಹೇಂದ್ರ ಎಂಬಾತ ತಾನು ದೋ ಕಾಟಕ್ಕೆ ಯಾರ್ಯಾರಿಗೋ ಮಾರಿದಂತೆ ಕಳ್ಳ ಸೃಷ್ಟಿಸಿದ್ದ. ಮೇಲುಸ್ತುವಾರಿಗೆ ಮರಿಯಪ್ಪನಪಾಳ್ಯದ ರ್ ಈ ಸೊತ್ತಿಗೆ ಕೈಹಾಕಿದ್ದಾನಾದರೂ ಅದರ ಹಿಂದಿದ್ದದ್ದು ಜೆಡಿಎಸ್‌ನ ಬಿಬಿಎಂಪಿ ಸದಸ್ಯ ಜವರಾಯಿ ಗೌಡ. ಈತನ ಜೊತೆ ಜೆಡಿಎಸ್ ತಿರಸ್ಕೃತರಾದ ಚಲುವರಾಯಸ್ವಾಮಿ, ಮಾಗಡಿ ಬಾಲಕೃಷ್ಣ ಕಾಮಾಕ್ಷಿಪಾಳ್ಯದ ಗೋಪಾಲಯ್ಯ ಮುಂತಾದವರ ಕೂಟ ಕಾರ್ಯನಿರ್ವಹಿಸುತ್ತಿತ್ತು. 2001 ರಲ್ಲಿ ಕಣ್ಣಿಟ್ಟಿದ್ದ ಖದೀಮರೆಲ್ಲ ಸೇರಿಕೊಂಡು ಉಳಿಕೆ 44.36 ಎಕರೆಗೆ ತಾವೇ ಮಾಲೀಕರು ಎಂಬಂತೆ ಹೈಕೋರ್ಟಿನಲ್ಲೊಂದು ಕಲ್ಪಿತ ಕೇಸೊಂದನ್ನು ಹಾಕಿಬಿಟ್ಟರು. ಇದು ರಿಯಲ್ ಎಸ್ಟೇಟ್ ಖದೀಮರು ಮತ್ತು ಸಂಘದ ಘಾತುಕರೇ ಸೇರಿಕೊಂಡು ಹೆಣೆದ ಸಂಚಾಗಿತ್ತು. ಅಂದರೆ ಕಳ್ಳರು ಹಾಕಿದ ಕೇಸಿಗೆ ಸಂಘದ ಕಾರ್ಯದರ್ಶಿಯಿಂದಲೇ ಸಂಧಾನದ ಪ್ರತಿ ಅರ್ಜಿ ಸಲ್ಲಿಸುವುದು!

ಮತ್ತೆ ಬಂಡಾಯ

ಸಂಘವೇ ಮೇಲೆ ಬಿದ್ದು ತಾನು ಆರೆಕರೆ ಇಟ್ಟುಕೊಂಡು ಉಳಿದ 38 ಎಕರೆಯನ್ನು ಖದೀಮರಿಗೆ ಬಿಟ್ಟುಕೊಡುತ್ತದೆ ಎಂದರೆ ಯಾರಿಗೆ ಬೇಡ? ಮೊದಲೇ ಕೈತಪ್ಪಿದ 52 ಎಕರೆ, ಈಗ ಉಳಿಕೆ 44.36 ಎಕರೆಯೂ ಕೈತಪ್ಪುವ ಪರಿಸ್ಥಿತಿ ಅರ್ಥವಾಗಿದ್ದೇ ಅಪ್ಪಾಜಿಗೌಡರು ಕೋರ್ಟ್ ಮೆಟ್ಟಿಲೇರಿದ್ದಾರೆ.

ಹೈಕೋರ್ಟ್‌ನಲ್ಲಿ ಅವರ ಅರ್ಜಿ ಬಿದ್ದಿತ್ತಾದರೂ ಸುಪ್ರೀಂಕೋರ್ಟ್ ಅವರ ಮನವಿಯನ್ನು ಎತ್ತಿಹಿಡಿಯಿತು. ಇದರ ಫಲವಾಗಿ ಕೈ ತಪ್ಪಲಿದ್ದ 44.36 ಎಕರೆ ಸಂಘಕ್ಕೆ ಸೇರಿತ್ತು ಮಾತ್ರವಲ್ಲ ಅದಕ್ಕೂ ಹಿಂದೆ ನಕಲಿ ಗೇಣಿದಾರರ ಹೆಸರಲ್ಲಿ ಲಪಟಾಯಿಸಿದ್ದ 52 ಎಕರೆ ಮರುವಶಕ್ಕೂ ಅಪ್ಪಾಜಿಗೌಡರು ಕಾನೂನು ಕ್ರಮಕ್ಕಿಳಿದರು.

ಒಂದು ಹಂತದಲ್ಲಿ ಪ್ರೊ. ನಾಗರಾಜ್, ಅ. ದೇವೇಗೌಡ, ಎ. ಪ್ರಸಾದ್ ಥರದವರು ಸಜ್ಜೇಪಾಳ್ಯದ ಸೊತ್ತಿನ ಹೋರಾಟದಲ್ಲಿ ಅಪ್ಪಾಜಿಗೌಡರ ಜೊತೆಗಿದ್ದರೂ 2016 ರ ಹೊತ್ತಿಗೆ ಪರಿಸ್ಥಿತಿಯೇ ಬೇರೆಯಾಗಿತ್ತು, ರಿಯಲ್ ಎಸ್ಟೇಟ್ ಖದೀಮರು ಹೆಣೆದ ಷಡ್ಯಂತ್ರಕ್ಕೆ ಇವರುಗಳೂ ಬಲಿಯಾಗಿ ಹೋದರು. ತಾನು ಸಂಘದ ಅಧ್ಯಕ್ಷನಾಗುವುದಕ್ಕೂ ಮೊದಲೇ ಅಪ್ಪಾಜಿಗೌಡ ಸೊತ್ತು ಉಳಿಸಲು ಕೇಸು, ಕೋರ್ಟು ಅಂತಲೇ 30 ಲಕ್ಷಕ್ಕೂ ಅಧಿಕ ಹಣವನ್ನು ಕೈಯಾರೆ ವ್ಯಯಿಸಿದ್ದರು.

ಯಾವತ್ತು ಅಪ್ಪಾಜಿಗೌಡ ಜಗ್ಗುವ ಆಸಾಮಿಯಲ್ಲ ಎಂದು ಮನದಟ್ಟಾಯಿತೋ ನೆಲಕಂಟಕ ಶಿವಕುಮಾರ್ ಬ್ಲಾಕ್‌ಮೇಲ್ ತಂತ್ರಕ್ಕಿಳಿದಿದ್ದಾನೆ. ಎಷ್ಟೆಂದರೂ ಸಾವಿರ ಕೋಟಿಯ ಸೊತ್ತು. ಅದಕ್ಕೆಂದು ನೂರಿನ್ನೂರು ಕೋಟಿ ಕೈಬಿಟ್ಟರೂ ಲುಕ್ಸಾನಿಲ್ಲ. ಕಳೆದ ಬಾರಿಯೇ ಪ್ರತಿಯೊಬ್ಬ ನಿರ್ದೇಶಕನಿಗೆ ತಲಾ ಸೈಟು ಮತ್ತು 3 ಕೋಟಿಯ ಗಂಟನ್ನು ಶಿವಕುಮಾರ್ ಆಮಿಷವೊಡ್ಡಿದ್ದ. ಹಾಗಿದ್ದೂ ಬಹುತೇಕ ಕಾರ್ಯಕಾರಿ ಸದಸ್ಯರು ಅಪ್ಪಾಜಿಗೌಡರನ್ನೇ ಅಧ್ಯಕ್ಷರನ್ನಾಗಿಸಿ ಸಿಎನ್ ಬಾಲಕೃಷ್ಣರನ್ನು ಕಾರ್ಯಾಧ್ಯಕ್ಷರನ್ನಾಗಿ ಮಾಡಿದ್ದರು. ಉಲ್ಲೂರು ಮಂಜುನಾಥ ಪ್ರಧಾನ ಕಾರ್ಯದರ್ಶಿಯಾಗಿ, ಡಿಸಿಕೆ ಕಾಳೇಗೌಡರು ಖಜಾಂಚಿಯಾಗಿ, ಶಶಿಕಿರಣ್ ಹಾಗೂ ಪ್ರಸನ್ನ ಉಪಾಧ್ಯಕ್ಷರಾಗಿ ಸಂಘದ ಅಭಿವೃದ್ಧಿಯತ್ತ ತಲೆ ಕೆಡಿಸಿಕೊಂಡಿರುವಾಗಲೇ ಈಗ ಮತ್ತೊಮ್ಮೆ ಬಂಡಾಯ ಭುಗಿಲೆದ್ದಿದೆ. ಸಂಘದ ನೀತಿನಿಯಮಾವಳಿ ಯಾವುದಕ್ಕೂ ಇಲ್ಲಿ ಬೆಲೆಯಿಲ್ಲ. ಕೆಲವೇ ಮಂದಿ ರಿಯಲ್ ಎಸ್ಟೇಟ್ ಗೂಂಡಾಗಳು ಸೇರಿಕೊಂಡು ಇಡೀ ಜನಾಂಗದ ಸಂಸ್ಥೆಯನ್ನೇ ಹೈಜಾಕ್ ಮಾಡುವುದಾದರೆ ನೆಲದ ಕಾನೂನಿಗೇನು ಬೆಲೆ ಬಂತು? ಒಕ್ಕಲಿಗ ಸಮೂಹವಾದರೂ ಕೈಕಟ್ಟಿ ಕೂತಿರುವುದೇಕೆ? ಪ್ರತಿಯೊಬ್ಬರೂ ಒಕ್ಕಲಿಗರ ಭವಿಷ್ಯದೊಂದಿಗೆ ಚೆಲ್ಲಾಟವಾಡಲೇ ಬೇಕೆ?

■ ರಾ. ಸೋಮನಾಥ್

ಈ ಬಿಜೆಪಿಗಳ ಮನಸ್ಥಿತಿ ಏನು ಅಂದ್ರೇ!

ಥೂತ್ತೇರಿ

ಯಾಹೂ

ಕರ್ನಾಟಕದ ಜನಸ್ತೋಮ ರಾತ್ರಿ ಒಂಬತ್ತು ಗಂಟೆಗೆ ಎಡೆಮುರಿ ಕಟ್ಟಿ ಕೂರಿಸಿದಂತೆ ಟಿವಿ ಮುಂದೆ ಕೂರುತ್ತದೆ. ಆಗ ಬಿಗ್‌ಬಾಸ್ ಎಂಬ ಕಾರ್ಯಕ್ರಮದ ಎಪಿಸೋಡು ಬರುತ್ತದಂತಲ್ಲಾ, ಈ ಕಾರ್ಯಕ್ರಮದಲ್ಲಿ ಕಾಣಿಸಿಕೊಳ್ಳುವ ಪ್ರಥಮ್ ಎಂಬ ಹುಡುಗ ಬಿಜೆಪಿಗಳಿಗೆ ಬಹಳ ಪ್ರಿಯನಾದರೆ ಇನ್ನುಳಿದವರಿಗೆ ಸೈರಣೆಯ ಮಿತಿಯನ್ನು ಹಾಳು ಮಾಡುವಂತಹ ಸೈತಾನನಾಗಿದ್ದಾನಂತಲ್ಲಾ, ಅಂದಹಾಗೆ ಈತ ಇಲ್ಲಿ ಕಾಣಿಸಿಕೊಳ್ಳಲು ಶಿಫಾರಸ್ಸು ಮಾಡಿದವರು ನಮ್ಮ ಭಾವಿ ಮುಖ್ಯಮಂತ್ರಿಗಳಾದ ಈಶ್ವರಪ್ಪನಂತೆ. ಅಲ್ಲಿಗೆ ಈ ಹುಡುಗ ಬಿಜೆಪಿ ಮನಸ್ಥಿತಿಯವನೆಂದಾಯ್ತು.

ಬಿಜೆಪಿ ಮನಸ್ಥಿತಿ ಎಂದರೆ ಅವು ಪ್ರಜ್ಞಾವಂತರು ಹೇಳುವ ಯಾವುದನ್ನೂ ಒಪ್ಪಿಕೊಳ್ಳುವುದಿಲ್ಲ, ಬುದ್ಧಿ ವಿವೇಕ ಇರುವವರನ್ನು ಒಪ್ಪಿಕೊಳ್ಳುವುದಿಲ್ಲ, ಅವರ ಜೊತೆಯೂ ಇರುವುದಿಲ್ಲ, ಎದುರಿಗಿರುವವರಿಗೂ ಬಾಯಿ ಇದೆ ಎಂದು ತಿಳಿದಿರುವುದಿಲ್ಲ, ನಮ್ಮ ಮುಖದ ಮೇಲೆ ಎಂಜಲು ಹಾರುವಂತೆ ಮಾತನಾಡಿ ಹೊರಟುಹೋಗುತ್ತವೆ. ಅಲ್ಲಿ ಇರುವ ಅನಿವಾರ್ಯತೆ ಇದ್ದರೆ ಅಲ್ಲೆಲ್ಲೋ ಕುಳಿತಿರುತ್ತವೆ. ಮುಖ್ಯವಾಗಿ ಮೈಕು ಇದ್ದರೂ ಜೋರಾಗಿ ಕಿರುಚುತ್ತವೆ. ಭಾರತದ ಉದ್ವೇಗಲಕ್ಕೆ ಭಾಷಣ ಬಿಗಿಯುವ ಅಬಾಲವೃದ್ಧ ಚೆಡ್ಡಿಗಳೆಲ್ಲಾ ಜೋರಾಗಿ ಕಿರುಚುತ್ತವೆ. ಆ ಜನರ ಪ್ರಧಾನಿ ಕೂಡ ಮೆತ್ತಗೆ ಮಾತನಾಡಿದ ಉದಾಹರಣೆಯಿಲ್ಲ, ಅಗತ್ಯವಿಲ್ಲದಿದ್ದರೂ ಭಾರತ ಮಾತಾಕಿ ಜೈ ಎನ್ನುತ್ತವೆ. ಇಂತಹ ಎಲ್ಲ ಕಾಯಿಲೆಗಳೂ ಬಿಗ್‌ಬಾಸ್‌ನ ಪ್ರಥಮ್‌ನಲ್ಲಿ ಕಾಣಿಸಿಕೊಂಡಿದ್ದರಿಂದ ಇಡೀ ಬಿಜೆಪಿಗಳು ಪ್ರಥಮ್ ತಮ್ಮ ಪ್ರತಿನಿಧಿಯೆಂದು ಕೊಂಡಾಡುತ್ತಿವೆಯಂತಲ್ಲಾ, ಥೂತ್ತೇರಿ!!

* * *

ಈ ಬಿಜೆಪಿಗಳ ಮನೋಗತವನ್ನು ಇನ್ನೂ ವಿಶ್ಲೇಷಿಸಬೇಕಾದರೆ ಇವುಗಳು ಮೂಲತಃ ಪುಕ್ಕಲು ಮುಂಡೆವು. ಅದಕ್ಕೆ ಒಂದು ಲಾಠಿ ಹಿಡಿದಿರುತ್ತವೆ. ಒಬ್ಬೊಬ್ಬರೇ ಕಾಣಿಸಿಕೊಳ್ಳುವುದಿಲ್ಲ, ಒಬ್ಬೊಬ್ಬರೇ ಇರುವುದಿಲ್ಲ. ಇವುಗಳು ಈಚೆಗೆ ಸಾರ್ವಜನಿಕರ ಮೇಲೆ ಹಠಾತ್ತನೆ ದಾಳಿ ಮಾಡುವುದೂ ಭಯದಿಂದಲೇ. ದಾಳಿ ಮಾಡಿ ಬರುವ ಆಪತ್ತನ್ನು ಎದುರಿಸುವ ಧೈರ್ಯವಿಲ್ಲ, ಅದಕ್ಕೇ ಪರಾರಿಯಾಗುತ್ತವೆ. ಪರಾರಿಯಾಗಿ ಸುಮ್ಮನಿರುವುದಿಲ್ಲ, ಪ್ರಭಾವಿ ರಾಜಕಾರಣಿ ಅಥವಾ ಮಠಾಧಿಪತಿ ಹಿಡಿದುಕೊಂಡು ಪೊಲೀಸ್ ಮತ್ತು ನ್ಯಾಯಾಧೀಶರ ಮೇಲೆ ಪ್ರಭಾವ ಬೀರಿಸುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಸತ್ತರೂ ಸತ್ಯ ಒಪ್ಪಿಕೊಳ್ಳುವುದಿಲ್ಲ, ತಾನು ಮಾಡಿದ ಹಲ್ಲೆಯಿಂದ ಎದುರಾಳಿಗೆ ಗಾಯವಾಗಿದ್ದರೆ, "ಅದು ಅವನೇ ನನಗೆ ಹೊಡೆಯಲು ಬಂದು ಮಾಡಿಕೊಂಡ ಗಾಯ" ಎಂದು ವಾದಿಸುತ್ತವೆ. "ನೀನು ಹಲ್ಲೆ ಮಾಡಿದ್ದು ಸಿಸಿ ಕ್ಯಾಮರಾದಲ್ಲಿದೆ" ಎಂದರೆ, "ಆ ಸಿಸಿ ಕ್ಯಾಮರಾವೇ ಸರಿಯಿಲ್ಲ" ಎನ್ನುತ್ತವೆ. ತೀರಾ ಮೀರಿ ಎದುರಾಳಿಯ ನೈತಿಕತೆಯನ್ನು ಹಾಳು ಮಾಡಬೇಕಾದರೆ "ಆತ ನನ್ನ ಹೆಂಡತಿ ಕೆಡಿಸಲು ಬಂದಿದ್ದ" ಎನ್ನುತ್ತವೆ. "ನನ್ನ ತಂಗಿ ಕೆಡಿಸಲು ಬಂದಿದ್ದ" ಎನ್ನುತ್ತವೆ. ಇದಕ್ಕಾಗಿ ಆಣೆ ಪ್ರಮಾಣ ಮಾಡುತ್ತವೆ. ಯಾಕೆಂದರೆ ಸಾಮಾನ್ಯ ಜನ ಆಣೆ ಪ್ರಮಾಣ ನಂಬುವುದರಿಂದ. ಬಿಗ್‌ಬಾಸ್ ಮನೆಯಲ್ಲಿರುವ ಪ್ರಥಮ್ ಕೇವಲ ಸಂಕೇತ ಮಾತ್ರ. ಇವು ಭಾರತದ ತುಂಬಾ ಹರಡಿವೆ. ಆದ್ದರಿಂದ ಭಾರತವೇ ಗಂಡಾಂತರದಲ್ಲಿದೆಯಂತಲ್ಲಾ, ಥೂತ್ತೇರಿ!!

* * *

ಈ ಬಿಜೆಪಿಗಳ ಇನ್ನೊಂದು ವಿಶೇಷವೆಂದರೆ ಇವು ನಮ್ಮ ಇತಿಹಾಸವನ್ನು ಒಪ್ಪುವುದಿಲ್ಲ, ನಂಬುವುದೂ ಇಲ್ಲ; ಪುರಾಣವನ್ನು ನಂಬುತ್ತವೆ. ಅಲ್ಲದೆ ಹೊಸ ವಿಕೃತ ಇತಿಹಾಸವನ್ನೇ ಬರೆಯುತ್ತ ಕುಳಿತಿವೆ. ಈ ಬುದ್ಧಿಮಾಂದ್ಯರ ಗುರುವೇ ಚಿ.ಮೂ ಎಂಬ ವಿದ್ವಾಂಸ. ಈತನ ಮನೋರೋಗದ ಪರಿಣಾಮ ಎಷ್ಟು ಭೀಕರವಾಗಿ ಹಬ್ಬುತ್ತಿದೆಯೆಂದರೆ, ಚೆಡ್ಡಿಗಳ ಐದು ಮಾತಿನಲ್ಲಿ ಕನಿಷ್ಠ ನಾಲ್ಕು ಮಾತುಗಳು ಸಾಬರ ಟೀಕೆಗೆ ಮೀಸಲಿರುತ್ತವೆ. ಮೊದಲು ಅನ್ಯ ಕೋಮು ಎಂದು ಬಳಸುತ್ತಿದ್ದವರು ಈಗ ನೇರವಾಗಿ ಮುಸ್ಲಿಮರು ಎನ್ನುತ್ತಿವೆ. ಮುಸ್ಲಿಮರೇನು ಈ ಮಾತಿನಿಂದ ನೊಂದುಕೊಂಡಂತೆ ಕಾಣುತ್ತಿಲ್ಲ "ಮುಟ್ಟು ನೋಡನ" ಎನ್ನುವಂತೆ ತಯಾರಾಗಿದ್ದಾರೆ. ಚೆಡ್ಡಿಗಳಿಗೂ ಇದೇ ಬೇಕು. ಏಕೆಂದರೆ ಇವು ಸಾಬರನ್ನು ಕೆದಕಿ, ಕೆರಳಿಸಿ ಪರಾರಿಯಾಗುತ್ತವೆ. ಆಗ ಸಾಬರ ಕೈಗೆ ಸಿಕ್ಕ ಅಮಾಯಕ ಸಾಯುತ್ತಾನೆ. ಚೆಡ್ಡಿಗಳಿಗೆ ಬೇಕಿರುವುದೂ ಇದೆ. ಇಂತಹ ಕುತಂತ್ರಗಳಿಂದಲೇ ಭಾರತವನ್ನು ಆಕ್ರಮಿಸಲು ಹೊರಟ ಚೆಡ್ಡಿ ಗುಣಗಳ ಸಣ್ಣ ಸ್ಯಾಂಪಲ್ ತೋರಿದ ಪ್ರಥಮ್ ಗೆಲ್ಲಲು ಏನಾದರೂ ಮಾಡಲು ಹೇಸದವನು. ಇಂತವನ ಕೈಗೆ ಸಿಕ್ಕಿ ನರಳಿದ ಮಾಳವಿಕ ಯಾಕೋ ಭಾರತ ಮಾತೆಯಂತೆ ಕಂಡಳು. ಪ್ರಥಮ್‌ನ ಮಾತಿನಿಂದ ತಪ್ಪಿಸಿಕೊಳ್ಳಲು ಆಕೆ ಬಾತ್‌ರೂಮಿಗೆ ಹೋದರೂ ಆತ ಬಿಡಲಿಲ್ಲ, ಕಡೆಗೆ ಕಿವಿ ಕೇಳಿಸದಂತೆ ಹೊಯ್ದು ಮಲಗಿದಳು. ಧ್ಯಾನ ಮಾಡಿದಳು. ಈ ಇಬ್ಬರಿಂದಲೇ ಭಾರತ ದರ್ಶನ ಮಾಡಿಸಿದ ಬಿಗ್‌ಬಾಸ್‌ಗೆ ಧನ್ಯವಾದ ಹೇಳದೆ ಇರಲಾದೀತೆ, ಥೂತ್ತೇರಿ!!

* * *

ಬಿಗ್‌ಬಾಸ್‌ಗೆ ಬಂದು ಅಕಸ್ಮಾತ್ ಇಂತವನು ಮನೆಯಲ್ಲಿದ್ದರೆ, ಊರಲ್ಲಿದ್ದರೆ ಅಥವಾ ರಾಜಕಾರಣಿಯಾಗಿ ನಮ್ಮನ್ನು ಆಳುವವನಾದರೆ ಏನು ಮಾಡಬೇಕೆಂಬ ಆತಂಕ ಸೃಷ್ಟಿಸಿರುವ ಪ್ರಥಮ್‌ನ ಗುರುವಾದ ಭಾವಿ ಮುಖ್ಯಮಂತ್ರಿ ಈಶ್ವರಪ್ಪನನ್ನು ಮಾತನಾಡಿಸಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಓಂ ಪೇಜಾವರಾಯ ನಮಃ ಓಂ ಶ್ರೀ...!"

"ಹಲೋ ಯಾರು?"

"ನಾನು ಸಾರ್ ಯಾಹು."

"ಏನ್ರಿ ಯಾಹು?"

"ಚೆನ್ನಾಗಿದ್ದಿರ ಸಾರ್?"

"ನನಿಗೇನು, ಗುಂಡುಕಲ್ಲಿನಂಗಿದ್ದಿನಿ."

"ಅದಕ್ಕಿಂತ ಟಗರಿದ್ದಂಗಿದ್ದಿನಿ ಅನ್ನಬಹುದಲ್ಲ ಸಾರ್."

"ಅನ್ನಬವುದು, ಕೋಡಿಲ್ವಲ್ಲ."

"ಒಂದಿದಿಯಲ್ಲ ಸಾಕು ಬುಡಿಸಾ."

"ಒಳ್ಳೆ ಜೋಕು. ಏನು ವಿಷಯ?"



"ಭಾವಿ ಮುಖ್ಯಮಂತ್ರಿಗಳಿಗೆ ಅಭಿನಂದನೆ."

"ಥ್ಯಾಂಕ್ಸ್! ನಿಮ್ಮ ಬಾಯಿ ಮಾತಿನಿಂದ ಅದು ಆಗಬಹುದು."

"ಆಗದೇನು ಆಗೇ ಆಗ್ತಿರಿ ಸಾರ್. ಉಪಮುಖ್ಯಮಂತ್ರಿ ಆದಮೇಲೆ ಮುಖ್ಯಮಂತ್ರಿ ಆಗ್ಲೇಬೇಕಲ್ಲವ ಸಾರ್."

"ಮುಂದೆ ನಾವು ಇಡತಾಯಿರೊ ಡಿಮ್ಯಾಂಡೇ ಅದು."

"ಅದು ಸರಿ ಸಾರ್. ನೀವು ಆ ಶೆಟ್ಟರ್, ಸದಾನಂದರಿಗೆ ಯಾವುದರಲ್ಲಿ ಕಡಿಮೆಯಿದ್ದಿರಿ? ನಿಮ್ಮಂಥೋರು ಒಂದು ಸತಿ ಆಗಬೇಕು ಸಾರ್."

"ಆಗೇ ಆಗ್ತಿನಿ ಕಂಡ್ರಿ."

"ಆದ ಮೇಲೆ ಏನು ಮಾಡ್ತಿರಿ ಸಾರ್?"

"ನಿಮ್ಮಲ್ಲೆ ಇರ್ಲಿ. ಯಾರಿಗೂ ಹೇಳಬೇಡಿ. ಮೊದ್ಲು ಎಡೂರಪ್ಪನ್ನ ಪಾರ್ಟಿಯಿಂದ ತಗದಾಕ್ತಿನಿ!"

"ಅಂಗೆ ಮಾಡಿದ್ರೆ ಕೂಡ್ಲೆ ನಿಮ್ಮ ಸರಕಾರ ಹೋಯ್ತದಲ್ಲ ಸಾರ್?"

"ಏನು ಅಗಲ್ಲ, ದೇವೇಗೌಡ್ರು ಪ್ರಧಾನಿಯಾದ ಕೂಡ್ಲೆ ರಾಮಕೃಷ್ಣ ಹೆಗಡೆನ ತಗದಾಕಲಿಲ್ವ."

"ನೀವು ಅಂಗೆ ಮಾಡಿದ್ರೆ ಎಡೂರಪ್ಪನ ಕಡಿಯೋರು ಅವ್ರುರ ಜೊತೆ ಹೋಯ್ತರೆ."

"ಅದ್ಯಂಗೋಯ್ತರೆ?"

"ಎಡೂರಪ್ಪ ಕೆ.ಜೆ.ಪಿಲಿದ್ದೋರಿಗೆ ಟಕೆಟ್ ಕೊಟ್ಟಿರತರೆ ಅದ್ಕೆ."

"ಕೆ.ಜೆ.ಪಿ ಅಂತ ಏನೂ ಇಲ್ಲ, ಬಿಜೆಪಿ ಟಿಕೆಟ್ ಮೇಲೆ ಅವ್ರುರು ಗೆದ್ದು ಬಂದಿರತರೆ."

"ನೀವೇ ಗೆದ್ದು ಬಂದಿರಲ್ಲವಲ್ಲ ಸಾರ್."

"ಯಾಕೆ?"

"ಶಿವಮೊಗ್ಗದ ಲಿಂಗಾಯತ್ರು ನಿಮಿಗಾಗ್ಲೆ ಒಂದು ಗತಿ ಕಾಣಸಕ್ಕೆ ರೆಡಿಯಾಗ್ಯವುರೆ."

"ಅಂಗಾದ್ರೆ ಕ್ಷೇತ್ರನೆ ಬದ್ಲಾಯಿಸ್ತೀನಿ."

"ಥೂತ್ತೇರಿ!!!" ■

ಪ್ರಸಾದ್‌ಗೆ ಮಣ್ಣು ಮುಕ್ಕಿಸಲು ಕಾಂಗ್ರೆಸ್ ಕಸರತ್ತು

ಕಾಂಗ್ರೆಸ್ ಗೂಡಿನಲ್ಲಿ ಬೆಚ್ಚಗಿದ್ದ ಶ್ರೀನಿವಾಸ್‌ಪ್ರಸಾದ್ ಎಂಬ ಹಕ್ಕಿ ರೆಕ್ಕೆಪುಕ್ಕ ಕಿತ್ತುಕೊಂಡು ಗೂಡಿನಿಂದ ಆಚೆ ಬಂದು "ಸ್ವಾಭಿಮಾನವನ್ನು ಉಳಿಸಿಕೊಳ್ಳಲು ಸ್ವಾಭಿಮಾನಕ್ಕೆ ಬೆಲೆಕೊಡುವ ಗೂಡೊಂದಿದೆ, ಅದರಲ್ಲಿ ನನ್ನ ಸ್ವಾಭಿಮಾನಕ್ಕೆ ತಕ್ಕ ಬೆಲೆ ಸಿಗುತ್ತದೆ" ಎಂದು ಬಿಜೆಪಿಯತ್ತ ಹಾರಿದೆ.

ಈ ಮೊದಲೇ ನಿರ್ಧರಿಸಿದ್ದಂತೆ, ಜನರ ನಿರೀಕ್ಷೆಯಂತೆ ಶ್ರೀನಿವಾಸ್‌ಪ್ರಸಾದ್ ಬಿಜೆಪಿಗೆ ಸೇರ್ಪಡೆಗೊಂಡು ಅಲ್ಲಿನ ನಾಯಕರ ತೆಕ್ಕೆಯಲ್ಲಿ ಸುಖದ ಕನಸು ಕಾಣುತ್ತಿದ್ದಾರೆ.


ಕಾಂಗ್ರೆಸ್ ಪಕ್ಷ ತೊರೆದ ನಂತರ ಬಿಜೆಪಿ ಸೇರಲು ಅವರು ಕೊಡುತ್ತಿರುವ ಕಾರಣಗಳು ಒಂದೇ ಎರಡೇ. ಮೋದಿಯವರ ಸ್ವಚ್ಛ ಭಾರತ ಹಾಗೂ ಮನ್ ಕಿ ಬಾತ್ ಅವರಿಗೆ ತುಂಬಾ ಇಷ್ಟವಾಯಿತಂತೆ. ಇದು ಇಡೀ ದೇಶವನ್ನೇ ಒಂದು ಮಾಡುವುದರ ಸಂಕೇತವಂತೆ. ದೇಶವೇ ಒಂದುಗೂಡಿದರೆ ಅಂತಹ ದೇಶದ ಅಭಿವೃದ್ಧಿಯನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲವಂತೆ. ದಲಿತರು ಮತ್ತು ಹಿಂದುಳಿದವರು ಬೆಂಬಲಿಸದೇ ಇದ್ದರೆ ಪಾರ್ಲಿಮೆಂಟ್‌ನಲ್ಲಿ ಬಿಜೆಪಿ ಅಷ್ಟೊಂದು ಬಹುಮತ ಗಳಿಸಲು ಸಾಧ್ಯವಾಗುತ್ತಿರಲಿಲ್ಲಂತೆ. ಇದೆಲ್ಲಕ್ಕಿಂತ ಹೆಚ್ಚಾಗಿ ತಾವು ನರೇಂದ್ರ ಮೋದಿಯವರ ಆಡಳಿತ ವೈಖರಿಯನ್ನು ಹೊಗಳಿದ್ದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಸಾದ್‌ರನ್ನು ಸಚಿವ ಸಂಪುಟದಿಂದ ತೆಗೆದು ಹಾಕಿದರಂತೆ. ಅಷ್ಟೇ ಅಲ್ಲ, "ನಾನು ರಾಜೀನಾಮೆ ಕೊಟ್ಟ ಮೇಲೆ ತಿಂಗಳಾನುಗಟ್ಟಲೇ ಕ್ಷೇತ್ರದ ಮತದಾರರ ಜತೆ ಸಮಾಲೋಚಿಸಿದ್ದೇನೆ. ಅವರ ಒಕ್ಕೊರಲಿನ ಅಭಿಪ್ರಾಯದಂತೆ ಬಿಜೆಪಿ ಸೇರಿದ್ದೇನೆ" ಎಂದೂ ಹೇಳುತ್ತಿದ್ದಾರೆ. ಜೊತೆಗೆ, ಬಿಜೆಪಿ ಸೇರ್ಪಡೆಯಾದ ದಿನ ತಮ್ಮ ಭಾಷಣದಲ್ಲಿ 'ಪೊರಕೆ ಹಿಡಿಯುವುದೇ ಅಪಮಾನ ಎಂಬ ಕಾಲದಲ್ಲಿ ಇಡೀ ದೇಶದ ಜನರ ಕೈಗೆ ಪೊರಕೆ ಬರುವಂತೆ ಮಾಡಿದ ಪ್ರಧಾನಿ ನರೇಂದ್ರ ಮೋದಿ ಅವರ ನಡೆ ನನಗೆ ಇಷ್ಟವಾಯಿತು' ಎಂದಿದ್ದಾರೆ. ಈ ಕಾರಣಕ್ಕೇ ಅವರು ಹಿಂದೆಮುಂದೆ ನೋಡದೆ ಬಿಜೆಪಿ ಸೇರಿಬಿಟ್ಟರಂತೆ. ಅರ್ಥಾತ್, ಪ್ರಸಾದ್ ಅವರು ತಮ್ಮ ಬೆಂಬಲಿಗರು, ಕಾರ್ಯಕರ್ತರು ಸೂಚಿಸಿದಂತೆ ಬಿಜೆಪಿ ಸೇರ್ಪಡೆಗೊಳ್ಳಲಿಲ್ಲ, ಬದಲಾಗಿ ಹಿಂದೆ ಮುಂದೆ ನೋಡದೆ ಮೋದಿ ಭ್ರಮೆಯಲ್ಲಿ ಬಿಜೆಪಿ ಸೇರಿದರು ಎಂಬುದು ಖಚಿತವಾಗಿದೆ.

"ನೀನು ಯಾಕಪ್ಪ ಬಿಜೆಪಿ ಸೇರಿದೆ. ನಿನ್ನ ತತ್ವ ಸಿದ್ಧಾಂತ ಏನಾಯಿತಪ್ಪ? ಎಲ್ಲ ಸ್ವಾರ್ಥ ರಾಜಕಾರಣಿಗಳಂತೆ ನೀವೂ ನಿಮ್ಮ ಸ್ವಾರ್ಥ ರಾಜಕಾರಣಕ್ಕಾಗಿ ನಿಮ್ಮನ್ನು ನಂಬಿದ್ದ ದಲಿತ ಜನರನ್ನು ಬಲಿಕೊಟ್ಟಿರಿ" ಎಂದು ಕೆಲವರು ಕೇಳಬಹುದು. ಜೊತೆಗೆ "ನಿಮ್ಮ ಸ್ವಾಭಿಮಾನಕ್ಕೆ ಕಾಂಗ್ರೆಸ್‌ನಲ್ಲಿ ಧಕ್ಕೆಯುಂಟಾಯಿತು ಎಂದಾದರೆ ಬಿಜೆಪಿ ಸೇರಿ ಅಲ್ಲಿ ನೀವೇ ನಿಮ್ಮ ಸ್ವಾಭಿಮಾನಕ್ಕೆ ಧಕ್ಕೆ ತಂದುಕೊಳ್ಳುತ್ತಿದ್ದೀರಲ್ಲ" ಎಂದೂ ಕೇಳಬಹುದು. ಇಂತಹ ಪ್ರಶ್ನೆಗಳಿಂದ ಬಚಾವಾಗಲು 2017ರ ಜನವರಿ 2ರಂದು ಬೆಂಗಳೂರಿನಲ್ಲಿ ಬಿಜೆಪಿಗೆ ಸೇರ್ಪಡೆಗೊಂಡ ದಿನದಂದು ಸ್ವತಃ ಪ್ರಸಾದ್ ಅವರು ಹೇಳಿದ ಮಾತನ್ನು ಕೇಳಿ: "ನನಗೆ ಇಲ್ಲಿ ಯಾವುದೇ ಸ್ಥಾನಮಾನ ಬೇಕಿಲ್ಲ, ಸ್ವಾಭಿಮಾನದಿಂದ ನೆಮ್ಮದಿಯಿಂದ ನಿವೃತ್ತನಾಗಲು ಅವಕಾಶ ಮಾಡಿಕೊಟ್ಟರೆ ಸಾಕು."

ಶ್ರೀನಿವಾಸ್ ಪ್ರಸಾದ್ ಅವರಿಗೆ ಬಿಜೆಪಿಯಲ್ಲಿ ಯಾವುದೇ ಸ್ಥಾನಮಾನ ಬೇಡ; ಅವರು ನೆಮ್ಮದಿಯಿಂದ ನಿವೃತ್ತನಾಗಲು ಬಿಜೆಪಿ ಅವಕಾಶ ಮಾಡಿಕೊಟ್ಟರೆ ಸಾಕು ಎಂದು ಜನ ನಂಬಬೇಕು ಎಂಬುದು ಅವರ ಇಂಗಿತ ಎಂದಾಯಿತು. ಇದೆಲ್ಲಾ ಪ್ರಸಾದ್ ಅವರಿಗೆ ಬೇಕಿತ್ತೆ ಇದನ್ನೆಲ್ಲ ನೋಡಿದರೆ ಬಿಜೆಪಿಯವರು ಪ್ರಸಾದ್ ಅವರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲು ಹೆಚ್ಚು ಆಸಕ್ತಿ ತೋರಿದ್ದಕ್ಕಿಂತ ಸ್ವತಃ ಪ್ರಸಾದ್ ಅವರೇ ಬಿಜೆಪಿಯವರನ್ನು 'ನನಗೊಂದು ಅವಕಾಶ ಕೊಡಿ' ಎಂದು ಬೇಡಿಕೊಂಡಿದ್ದರು ಅನ್ನಿಸುವುದಿಲ್ಲವೆ.

ಅದೇನೇ ಇರಲಿ, ಪ್ರಸಾದ್ ಅವರ ಕೈ ಸೋಲುವ ತನಕವೂ ಅವರು ರಾಜಕಾರಣದಲ್ಲಿ ಮುಂದುವರಿಯುತ್ತಾರೆ ಎನ್ನುವುದು ಖಚಿತ. ಅದಕ್ಕಾಗಿ ನಂಜನಗೂಡು ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ ಅಖಾಡ ಸಿದ್ಧವಾಗಿ ತೊಡೆತಟ್ಟಿದ್ದಾರೆ. ಅವರು ಬಿಜೆಪಿ ಅಭ್ಯರ್ಥಿಯಾಗಿ ಕಣದಲ್ಲಿರುವುದು ನಿಚ್ಚಳವಾಗಿದೆ. ಅವರನ್ನು ಶತಾಯಗತಾಯ ಗೆಲ್ಲಿಸಲೇಬೇಕೆಂಬುದು ಬಿಜೆಪಿಯ ಒಕ್ಕೊರಲ ನುಡಿ. ಯಾಕೆಂದರೆ ಪ್ರಸಾದ್ ಅವರನ್ನು ನಂಜನಗೂಡು ಉಪ ಚುನಾವಣೆಯಲ್ಲಿ ಗೆಲ್ಲಿಸಿಕೊಂಡುಬಿಟ್ಟರೆ ಮೈಸೂರು ಭಾಗವನ್ನು ಬಿಜೆಪಿ ಹಿಡಿತಕ್ಕೆ ತೆಗೆದುಕೊಳ್ಳಲು ಹೆಬ್ಬಾಗಿಲು ತೆರೆದಂತೆ ಎಂಬುದು ಬಿಜೆಪಿಯವರ ನಂಬಿಕೆ. ಎಲ್ಲಕ್ಕಿಂತ ಹೆಚ್ಚಾಗಿ ಇದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಲೆಕ್ಕಾಚಾರ. ಅದಕ್ಕಾಗಿಯೇ ಅವರು ಪಕ್ಷಕ್ಕಿಂತಲೂ ಹೆಚ್ಚಾಗಿ ಪ್ರಸಾದ್ ಅವರನ್ನು ಪಕ್ಷಕ್ಕೆ ಕರೆತರಲು ಮುತುವರ್ಜಿ ವಹಿಸಿದ್ದು, ಯಾಕೆಂದರೆ ಈ ಲೆಕ್ಕಾಚಾರದಲ್ಲಿ ಯಡಿಯೂರಪ್ಪ ಅವರಿಗೆ ಹೆಚ್ಚು ಲಾಭವಿದೆ.

ಒಂದುವೇಳೆ ಯಡಿಯೂರಪ್ಪ ಅವರ ಲೆಕ್ಕಾಚಾರದಂತೆ



ಶ್ರೀನಿವಾಸ್‌ಪ್ರಸಾದ್

ನಂಜನಗೂಡು ವಿಧಾನ ಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಶ್ರೀನಿವಾಸ್‌ಪ್ರಸಾದ್ ಅವರನ್ನು ಗೆಲ್ಲಿಸಿಕೊಂಡರೆ ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ದಾರಿ ಸುಗಮ ಮಾಡಿಕೊಳ್ಳಬಹುದು. ಅದೂಅಲ್ಲದೆ ಇತ್ತೀಚೆಗೆ ಚಾಮರಾಜನಗರ ಜಿಲ್ಲೆಯ ಪ್ರಭಾವಿ ನಾಯಕರಾಗಿದ್ದ ಸಚಿವ ಎಚ್.ಎಸ್.ಮಹದೇವ ಪ್ರಸಾದ್ ಅವರು ನಿಧನರಾಗಿದ್ದರಿಂದ ಆ ಭಾಗದಲ್ಲಿ ಮತ್ತೊಬ್ಬ ಪ್ರಭಾವಿ ಲಿಂಗಾಯತ ನಾಯಕ ಸದ್ಯಕ್ಕೆ ಮರ್ಜ್ ಆಗುವುದು ಸುಲಭದ ಮಾತಲ್ಲ. ಹಾಗಾಗಿ ಇಂತಹ ಸುಸಂದರ್ಭವನ್ನು ಯಡಿಯೂರಪ್ಪ ಅವರು ಬಳಸಿಕೊಳ್ಳಲಾರದೆ ಇರಲಾರರು.

ಅದೂಅಲ್ಲದೆ ಯಡಿಯೂರಪ್ಪ ಲಿಂಗಾಯತ ಕೋಮಿನ ನೆಚ್ಚಿನ ನಾಯಕ ಎಂಬುದು ಎಲ್ಲರಿಗೂ ತಿಳಿದ ವಿಚಾರವೆ. ಇನ್ನೂ ಮುಂದೆ ಯೋಚಿಸಬೇಕೆಂದರೆ ಸುತ್ತೂರು ಮಠದ ಕೃಪಾಕಟಾಕ್ಷ ಇರುವ ಯಡಿಯೂರಪ್ಪ ಅವರಿಗೆ ಲಿಂಗಾಯತ ಕೋಮಿನ ಸಪೋರ್ಟ್ ಇದ್ದೇ ಇರುತ್ತದೆ. ಇನ್ನು ಶ್ರೀನಿವಾಸ ಪ್ರಸಾದ್ ಅವರ ಬಿಜೆಪಿ ಆಗಮನದಿಂದ ದಲಿತ ಮತಗಳು ಸ್ವಲ್ಪಮಟ್ಟಿಗೆ ಬಿಜೆಪಿ ಪಾಲಾಗುತ್ತವೆ. ಇದರ ಜೊತೆಗೆ ಇನ್ನೊಂದಷ್ಟು ಎಫರ್ಟ್ ಹಾಕಿದರೆ- ಅಂದರೆ ಶ್ರೀನಿವಾಸ್‌ಪ್ರಸಾದ್ ಅವರನ್ನು ಸಂಪುಟದಿಂದ ತೆಗೆದುಹಾಕಿರುವ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಪಕ್ಷ ದಲಿತ ವಿರೋಧಿಗಳು; ಆ ಕಾರಣಕ್ಕಾಗಿಯೇ ಶ್ರೀನಿವಾಸ ಪ್ರಸಾದ್ ಅವರಿಂದ ಅಧಿಕಾರವನ್ನು ಕಿತ್ತುಕೊಂಡರು ಎಂದು ಅಮಾಯಕ ದಲಿತರ ಕಿವಿ ಊದಿದರೆ ಇನ್ನಷ್ಟು ದಲಿತ ಮತಗಳು ಸಹಜವಾಗಿ ಬಿಜೆಪಿ ಮತಗಳಾಗಿ ಬದಲಾವಣೆಯಾಗುತ್ತವೆ ಎಂಬುದು ಸರಳ ಸತ್ಯ. ಇದೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿರುವ ಯಡಿಯೂರಪ್ಪ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಮುಂದಾಗಿದ್ದಾರೆ.

ಇನ್ನು ತನ್ನ ತವರು ಮಂಡ್ಯ ಜಿಲ್ಲೆಯ ಜನ ತನಗೆ ಆಶೀರ್ವಾದ ನೀಡಿದರೆ ತಾನು ಮತ್ತೊಮ್ಮೆ ಮುಖ್ಯಮಂತ್ರಿ ಆಗುತ್ತೇನೆ ಎಂದು ಅಲ್ಲಿನ ಮತದಾರರಿಗೆ ಮಸ್ಕಾ ಹೊಡೆದು ಅಲ್ಲೊಂದು ಸೀಟು ಹೊಡೆಯಬಹುದು. ತನ್ನ ಸ್ವಕ್ಷೇತ್ರ ಶಿವಮೊಗ್ಗದಲ್ಲಿ ಒಂದಷ್ಟು ಸರ್ಕಸ್ ಮಾಡಿದರೆ ತನ್ನನ್ನು ಹಳಿಯಲು ರಾಯಣ್ಣ ಬ್ರಿಗೇಡ್ ರಚಿಸಿರುವ ಈಶ್ವರಪ್ಪನಲ್ಲ ಅವರಪ್ಪ ಬಂದರೂ ಸಾಧ್ಯವಿಲ್ಲ ಎಂಬುದನ್ನು ಸಾಬೀತುಪಡಿಸಬಹುದು ಎಂಬುದು ಯಡ್ಡಿ ಸರ್ಕಸ್.


ಯಡ್ಡಿಯ ಈ ಪ್ಲಾನನ್ನು ತಲೆಕೆಳಗು ಮಾಡಿ ತನ್ನ ಗೂಡಿಂದ ಹಾರಿಹೋದ ಹಕ್ಕಿ ಶ್ರೀನಿವಾಸ್‌ಪ್ರಸಾದ್ ಹಾಗೂ ಯಡ್ಡಿ ಇಬ್ಬರಿಗೂ ಹರಿಶಿವ ಅಂತ ಮಣ್ಣು ಮುಕ್ಕಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಪಟಾಲಂಗೆ ಟ್ರೈನಿಂಗ್ ಕೊಟ್ಟು ಅಖಾಡವನ್ನು ಜಬರ್‌ದಸ್ತಾಗಿ ಸಿದ್ಧಗೊಳಿಸುತ್ತಿದ್ದಾರೆ. ಅಖಾಡದಲ್ಲಿ ಪ್ರಸಾದ್‌ಗೆ ಮಣ್ಣು ಮುಕ್ಕಿಸುವ ಜಗಜಟ್ಟಿ ಮಲ್ಲನನ್ನು ಹುಡುಕಾಡುತ್ತಿದ್ದಾರೆ. ಆದರೆ ಅದೇಕೋ ಸಿದ್ದರಾಮಯ್ಯ ಅವರ ಕಣ್ಣಿಗೆ ಪ್ರಸಾದ್ ವಿರುದ್ಧ ತೊಡೆ ತಟ್ಟುವ ಕಲಿಗಳು ಇನ್ನೂ ಕಂಡಂತೆ ಇಲ್ಲ.

ಸಿದ್ದರಾಮಯ್ಯ ಈ ಅಖಾಡವನ್ನು ಉಡಾಫೆಯಾಗಿ ತೆಗೆದುಕೊಂಡಿದ್ದರೆ ಇಷ್ಟೊತ್ತಿಗಾಗಲೇ ಅಭ್ಯರ್ಥಿಗಳು ಸಿಕ್ಕಿಬಿಡುತ್ತಿದ್ದರೇನೋ. ಆದರೆ ಸಿದ್ದರಾಮಯ್ಯ ಮತ್ತು ಅವರ ಗುಂಪಿಗೆ ನಂಜನಗೂಡು ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಗೆಲುವು ಪ್ರತಿಷ್ಠೆಯ ವಿಷಯವಾಗಿರುವುದರಿಂದ ಗೆಲ್ಲುವ ಸೂಕ್ತ ಅಭ್ಯರ್ಥಿಯ ತೀವ್ರ ಹುಡುಕಾಟದಲ್ಲಿದ್ದಾರೆ.

ಅದಕ್ಕಾಗಿ ಇದೇ ಮೊದಲ ಬಾರಿಗೆ ನಂಜನಗೂಡು ಉಪಚುನಾವಣೆಯ ಒಂದು ಕ್ಷೇತ್ರದ ಅಭ್ಯರ್ಥಿಯನ್ನು ಆಯ್ಕೆ ಮಾಡಲು, ಅಂದರೆ ಸೂಕ್ತ ಗೆಲ್ಲಬಲ್ಲ ವ್ಯಕ್ತಿಯನ್ನು ಆರಿಸಲು, ಕೆಪಿಸಿಸಿ ಉಪಾಧ್ಯಕ್ಷ ಎಲ್.ಹನುಮಂತಯ್ಯ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ, ಸಮಿತಿಯ ವರದಿಯನ್ನಾಧರಿಸಿ ಅಭ್ಯರ್ಥಿ ಹೆಸರು ಅಂತಿಮಗೊಳಿಸಲು ನಿರ್ಧರಿಸಿದ್ದಾರೆ. ಹನುಮಂತಯ್ಯ ನೇತೃತ್ವದ ಸಮಿತಿ ಯಾರನ್ನು ಶಿಫಾರಸು ಮಾಡುತ್ತದೋ ಅವರನ್ನು ನಂಜನಗೂಡು ಉಪ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿಸಲು ನಿರ್ಧರಿಸಿದ್ದಾರಂತೆ.

ಹೀಗಾಗಿ ಅಭ್ಯರ್ಥಿಗಳ ಆಯ್ಕೆಯ ವಿಚಾರದಲ್ಲಿ ಖುದ್ದು ಮುತುವರ್ಜಿ ವಹಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅವರ ಮೈಸೂರು ಮನೆಯಲ್ಲಿ ಕಳೆದ ಗುರುವಾರ ರಹಸ್ಯ ಸಭೆಯೊಂದನ್ನು ಆಯೋಜಿಸಲಾಗಿತ್ತು. ಆ ಸಭೆ ಕೇವಲ ಕಾಂಗ್ರೆಸ್ ನಾಯಕರ ಸಭೆಯಲ್ಲ, ಮಂತ್ರಿಗಳ, ಶಾಸಕರ ಸಭೆಯಲ್ಲ, ನಂಜನಗೂಡು ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ, ಮುಖಂಡರ ಸಭೆ.

ಸುಮಾರು ಮೂರ್ನಾಲ್ಕು ಗಂಟೆಗಳ ಕಾಲ ಸುದೀರ್ಘ ಸಭೆ ನಡೆಸಿದ ಸಿದ್ದರಾಮಯ್ಯ ಮೊದಲಿಗೆ ಕೆಲವೇ ನಾಯಕರೊಂದಿಗೆ ಗುಪ್ತ ಸಭೆ ನಡೆಸಿ ಅಭಿಪ್ರಾಯಗಳನ್ನು ಸಂಗ್ರಹಿಸಿದರು. ಎಲ್.ಹನುಮಂತಯ್ಯ ನೇತೃತ್ವದ ಮೂವರು ವೀಕ್ಷಕರ ಎದುರು ಅಭ್ಯರ್ಥಿಯಾಗಲು ಮಾನದಂಡಗಳು, ಅಭ್ಯರ್ಥಿಯ ಹಿನ್ನೆಲೆ, ಜಾತಿವಾರು ಲೆಕ್ಕಾಚಾರ- ಹೀಗೆ



ಧ್ರುವ ನಾರಾಯಣ್

ಎಲ್ಲ ಅಂಶಗಳನ್ನು ಮುಂದಿಟ್ಟುಕೊಂಡು ಆಯಾ ಗ್ರಾಮ ಪಂಚಾಯತಿ ಲೆವೆಲ್ ಲೀಡರ್‌ಗಳೊಂದಿಗೆ ನಂತರ ನಿಗಮ ಮಂಡಳಿ ಅಧ್ಯಕ್ಷರು, ಕಾಂಗ್ರೆಸ್ ಅಧ್ಯಕ್ಷರೊಂದಿಗೆ ಮಾತುಕತೆ ನಡೆಸಿದ್ದಾರೆ.

ನಂಜನಗೂಡು ತಾಲ್ಲೂಕಿನ ಬೇರೆ ಬೇರೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಸುಮಾರು 300ರಿಂದ 400 ಲೋಕಲ್ ಲೀಡರ್‌ಗಳನ್ನು ಮನೆಗೆ ಕರೆಸಿಕೊಂಡಿದ್ದ ಸಿದ್ದರಾಮಯ್ಯ ಒಂದೊಂದು ಗ್ರಾಮ ಪಂಚಾಯತಿ ವ್ಯಾಪ್ತಿಯ ಒಂದೊಂದೇ ತಂಡವನ್ನು ಪ್ರತ್ಯೇಕವಾಗಿ ಮಾತನಾಡಿಸಿ, ಚರ್ಚಿಸಿ ಎಲ್ಲರಿಂದ ಅಭಿಪ್ರಾಯ ಪಡೆದಿದ್ದಾರೆ. ಇದಲ್ಲದೆ ಜಿ.ಪಂ. ಸದಸ್ಯೆ ಹಾಗೂ ಮಾಜಿ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ಮಾಜಿ ಸದಸ್ಯ ಕೆ.ಬಿ.ಸ್ವಾಮಿ, ಕೆಪಿಸಿಸಿ ಸದಸ್ಯ ತಮ್ಮಣ್ಣೇಗೌಡ, ತಾಲ್ಲೂಕು ಪಂಚಾಯತಿ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಆಶ್ರಯ ಸಮಿತಿ ಮಾಜಿ ಸದಸ್ಯ ನಟರಾಜು, ಹೊಳಗೆರೆ ಶಿವಮಲ್ಲಪ್ಪ ಮೊದಲಾದ ನಾಯಕರೊಡನೆ ಪ್ರತ್ಯೇಕವಾಗಿ ಚರ್ಚಿಸಿದ್ದಾರೆ.

ಈ ಸಭೆಯಲ್ಲಿ ಕೆಲವು ಮುಖಂಡರಿಂದ ಕೇಳಿಬಂದ ಹೆಸರು ಜಿಲ್ಲಾ ಉಸ್ತುವಾರಿ ಹಾಗೂ ಲೋಕೋಪಯೋಗಿ ಸಚಿವ ಎಚ್.ಸಿ.ಮಹದೇವಪ್ಪ ಹಾಗೂ ಅವರ ಸುಪುತ್ರ ಸುನೀಲ್ ಬೋಸ್. ನಂಜನಗೂಡು ಕ್ಷೇತ್ರಕ್ಕೆ ಆಯ್ಕೆ ಸಮಿತಿ ಭೇಟಿ ನೀಡಿದ್ದಾಗಲೂ ಈ ಎರಡು ಹೆಸರುಗಳು ಪ್ರಮುಖವಾಗಿ ಕೇಳಿಬಂದಿತ್ತಂತೆ. ಈ ಅಪ್ಪ ಮಕ್ಕಳಲ್ಲಿ ಒಬ್ಬರನ್ನು ಕಣಕ್ಕಿಳಿಸಿದರೆ ಗೆಲುವಿಗೆ ಹೆಚ್ಚು ಅನುಕೂಲವಾಗುತ್ತದೆ ಎಂಬ ಅಭಿಪ್ರಾಯ ಕೇಳಿಬಂದಿದೆ.

ಆದರೆ ಮಹದೇವಪ್ಪ ಅವರ ವಿರುದ್ಧ ಭ್ರಷ್ಟಾಚಾರದ ಆರೋಪ ಹಾಗೂ ಅವರ ಪುತ್ರ ಸುನೀಲ್ ಬೋಸ್ ಮೇಲೆ ಮರಳುದಂಧೆಯ ಆರೋಪ, ಅಧಿಕಾರಿಯೊಬ್ಬರು ಲಂಚ ಪಡೆಯಲು ಪ್ರೇರೇಪಿಸಿದ ಆರೋಪ ಇರುವುದರಿಂದ ಸುನಿಲ್ ಬೋಸ್‌ನನ್ನು ಅಭ್ಯರ್ಥಿಯಾಗಿಸಲು ಹೈಕಮಾಂಡ್ ಮೂಗು ಮುರಿಯುತ್ತಿದೆ. ಮುಖ್ಯಮಂತ್ರಿಗಳಿಗೆ ಬೋಸ್ ಅವರನ್ನು ಕಣಕ್ಕಿಳಿಸಲು ಮನಸ್ಸು ಇದ್ದಂತಿಲ್ಲ, ಇನ್ನು ಮಹದೇವಪ್ಪ ಅವರ ಬಗ್ಗೆ ಮುಖ್ಯಮಂತ್ರಿಗಳು ಯಾವ ನಿರ್ಧಾರಕ್ಕೆ ಬಂದಿದ್ದಾರೋ ತಿಳಿಯದು ಅಥವಾ ಅದು ಕೊನೆಯ ಪಾಶುಪತಾಸ್ತ್ರವಾಗಲಿದೆಯೆ ಎನ್ನುವುದು ಗೊತ್ತಾಗಬೇಕಿದೆ.

ಆದರೆ ಈ ಅನುಮಾನಗಳನ್ನು ಅರ್ಥಕ್ಕೆ ತುಂಡರಿಸುವಂತೆ "ನಂಜನಗೂಡು ಉಪಚುನಾವಣೆಯಲ್ಲಿ ನಾನು ಸ್ಪರ್ಧಿಸುವ ಪ್ರಶ್ನೆಯೇ ಇಲ್ಲ, ಹಾಗೆಯೇ ನನ್ನ ಮಗ ಸುನಿಲ್ ಬೋಸ್‌ಗೆ ಟಿಕೆಟ್ ಕೊಡಿ ಎಂದು ನಾನು ಯಾರ ಬಳಿಯೂ ಕೇಳಿಲ್ಲ" ಎಂದು ಮಹದೇವಪ್ಪ ಹೇಳುವ ಮೂಲಕ ಎಲ್ಲಾ ಅನುಮಾನಕ್ಕೆ ತೆರೆ ಎಳೆದಿದ್ದಾರೆ. ಆದರೆ ಮತ್ತೆ ಪರದೆ ಕಟ್ಟಲೂಬಹುದು. ಸದ್ಯಕ್ಕೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸೂಚಿಸಿದ ವ್ಯಕ್ತಿಯೇ ಅಭ್ಯರ್ಥಿಯಾಗುತ್ತಾರೆ. ಈಗಾಗಲೇ ವೀಕ್ಷಕರು ಕ್ಷೇತ್ರಕ್ಕೆ ಬಂದು ಅಭಿಪ್ರಾಯ ಸಂಗ್ರಹಿಸಿದ್ದು, ಪಕ್ಷದ ಹೈಕಮಾಂಡ್‌ಗೆ ಮಾಹಿತಿ ನೀಡಲಾಗಿದೆ. ಕಾರ್ಯಕರ್ತರ ತೀರ್ಮಾನದಂತೆ ಎಐಸಿಸಿ ತೆಗೆದುಕೊಳ್ಳುವ ತೀರ್ಮಾನವೇ ಅಂತಿ… ಎಂದುಬಿಟ್ಟಿದ್ದಾರೆ.

ಈ ನಡುವೆ ಸಿದ್ದರಾಮಯ್ಯ ಅವರು ಸೇರಿದ… ಪಕ್ಷದ ಹಲವು ನಾಯಕರು ಸಂಸದ ಆರ್.ಧ್ರುವನಾರಾಯ… ಅವರನ್ನು ಕಣಕ್ಕಿಳಿಸಲು ನಿರ್ಧರಿಸಿ ಅವರ ಮೇ… ಒತ್ತಡವನ್ನೂ ಹಾಕಿದ್ದಾರಂತೆ. ಜೊತೆಗೆ ಅಭ್ಯರ್ಥಿ ಆ… ಸಮಿತಿ ಎದುರು ಬಹಳಷ್ಟು ಮಂದಿ ಧ್ರುವನಾರಾಯ… ಅವರೇ ಅಭ್ಯರ್ಥಿಯಾಗಲಿ ಎಂದಿದ್ದಾರಂತೆ. ಯಾಕೆಂದ… ಪ್ರಸಾದ್ ವಿರುದ್ಧ ಸುಲಭವಾಗಿ ಗೆಲ್ಲುವ ವ… ಧ್ರುವನಾರಾಯಣ ಎಂದು ಲೆಕ್ಕಾ ಹಾಕಲಾಗಿದೆ. ಆದ… ಅದೇಕೋ ಧ್ರುವನಾರಾಯಣ್ ಅವರು "ಲೋಕಸಭ… ಸದಸ್ಯನಾಗಿ ಇನ್ನೂ ಎರಡೂವರೆ ವರ್ಷ ಅವಧಿ ಬಾಕಿಯಿ… ಕ್ಷೇತ್ರದ ಜನರ ಸೇವೆ ಮಾಡುವ ಕಾರಣಕ್ಕಾಗಿ ಉ… ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ" ಎಂದು ಹೇಳಿಬಿಟ್ಟಿದ್ದಾ…

ಇನ್ನು ಮೂರನೆಯದಾಗಿ ಜೆಡಿಎಸ್‌ನ ಕಳ… ಕೇಶವಮೂರ್ತಿಗೆ ಗಾಳ ಹಾಕಲಾಗುತ್ತಿದೆ ಎನ್ನಲಾಗಿ… ಯಾಕೆಂದರೆ ಕಳಲೆ ಕೇಶವಮೂರ್ತಿ 2013ರಲ್ಲಿ ನಡ… ಚುನಾವಣೆಯಲ್ಲಿ ಶ್ರೀನಿವಾಸ್‌ಪ್ರಸಾದ್ ಅವರ ವಿರು… ಜೆಡಿಎಸ್‌ನಿಂದ ಸ್ಪರ್ಧಿಸಿ ಎರಡನೆಯ ಸ್ಥಾನ ಗಳಿಸಿದ್ದ… ಹಾಗಾಗಿ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿಸಿದರೆ ಗೆಲು… ಸುಲಭ ಎಂಬ ಲೆಕ್ಕಾಚಾರದಲ್ಲಿ ಅವರನ್ನು ಸೆಳೆಯಲ… ಕಾಂಗ್ರೆಸ್ ಪರೋಕ್ಷ ಚಟುವಟಿಕೆ ನಡೆಸುತ್ತಿದೆ. ಆದ… ಕೇಶವಮೂರ್ತಿ ಯಾವಾಗಲೂ ಪಕ್ಷ ಬದಲಿಸಿದವರ… ಹಿಂದಿನಿಂದಲೂ ಪಕ್ಷ ನಿಷ್ಠೆ ಹೆಚ್ಚು, ಹಾಗಾಗಿ ಅವರ… ಪಕ್ಷಾಂತರ ಕಷ್ಟ. ಒಂದು ವೇಳೆ ಕಾಂಗ್ರೆಸ್ ಸೇ… ಸ್ಪರ್ಧಿಸಿದರೂ, 2018ರ ಚುನಾವಣೆಯಲ್ಲಿ ಮ… ಚುನಾವಣಾ ಕಣಕ್ಕಿಳಿಯುವ ಅವಕಾಶ ಕಾಂಗ್ರೆಸ್‌ನಿಂ… ದಕ್ಕುವುದಿಲ್ಲ ಎಂಬ ಮುಂದಾಲೋಚನೆಯೂ ಇರಬಹುದ… ಆದರೂ ಅವರಲ್ಲಿ ಒಮ್ಮೆ ಶಾಸಕನಾಗುವ ಆ… ಚಿಗುರೊಡೆದು ಕಾಂಗ್ರೆಸ್‌ನ ಸತತ ಪ್ರಯತ್ನದಿಂದ ಅವ… ಕೈಹಿಡಿಯಲೂಬಹುದು. ಆದರೆ ಕೇಶವಮೂರ್ತಿ ಅವ… "ಇದುವರೆಗೂ ಕಾಂಗ್ರೆಸ್‌ನ ಯಾರೂ ನನ್ನನ್ನು ಭೇ… ಮಾಡಿಲ್ಲ" ಎಂದು ಹೇಳಿದ್ದಾರೆ. ಇದರ ಹಿಂದಿನ ಉದ್ದೇ… ಕಾಂಗ್ರೆಸ್‌ನವರು ನನ್ನನ್ನು ಭೇಟಿ ಮಾಡಲಿ ಎಂದಿರಬಹುದ…

ಇಷ್ಟೆಲ್ಲದರ ನಡುವೆ ಮಹಿಳೆಯೊಬ್ಬರನ್ನು ಕಣಕ್ಕಿಳಿಸು… ಬಗ್ಗೆ ಸಿದ್ದರಾಮಯ್ಯ ಸೇರಿದಂತೆ ಪಕ್ಷದ ಹಲವು ಮುಖಂಡ… ಆಲೋಚನೆ ನಡೆಸಿದ್ದಾರೆ. ಅದು ಯಂಗ್ ಗ್ಲಾಮರ… ರಾಜಕಾರಣಿ, ಜಿಲ್ಲಾ ಪಂಚಾಯತಿ ಅಧ್ಯಕ್ಷೆಯಾಗಿ ಮಿಂ… ಒಂದಷ್ಟು ಹೆಸರು ಮಾಡಿ ಸದ್ಯ ಜಿಲ್ಲಾ ಪಂಚಾಯತ… ಸದಸ್ಯರಾಗಿರುವ ಹುಣಸೂರು ಶಾಸಕ ಎಚ್.ಪಿ.ಮಂಜುನಾಥ… ಅವರ ನಾದಿನಿ ಡಾ.ಬಿ.ಪುಷ್ಪಾ ಅಮರನಾಥ್. ಅವರೇನೋ… ಕಣಕ್ಕಿಳಿಯಲು ಸಿದ್ಧವಾದಂತಿದೆ ಅವರ ಮಾತಿನ ಧಾ… ನೋಡಿದರೆ. ಆದರೆ ಅವರ ಬಳಿ ಈ ವಿಷಯ… ಹೈಕಮಾಂಡ್‌ನಿಂದ ಪ್ರಸ್ತಾಪವಾಗಿಲ್ಲ.

ಇನ್ನು ಕೊನೆಯದಾಗಿ ಶ್ರೀನಿವಾಸ್‌ಪ್ರಸಾದ್ ಅವರ… ಬಹಿರಂಗ ವೇದಿಕೆಯಲ್ಲಿ ಟೀಕೆ ಮಾಡುತ್ತ ಎಲ್ಲರ ಗಮ… ಸೆಳೆದಿರುವ ತಾಲ್ಲೂಕು ಪಂಚಾಯತಿ ಮಾಜಿ ಅಧ್ಯ… ಹುರಾ ಕ್ಷೇತ್ರದ ಜಿಲ್ಲಾ ಪಂಚಾಯತಿ ಸದಸ್ಯೆ ಪುಷ… ನಾಗೇಶ್‌ರಾಜ್ ಅವರ ಪತಿ ನಾಗೇಶ್‌ರಾಜ್ ಹೆಸರು… ಕೇಳಿಬರುತ್ತಿದೆ.

ಈ ನಡುವೆ ಡಾ.ಬಾಬು ಜಗಜೀವನರಾಂ ಸಂಘ… ಒಕ್ಕೂಟವು ನಂಜನಗೂಡು ವಿಧಾನಸಭಾ ಕ್ಷೇತ್ರ… ಉಪಚುನಾವಣೆಯಲ್ಲಿ ಮಾದಿಗ ಜನಾಂಗ… ಪ್ರೊ.ಎಚ್.ಗೋವಿಂದಯ್ಯ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯಾ… ಸ್ಪರ್ಧಿಸಲು ಅವಕಾಶ ನೀಡುವಂತೆ ಮುಖ್ಯಮಂತ್ರಿ ಅವರ… ಮನವಿ ಮಾಡಿದೆ. ಅದಕ್ಕೆ ಅವರು ನೀಡುವ ಕಾರ… ನಂಜನಗೂಡು ಹಾಗೂ ತಿ.ನರಸೀಪುರ ವಿಧಾನಸಭಾ ಕ್ಷೇತ್ರಗಳ… ಹಿಂದಿನಿಂದಲೂ ಪರಿಶಿಷ್ಟ ಜಾತಿಯ ಬಲಗ… ಸಮುದಾಯದವರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ… ಉಪಚುನಾವಣೆಯಲ್ಲಾದರೂ ಪರಿಶಿಷ್ಟ ಜಾತಿಯ ಮಾದಿ… ಜನಾಂಗಕ್ಕೆ ಸೇರಿದ ಗೋವಿಂದಯ್ಯ ಅವರು ಸ್ಪರ್ಧಿಸಲು ಅವ… ನೀಡಬೇಕೆಂಬುದು.

ಮಾಜಿ ರಾಜ್ಯಪಾಲ ಬಿ.ರಾಚಯ್ಯನವರ ಪುತ್ರ, ಮಾ… ಶಾಸಕ ಎ.ಆರ್.ಕೃಷ್ಣಮೂರ್ತಿಯವರನ್ನು ಕಣಕ್ಕಿಳಿಸಲ… ಸಿದ್ದರಾಮಯ್ಯ ಮನಸ್ಸು ಮಾಡಿದ್ದರು. ಆದರೆ, ಸ… ಬಿಜೆಪಿಯಲ್ಲಿರುವ ಕೃಷ್ಣಮೂರ್ತಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲ… ನಿರಾಕರಿಸಿದ್ದರಿಂದ ಸಿದ್ದು ಈ ವಿಷಯ ಕೈಬಿಟ್ಟರು.

ಶ್ರೀನಿವಾಸ ಪ್ರಸಾದ್ ಅವರ ವಿರುದ್ಧ ಪ್ರಬಲ ಅಭ್ಯ… ಅಂದರೆ ಆರ್.ಧ್ರುವನಾರಾಯಣ ಮತ್ತು ಕಳಲೆ ಕೇಶವಮೂ… ಈ ಇಬ್ಬರಲ್ಲಿ ಒಬ್ಬರನ್ನು ಅಖಾಡಕ್ಕಿಳಿಸಬೇಕು ಎಂಬು… ಸಿದ್ದರಾಮಯ್ಯ ಅವರ ಲೆಕ್ಕಾಚಾರ. ಒಂದು ವೇಳೆ ಅದು… ಸಾಧ್ಯವಾಗದಿದ್ದರೆ ಡಾ.ಬಿ.ಪುಷ್ಪಾ ಅಮರನಾಥ್. ಒಟ್ಟಿನ… ನಂಜನಗೂಡು ಉಪ ಚುನಾವಣೆಯಲ್ಲಿ ಪ್ರಸಾದ್ ಮಣ್ಣು ಮುಕ್ಕಿಸಲು ಕಾಂಗ್ರೆಸ್ ಸಖತ್ ಕಸರತ್ತು ನಡೆಸುತ್ತಿದೆ.

■ ಶ…

ಮಂಡ್ಯ: ನಗರಸಭೆಯಲ್ಲಿದ್ದಾರೆ ಪೇಮೆಂಟ್ ಸದಸ್ಯರು

ಮಂಡ್ಯ ನಗರಸಭೆ ಅಧ್ಯಕ್ಷ ಸ್ಥಾನದಿಂದ ಹೊಸಹಳ್ಳಿ ಬೋರೇಗೌಡನನ್ನು ಕೆಳಗಿಳಿಸಲು ಅವರ ವಿರೋಧಿಗಳು ಮಾಡಿದ ಪ್ರಯತ್ನಗಳು ವಿಫಲಗೊಂಡಿದೆ. ಶತಾಯಗತಾಯ ಬೋರೇಗೌಡನನ್ನು ಇಳಿಸಿ ಅಧ್ಯಕ್ಷ ಸ್ಥಾನಕ್ಕೇರುವ ಕನಸು ಕಂಡಿದ್ದ ಸದಸ್ಯ ಅನಿಲ್‌ಕುಮಾರ ಸುಮಾರು 15 ಲಕ್ಷದಷ್ಟು ಹಣವನ್ನು ಪೇಮೆಂಟ್ ಸದಸ್ಯರಿಗೆ ಹಂಚಿ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಸಭೆ ಕರೆಸಿದ್ದ. ಆದರೆ ಅನಿಲ್‌ಕುಮಾರನ ತಂತ್ರಕ್ಕೆ ಪ್ರತಿತಂತ್ರ ಹೆಣೆದ ಬೋರೇಗೌಡ ಕೆಲ ಸದಸ್ಯರಿಗೆ ಡಬ್ಬಲ್ ಪೇಮೆಂಟ್ ಕೊಟ್ಟು ಅವಿಶ್ವಾಸ ನಿರ್ಣಯವನ್ನು ಸೋಲಿಸಿ ಅಧ್ಯಕ್ಷ ಸ್ಥಾನವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾನೆ. ಅತ್ತ "ಇನ್ನೊಂದು ವರ್ಷ ಅಧ್ಯಕ್ಷ ಸ್ಥಾನದಿಂದ ನನ್ನನ್ನು ಇಳಿಸಲು ಯಾರಿಂದಲೂ ಸಾಧ್ಯವಿಲ್ಲ" ಎಂಬ ಬಿರುಸಿನಲ್ಲಿ ಬೋರೇಗೌಡ ಇದ್ದರೆ, ಇತ್ತ 15 ಲಕ್ಷ ಹಣವೂ ಹೋಯ್ತು ಅಧ್ಯಕ್ಷ ಸ್ಥಾನವೂ ದಕ್ಕಲಿಲ್ಲ ಎಂದು ಅನಿಲ್ ಕುಮಾರ ಗೋಳೋ ಎಂದು ಪೇಚಾಡುತ್ತಿದ್ದಾನೆ.

ಕಳೆದ ವರ್ಷ ಮಾರ್ಚ್ 16ರಂದು ಬರೋಬ್ಬರಿ ಅರ್ಧ ಕೋಟಿಗೂ ಹೆಚ್ಚು ಹಣ ಸುರಿದು ಅಧ್ಯಕ್ಷಗಿರಿ ಹಿಡಿದಿದ್ದ ಹೊಸಹಳ್ಳಿ ಬೋರೇಗೌಡನ ವಿರುದ್ಧ ಕೇವಲ 9 ತಿಂಗಳು ಕಳೆಯುವಷ್ಟರಲ್ಲಿಯೇ ಪೇಮೆಂಟ್ ಸದಸ್ಯರಲ್ಲಿ ಹಸಿವು ಕಾಣಿಸಿಕೊಂಡಿತ್ತು. ಅಧ್ಯಕ್ಷ ಬೋರೇಗೌಡ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ; ಸರಿಯಾಗಿ ಆಡಳಿತ ನಡೆಸುತ್ತಿಲ್ಲ ಎಂದು ಪೇಮೆಂಟ್ ಸದಸ್ಯರು ಬೊಬ್ಬೆ ಹಾಕಲಾರಂಭಿಸಿದರು. ಆದರೆ ಅಸಲಿ ಕಾರಣ ಬೇರೆಯೇ ಇತ್ತು. ಈ ಬಾರಿ ಗೆದ್ದುಬಂದಿರುವ ಬಹುತೇಕ ಸದಸ್ಯರು ಪೇಮೆಂಟ್ ಗಿರಾಕಿಗಳು. ದುಡ್ಡಿನ ಮುಂದೆ ತತ್ವ-ಸಿದ್ಧಾಂತ ಕಾಲಕಸ ಎಂದುಕೊಂಡಿರುವ ಸದಸ್ಯರು ಮತ್ತೊಂದು ಸುತ್ತಿನ ಪೇಮೆಂಟ್‌ಗಾಗಿ ಕಾಯುತ್ತಿದ್ದರು. ಆಗ ಅವರಿಗೆ ಸಿಕ್ಕ ಮಿಕ 30ನೇ ವಾರ್ಡ್‌ನ ಕಾಂಗ್ರೆಸ್ ಸದಸ್ಯ ಅನಿಲ್‌ಕುಮಾರ್. ಬೋರೇಗೌಡನನ್ನು ಕೆಳಗಿಳಿಸಲು ನಾವು ಸಾಥ್ ಕೊಡುತ್ತೇವೆ, ನೀನು ಬಂಡವಾಳ ಹಾಕು ಎಂದು ತಿದಿಯೊತ್ತಿದ್ದ ಪೇಮೆಂಟ್ ಸದಸ್ಯರು 23 ಮಂದಿಯ ಸಹಿ ಪಡೆದು ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಸಭೆ ಕರೆಯುವಂತೆ ಆಯುಕ್ತರಿಗೆ ಪತ್ರ ಕೊಟ್ಟರು.

ಈ ರೀತಿ ಅವಿಶ್ವಾಸ ನಿರ್ಣಯ ಪತ್ರಕ್ಕೆ ಸಹಿ ಹಾಕಲು 23 ಮಂದಿ ಪೇಮೆಂಟ್ ಸದಸ್ಯರಿಗೆ ತಲಾ 50 ಸಾವಿರ ಕೊಡಲಾಗಿತ್ತು. ಬೋರೇಗೌಡನನ್ನು ಕೆಳಗಿಳಿಸಲು 50 ಸಾವಿರ ಪಡೆದ ಸದಸ್ಯರು ಆದಾದನಂತರ ನೂತನ ಅಧ್ಯಕ್ಷರನ್ನು ಆಯ್ಕೆ ಮಾಡುವ ಸಂದರ್ಭದಲ್ಲೂ 2 ಲಕ್ಷ ಹಣ ಮಾಡಿಕೊಳ್ಳಬಹುದೆಂದು ಹೊಂಚುಹಾಕಿ ಕೂತಿದ್ದರು. ಎಲ್ಲವೂ ಪೇಮೆಂಟ್ ಸದಸ್ಯರು ಅಂದುಕೊಂಡಂತೆಯೇ ನಡೆದಿದ್ದರೆ ಇಷ್ಟೊತ್ತಿಗೆ ಹೊಸಹಳ್ಳಿ ಬೋರೇಗೌಡನ ಅಧ್ಯಕ್ಷಗಿರಿ ಉರುಳಬೇಕಿತ್ತು. ಆದರೆ ಸ್ವಪಕ್ಷೀಯ, ಜೆಡಿಎಸ್, ಪಕ್ಷೇತರ ಸದಸ್ಯರ ಬೆಂಬಲ ಪಡೆದ ಕಾಂಗ್ರೆಸ್ ಪಕ್ಷದ ಬೋರೇಗೌಡ 13 ಸದಸ್ಯರ ಬೆಂಬಲದಿಂದ ಅವಿಶ್ವಾಸ ನಿರ್ಣಯವನ್ನು ಸೋಲಿಸಿ ಪೇಮೆಂಟ್ ಸದಸ್ಯರಿಗೆ ಸಿಗುತ್ತಿದ್ದ ಲಕ್ಷ ಲಕ್ಷ ಹಣವನ್ನು ತಪ್ಪಿಸಿಬಿಟ್ಟ. ಹೊಸ ಅಧ್ಯಕ್ಷರನ್ನು ಮಾಡಿ 2 ಲಕ್ಷ ಹಣವನ್ನು ಜೇಬಿಗಿಳಿಸುವ ಕನಸು ಕಾಣುತ್ತಿದ್ದ ಪೇಮೆಂಟ್ ಸದಸ್ಯರು ಕೈಗೆ ಬಂದ ತುತ್ತು ಬಾಯಿಗೆ ಬರದೆ ಹಸಿವಿನಿಂದ ಕಂಗಾಲಾಗಿಬಿಟ್ಟಿದ್ದಾರೆ.

ಹೈಡ್ರಾಮಾ

ಹೊಸಹಳ್ಳಿ ಬೋರೇಗೌಡನನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವ ಅವಿಶ್ವಾಸ ನಿರ್ಣಯ ಸಭೆಗೆ ಕಳೆದ ಜನವರಿ 5ರಂದು ಮುಹೂರ್ತ ಫಿಕ್ಸ್ ಮಾಡಲಾಗಿತ್ತು. ಅವಿಶ್ವಾಸ ನಿರ್ಣಯ ಸಭೆ ಕರೆಯಲು 23 ಮಂದಿ ಸಹಿ ಹಾಕಿರುವುದರಿಂದ ಬೋರೇಗೌಡ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯುವುದು ನಿಶ್ಚಿತ ಎಂದೇ ಹೇಳಲಾಗುತ್ತಿತ್ತು. ಆದರೆ ಅಂದು ಬೆಳಗ್ಗೆ ನಡೆದ ರಾಜಕೀಯ ವಿದ್ಯಮಾನಗಳು ಬೋರೇಗೌಡ ಅಧ್ಯಕ್ಷ ಗಾದಿಯಿಂದ ಇಳಿಯದಂತೆ ತಡೆದವು. 9 ತಿಂಗಳ ಹಿಂದಷ್ಟೇ ಯಾವ ಬೋರೇಗೌಡನನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಬಾರದೆಂದು ಯತ್ನಿಸಿದ್ದ ಜಿಲ್ಲೆಯ ದಳಪತಿಗಳಾದ ಸಂಸದ ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕ ಎಂ.ಶ್ರೀನಿವಾಸ್ ಮತ್ತು ಜಿಲ್ಲಾಧ್ಯಕ್ಷ ಡಿ.ರಮೇಶ್ ಈ ಬಾರಿ ಹೊಸಹಳ್ಳಿ ಬೋರೇಗೌಡನ ಪರ ನಿಂತುಬಿಟ್ಟರು. ಕಾಂಗ್ರೆಸ್‌ನ ಬೋರೇಗೌಡನ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಸಹಿ ಹಾಕಿದ್ದ ಪೇಮೆಂಟ್ ಸದಸ್ಯರಲ್ಲಿ ಬಹುತೇಕರು ಕಾಂಗ್ರೆಸ್ ಸದಸ್ಯರಾಗಿದ್ದರು. ಕಾಂಗ್ರೆಸ್ ಪಕ್ಷಕ್ಕೆ ಮುಖಭಂಗ ಮಾಡುವ ಉದ್ದೇಶ ದಳಪತಿಗಳಿಗಿತ್ತು, ಬೋರೇಗೌಡ ಕೂಡ ತನ್ನ ಬೆಂಬಲಕ್ಕೆ ನಿಲ್ಲುವಂತೆ ದಳಪತಿಗಳ ಮೊರೆಹೋಗಿದ್ದ. ಅಲ್ಲದೆ ತನ್ನ ಪರ ನಿಂತರೆ ಡಬ್ಬಲ್ ಪೇಮೆಂಟ್ ಕೊಡುತ್ತೇನೆಂದು ಕಾಂಗ್ರೆಸ್, ಜೆಡಿಎಸ್, ಪಕ್ಷೇತರ ಸದಸ್ಯರಿಗೆ ಆಮಿಷ ನೀಡಿದ್ದು ಚೆನ್ನಾಗೇ ವರ್ಕೌಟ್ ಆಗಿತ್ತು.

ಅದರಂತೆ ಜನವರಿ 5ರಂದು ಬೆಳಗ್ಗೆ ಪ್ರವಾಸಿಮಂದಿರಕ್ಕೆ ಜೆಡಿಎಸ್ ಪಕ್ಷದ 9 ಮಂದಿ ಸದಸ್ಯರನ್ನು ಕರೆಸಿಕೊಂಡ ದಳಪತಿಗಳಾದ ಸಂಸದ ಪುಟ್ಟರಾಜು, ಮಾಜಿ ಶಾಸಕ ಎಂ.ಶ್ರೀನಿವಾಸ್ ಸದಸ್ಯರ ಅಭಿಪ್ರಾಯವನ್ನು ಕೇಳಿದರು. ಕೊನೆಗೆ ಜೆಡಿಎಸ್ ವರಿಷ್ಠ ದೇವೇಗೌಡರು ಹೊಸಹಳ್ಳಿ ಬೋರೇಗೌಡನ ಪರವಾಗಿ ನಿಲ್ಲುವಂತೆ ಹೇಳಿದ್ದಾರೆ, ಅದರಂತೆ ಬೋರೇಗೌಡನ ಪರ ಕೈಎತ್ತಬೇಕೆಂದು ಹೇಳಿದ್ದರು. ದಳಪತಿಗಳ ಮುಂದೆ ಸರಿ ಎಂದು ತಲೆಯಾಡಿಸಿ ಬಂದ ಜೆಡಿಎಸ್ ಸದಸ್ಯರಾದ ಸುನೀತಾ ರವೀಂದ್ರ, ಮಹೇಶ್‌ಕೃಷ್ಣ ಸೈಯದ್ ಮುಜಾಹಿದ್ ಮತ್ತು ಸೋಮಶೇಖರ್ ಕೆರಗೋಡು ಉಲ್ಟಾ ಹೊಡೆದು ಹೊಸಹಳ್ಳಿ ಬೋರೇಗೌಡನ ವಿರುದ್ಧ ಕೈ ಎತ್ತಿದರು. ಆದರೆ ಜೆಡಿಎಸ್‌ನ ಸದಸ್ಯರಾದ ಎಂ.ಜೆ.ಚಿಕ್ಕಣ್ಣ, ಮಧುಶ್ರೀ, ಶಿವರತ್ನ, ಸುಮಿತ್ರ, ಶುಗರ್‌ಟೌನ್ ಬೋರೇಗೌಡ ಹಾಗೂ ಪಕ್ಷೇತರ ಸದಸ್ಯ ಕೆ.ಸಿ.ರವೀಂದ್ರ ಸಂಸದ ಪುಟ್ಟರಾಜು, ಮಾಜಿ ಶಾಸಕ ಶ್ರೀನಿವಾಸ್ ಹೇಳಿದಂತೆ ಹೊಸಹಳ್ಳಿ ಬೋರೇಗೌಡನ ಪರ ಕೈ ಎತ್ತಿ ಆತನ ಅಧ್ಯಕ್ಷ ಸ್ಥಾನವನ್ನು ಉಳಿಸಿಬಿಟ್ಟರು.

ಇನ್ನು ಅವಿಶ್ವಾಸ ನಿರ್ಣಯ ಪತ್ರಕ್ಕೆ ಸದಸ್ಯರಾದ ಚಂದ್ರುಕುಮಾರ್, ಅನಂತಪದ್ಮನಾಭ, ಮಧುಸೂದನ್, ಸುಮಾರಾಣಿ ಮತ್ತು ಷಹಜಹಾನ್ ಸಹಿ ಹಾಕಿದ್ದರು. ಅವಿಶ್ವಾಸದ ದಿನ ಇವರೆಲ್ಲಾ ಅನಿಲ್‌ಕುಮಾರನಿಗೆ ಟಾಟಾ ಹೇಳಿ ಬೋರೇಗೌಡನ ಬಾಟಾಗೆ ಸೆಟ್ಟಾಗಿ ಆತನ ಪರ ಕೈ ಎತ್ತಿಬಿಟ್ಟರು. ಶತಾಯಗತಾಯ ಬೋರೇಗೌಡ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯುವುದು ಖಚಿತ ಎಂದು ಬಂಡವಾಳ ಹಾಕಿದ್ದ ಅನಿಲ್‌ಕುಮಾರ್ ಹಾಗೂ ಆತನ ಜೊತೆ ಕೈ ಜೋಡಿಸಿದ್ದ 22 ಮಂದಿ ಪೇಮೆಂಟ್ ಸದಸ್ಯರ ಮುಖ ಕಪ್ಪಿಟ್ಟಿತು. ಬೋರೇಗೌಡನನ್ನು ಇಳಿಸಿ ಹೊಸ ಅಧ್ಯಕ್ಷನಾಗುವವನಿಂದ ಕೈ ತುಂಬ ಹಣ ಮಾಡಿಕೊಳ್ಳಬಹುದೆಂದು ಹೊಂಚು ಹಾಕಿ ಬಂದಿದ್ದ ಪೇಮೆಂಟ್ ಸದಸ್ಯರು ಕೈ ಕೈ ಹೊಸಕಿಕೊಂಡು ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ವಲ್ಲಾ ಎಂದು ಬಾಯಿ ಬಡಿದುಕೊಳ್ಳುವಂತಾಯಿತು. 1964ರ ಪುರಸಭೆ ಕಾಯ್ದೆ ಪ್ರಕಾರ ಒಮ್ಮೆ ಅಧ್ಯಕ್ಷರ ವಿರುದ್ಧ ಅವಿಶ್ವಾಸ ಸಭೆ ಕರೆದರೆ ಒಂದು ವರ್ಷದವರೆಗೂ ಮತ್ತೆ ಅವರ ವಿರುದ್ಧ ಅವಿಶ್ವಾಸ ಸಭೆ ಕರೆಯುವಂತಿಲ್ಲ. ಅಲ್ಲದೆ ಬೋರೇಗೌಡ ನನ್ನನ್ನು ಇನ್ನೊಂದು ವರ್ಷದವರೆಗೂ ಯಾರೂ ಕೂಡ ಟಚ್ ಮಾಡುವಂತಿಲ್ಲ ಎಂದು ಬೀಗುತ್ತಿದ್ದಾನೆ.

ಅಧಿಕಾರಿಗಳಿಗೆ ಭಯವಿಲ್ಲ

ಇನ್ನು ಒಂದು ವರ್ಷ ಅಧ್ಯಕ್ಷ ಗಾದಿಯಲ್ಲಿ ಯಾವುದೇ ಆತಂಕವಿಲ್ಲದೆ, ಯಾವುದೇ ಭಯವಿಲ್ಲದೆ ಮುಂದುವರಿಯಲು ಬೋರೇಗೌಡ ಕಟ್ಟಿದ ಸುಂಕ ಭರ್ತಿ 25 ಲಕ್ಷ. ಒಂಭತ್ತು ತಿಂಗಳ ಹಿಂದೆ ಅಧ್ಯಕ್ಷನಾಗಲು ಅರ್ಧಕೋಟಿ ಹಣ ಸುರಿದಿದ್ದ ಬೋರೇಗೌಡ ಎಂದಿಗೂ ಗತ್ತಿನಿಂದ ಅಧಿಕಾರ ನಡೆಸಲೇ ಇಲ್ಲ, ನಗರಸಭೆ ಆಯುಕ್ತ ನರಸಿಂಹಮೂರ್ತಿ ಹಾಗೂ ಅಧಿಕಾರಿಗಳನ್ನು ವಿಶ್ವಾಸದಲ್ಲಿರಿಸಿಕೊಂಡು ಕೆಲಸ ಮಾಡಿಸುವಲ್ಲಿ ಬೋರೇಗೌಡ ಸಂಪೂರ್ಣ ವಿಫಲರಾಗಿದ್ದಾರೆ. ನಗರಸಭೆಯ ಯಾವ ಅಧಿಕಾರಿ-ಸಿಬ್ಬಂದಿಯೂ ಅಧ್ಯಕ್ಷ ಬೋರೇಗೌಡರಿಗೆ ಹೆದರುವುದಿಲ್ಲ.

ಅಧಿಕಾರಿಗಳ ಮೇಲೆ ಹಿಡಿತವಿಲ್ಲದ ಬೋರೇಗೌಡನನ್ನು ಇಳಿಸಲು ಆಯುಕ್ತ-ಅಧಿಕಾರಿಗಳು ಕೂಡ ತೆರೆಮರೆಯಲ್ಲಿ ಕೈ ಜೋಡಿಸಿದ್ದರು. ಈಗ್ಗೆ ಕೆಲ ತಿಂಗಳ ಹಿಂದೆ ಮಹಾವೀರ ವೃತ್ತದಲ್ಲಿರುವ ಅಂಗಡಿ ಮಳಿಗೆಗಳ ಹರಾಜು ಸಂದರ್ಭದಲ್ಲಿ ಅಧ್ಯಕ್ಷ ಬೋರೇಗೌಡ ಮತ್ತು ಆಯುಕ್ತ ನರಸಿಂಹಮೂರ್ತಿ ನಡುವೆ ಭಾರೀ ಜಟಾಪಟಿಯೇ ನಡೆದಿತ್ತು, ಅಂಗಡಿ ಮಳಿಗೆಗಳ ಹರಾಜು ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲವಾದ್ದರಿಂದ ಆ ಪ್ರಕ್ರಿಯೆಯನ್ನು ಮುಂದೂಡಿ ಎಂದು ಬೋರೇಗೌಡ ಆಯುಕ್ತ ನರಸಿಂಹಮೂರ್ತಿಗೆ ಹೇಳಿದ್ದರೂ ಆತ ಮುಂದೂಡಲು ಒಪ್ಪಲಿಲ್ಲ, ಆಗ ಬಾಯಿಗೆ ಬಂದಂತೆ ಬೈದ ಅಧ್ಯಕ್ಷ ಬೋರೇಗೌಡ ಹರಾಜು ಸಭೆಗೆ ಬಹಿಷ್ಕಾರ ಹಾಕಿ ಹೊರಟುಹೋದರು. ಆದರೆ ಆಯುಕ್ತ ನರಸಿಂಹಮೂರ್ತಿ ಅಧ್ಯಕ್ಷರ ಮಾತಿಗೆ ಕ್ಯಾರೆ ಎನ್ನದೆ ಹರಾಜು ನಡೆಸಿದ್ದರು. ಇದಾದ ನಂತರ ಅಧ್ಯಕ್ಷ ಬೋರೇಗೌಡ ಹಾಗೂ ಆಯುಕ್ತ ನರಸಿಂಹಮೂರ್ತಿಯ ನಡುವೆ ಹೊಂದಾಣಿಕೆ ತಪ್ಪಿಹೋಗಿದ್ದು, ನಗರಸಭೆ ಆಡಳಿತ ಹಾದಿ ತಪ್ಪಿದೆ.

ನಗರಸಭೆಯಲ್ಲಿ ಕಂದಾಯ ಸಮರ್ಪಕವಾಗಿ ವಸೂಲಿ ಆಗುತ್ತಿಲ್ಲ, ಕೆಲವು ಪೇಮೆಂಟ್ ಸದಸ್ಯರು ಅಧಿಕಾರಿಗಳನ್ನು ಅಡ್ಜಸ್ಟ್ ಮಾಡಿಕೊಂಡು ಅಕ್ರಮವಾಗಿ ಖಾತೆ ಮಾಡಿ ಭರ್ಜರಿ ರೊಕ್ಕ ಮಾಡುತ್ತಿದ್ದಾರೆ. ಮಂಡ್ಯದಲ್ಲಿ ಹಲವೆಡೆ 4-5 ಅಂತಸ್ತಿನ ಬಿಲ್ಡಿಂಗ್‌ಗಳನ್ನು ಕಟ್ಟುತ್ತಿದ್ದಾರೆ. 2013ರ ಅಕ್ಟೋಬರ್‌ನೊಳಗೆ ಕಟ್ಟಿರುವ ಅಕ್ರಮ ಮನೆ, ಬಿಲ್ಡಿಂಗ್ ಅಕ್ರಮ-ಸಕ್ರಮ ಕಾಯ್ದೆಯಡಿ ಸಕ್ರಮ ಮಾಡಿಕೊಳ್ಳಬಹುದು. ಆದರೆ ಈಗೊಂದು ವರ್ಷದ ಹಿಂದೆ ನಗರದ ವಿವಿ ರಸ್ತೆ, ನೂರಡಿ ರಸ್ತೆ, ಮೊದಲಾದ ಕಡೆ 4-5 ಅಂತಸ್ತಿನ ಕಟ್ಟಡಗಳನ್ನು ಕಟ್ಟಲಾಗಿದೆ. ಇದನ್ನು ಪ್ರಶ್ನಿಸಬೇಕಾದ ನಗರಸಭೆ ಆಯುಕ್ತರು ಎಇಇ, ಎಇಗಳೆಲ್ಲಾ ನೋಡಿಕೊಂಡು ತಿರುಗುತ್ತಿರುವ ಹಿಂದೆ ಯಾವ ಕಾರಣವಿದೆ ಎಂಬುದು ಮಂಡ್ಯದ ಜನರಿಗೂ ಗೊತ್ತಿದೆ. ಇನ್ನು ಕಸವಿಲೇವಾರಿ, ಬೀದಿ ದೀಪಗಳ ನಿರ್ವಹಣೆಯೂ ಸಮರ್ಪಕವಾಗಿ ನಡೆಯುತ್ತಿಲ್ಲ, ಇವೆರಡರ ಗುತ್ತಿಗೆದಾರರು ಸರಿಯಾಗಿ ಪ್ರಸಾದ ತಲುಪಿಸುವ ಕಾರಣದಿಂದ ಈ ಬಗ್ಗೆಯೂ ಯಾರೂ ಚಕಾರವೆತ್ತುತ್ತಿಲ್ಲ, ಅಧ್ಯಕ್ಷ, ಉಪಾಧ್ಯಕ್ಷ, ಸ್ಥಾಯಿ ಸಮಿತಿ ಅಧ್ಯಕ್ಷ, ಆಯುಕ್ತ ಎಇಇ, ಎಇ, ಜೆಇ, ಕ್ಲರ್ಕ್ ಎಲ್ಲರಿಗೂ ಪ್ರತಿ ಕಾಮಗಾರಿಯಲ್ಲೂ ಇಂತಿಷ್ಟು ಹಣ ಎಂದು ಫಿಕ್ಸ್ ಆಗಿರುವುದರಿಂದ ಅಕ್ರಮಗಳೆಲ್ಲಾ ಸಕ್ರಮವಾಗಿ ಹೋಗುತ್ತಿದೆ. ಇದನ್ನೆಲ್ಲಾ ಸರಿಪಡಿಸುವ ಎದೆಗಾರಿಕೆಯನ್ನು ಬೋರೇಗೌಡ ಉಳಿದ ಅವಧಿಯಲ್ಲಾದರೂ ತೋರುತ್ತಾರೆಯೇ ಎಂಬುದನ್ನು ಕಾದು ನೋಡಬೇಕಿದೆ.


ಪೇಮೆಂಟ್ ಸದಸ್ಯರು

ಕಳೆದ ಮೂರು ಅವಧಿಯಿಂದೀಚೆಗೆ ಮಂಡ್ಯ ನಗರಸಭೆ ಇತಿಹಾಸದಲ್ಲಿ ದುಡ್ಡಿಗಾಗಿ ಕೈಯೊಡ್ಡುವ ಸದಸ್ಯರ ಹಾವಳಿ ಮಿತಿಮೀರಿ ಹೋಗಿದೆ. ನಗರಸಭೆ ಸದಸ್ಯ ಸ್ಥಾನವಿರುವುದು ಸೇವೆಗಾಗಿ ಎಂಬುದನ್ನೇ ಮರೆತಿರುವ ಬಹುಪಾಲು ಸದಸ್ಯರು ದುಡ್ಡಿಗಾಗಿ ತಮ್ಮ ಸದಸ್ಯತ್ವವನ್ನೇ ಮಾರಿಕೊಂಡಿದ್ದಾರೆ. ಅಧ್ಯಕ್ಷ-ಉಪಾಧ್ಯಕ್ಷರನ್ನು ಆಯ್ಕೆ ಮಾಡಲು ಪೇಮೆಂಟ್, ಇಳಿಸಲು ಪೇಮೆಂಟ್, ಸಾಮಾನ್ಯ ಸಭೆಯಲ್ಲಿ ವಿರೋಧ ಮಾಡದೆ ಸುಮ್ಮನಿರಲು ಪೇಮೆಂಟ್... ಹೀಗೆ ಹೇಳುತ್ತಾಹೋದರೆ ಪೇಮೆಂಟ್ ವಿವರಗಳ ದೊಡ್ಡ ಪಟ್ಟಿಯೇ ಸಿಗುತ್ತದೆ. ಕೌನ್ಸಿಲರ್ ಆಗಿರುವುದೇ ದುಡ್ಡು ಮಾಡಲು ಎಂದು ರಣಹಸಿವಿನಿಂದ ಕೂಡಿರುವ ಕೆಲ ಪುರುಷ-ಮಹಿಳಾ ಸದಸ್ಯರು ಮಾತೆತ್ತಿದರೆ ದುಡ್ಡು ಕೊಡಿ ಎನ್ನುತ್ತಾರೆ. ಸಹಿ ಹಾಕಿ ಎಂದರೆ ಎಷ್ಟು ಕೊಡ್ತೀರಾ ಎನ್ನುವ ನಗರಸಭಾ ಸದಸ್ಯರಿಂದ ನಗರಾಭಿವೃದ್ಧಿ ಆಗುತ್ತದೆ ಎಂದುಕೊಳ್ಳುವುದು ಮೂರ್ಖತನ.

ಪೇಮೆಂಟ್ ಸದಸ್ಯರ ಹಾವಳಿಯಿಂದ ನಗರಸಭೆಯ ಮಾನ ಮೂರು ಕಾಸಿಗೆ ಹರಾಜಾಗಿದೆ. ಇನ್ನು ಕೆಲವು ಸಂಘಟನೆಗಳ ಪುಂಗಣ್ಣ ನಾಯಕರು ಬ್ಲಾಕ್‌ಮೇಲ್ ಮಾಡಿಕೊಂಡು ಕಸ, ಲೈಟು ನಿರ್ವಹಣೆ ಸಮರ್ಪಕವಾಗಿಲ್ಲ ಎಂದೇಳಿಕೊಂಡು ಗುತ್ತಿಗೆದಾರರಿಂದ ದುಡ್ಡು ಮಾಡಿಕೊಳ್ಳುತ್ತಿದ್ದಾರೆ. ಒಟ್ಟಾರೆ ಮಂಡ್ಯ ನಗರಸಭೆಯ ಆಡಳಿತ ಅಧ್ವಾನವಾಗಿ ಹೋಗಿದೆ. ಅಧ್ಯಕ್ಷರಾದವರು ನಗರಸಭೆಯನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಆಡಳಿತ ವ್ಯವಸ್ಥೆ ಸುಧಾರಿಸಬೇಕು. ಆದರೆ ಹೊಸಹಳ್ಳಿ ಬೋರೇಗೌಡರಿಂದ ಅದು ಇದುವರೆಗೂ ಸಾಧ್ಯವಾಗಿಲ್ಲ. ಇನ್ನುಳಿದ ಅವಧಿಯಲ್ಲಾದರೂ ಬೋರೇಗೌಡ ಸಮರ್ಥವಾಗಿ ಆಡಳಿತ ನಡೆಸಿದರೆ ಅವರಿಗೂ ಒಳ್ಳೆಯ ಹೆಸರು ಬರುತ್ತದೆ. ಇಲ್ಲದಿದ್ದರೆ ಬಂದ ಪುಟ್ಟ ಹೋದ ಪುಟ್ಟ ಎಂಬಂತಾಗಿ ಇವರು ಅವಧಿ ಪೂರೈಸಿ ಕೆಳಗಿಳಿಯುತ್ತಾರಷ್ಟೆ.

■ ಮಂಡ್ಯ ನಾಗೇಶ್


ಹೊಸಹಳ್ಳಿ ಬೋರೇಗೌಡ


ಅನಿಲ್ ಕುಮಾರ್

ಕಳೆದ ವರ್ಷ ಮಾರ್ಚ್ 16ರಂದು ಬರೋಬ್ಬರಿ ಅರ್ಧ ಕೋಟಿಗೂ ಹೆಚ್ಚು ಹಣ ಸುರಿದು ಅಧ್ಯಕ್ಷಗಿರಿ ಹಿಡಿದಿದ್ದ ಹೊಸಹಳ್ಳಿ ಬೋರೇಗೌಡನ ವಿರುದ್ಧ ಕೇವಲ 9 ತಿಂಗಳು ಕಳೆಯುವಷ್ಟರಲ್ಲಿಯೇ ಪೇಮೆಂಟ್ ಸದಸ್ಯರಲ್ಲಿ ಹಸಿವು ಕಾಣಿಸಿಕೊಂಡಿತ್ತು. ಅಧ್ಯಕ್ಷ ಬೋರೇಗೌಡ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ; ಸರಿಯಾಗಿ ಆಡಳಿತ ನಡೆಸುತ್ತಿಲ್ಲ ಎಂದು ಪೇಮೆಂಟ್ ಸದಸ್ಯರು ಬೊಬ್ಬೆ ಹಾಕಲಾರಂಭಿಸಿದರು. ಆದರೆ ಅಸಲಿ ಕಾರಣ ಬೇರೆಯೇ ಇತ್ತು. ಈ ಬಾರಿ ಗೆದ್ದು ಬಂದಿರುವ ಬಹುತೇಕ ಸದಸ್ಯರು ಪೇಮೆಂಟ್ ಗಿರಾಕಿಗಳು. ದುಡ್ಡಿನ ಮುಂದೆ ತತ್ವ-ಸಿದ್ಧಾಂತ ಕಾಲಕಸ ಎಂದುಕೊಂಡಿರುವ ಸದಸ್ಯರು ಮತ್ತೊಂದು ಸುತ್ತಿನ ಪೇಮೆಂಟ್‌ಗಾಗಿ ಕಾಯುತ್ತಿದ್ದರು. ಆಗ ಅವರಿಗೆ ಸಿಕ್ಕ ಮಿಕ 30ನೇ ವಾರ್ಡ್‌ನ ಕಾಂಗ್ರೆಸ್ ಸದಸ್ಯ ಅನಿಲ್‌ಕುಮಾರ್. ಬೋರೇಗೌಡನನ್ನು ಕೆಳಗಿಳಿಸಲು ನಾವು ಸಾಥ್ ಕೊಡುತ್ತೇವೆ, ನೀನು ಬಂಡವಾಳ ಹಾಕು ಎಂದು ತಿದಿಯೊತ್ತಿದ್ದ ಪೇಮೆಂಟ್ ಸದಸ್ಯರು 23 ಮಂದಿಯ ಸಹಿ ಪಡೆದು ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಸಭೆ ಕರೆಯುವಂತೆ ಆಯುಕ್ತರಿಗೆ ಪತ್ರ ಕೊಟ್ಟರು.


ಬೋರೇಗೌಡನ ಅಧ್ಯಕ್ಷಗಿರಿ ಉಳಿಸಿದ ಸದಸ್ಯರು

ಲಿಂಗಸಗೂರು: ಮಾನಪ್ಪನ ಒಳಮೀಸಲು ವಿರೋಧ

ರಾಜ್ಯದಲ್ಲಿ ಒಳಮೀಸಲಾತಿ ಪರ ಕೂಗು ಗಟ್ಟಿಗೊಳ್ಳುತ್ತಿದೆ. ಶೋಷಿತ ಮಾದಿಗ ಸಮುದಾಯವು ಈ ಹೋರಾಟದ ನೇತೃತ್ವ ವಹಿಸಿದೆ. ಇತ್ತೀಚೆಗೆ ಸದಾಶಿವ ಆಯೋಗದ ವರದಿ ಜಾರಿಗಾಗಿ ಆಗ್ರಹಿಸಿ ಮಾದಿಗ ಸಮುದಾಯ ಹುಬ್ಬಳ್ಳಿಯಲ್ಲಿ ಬೃಹತ್ ಸಮಾವೇಶ ಏರ್ಪಡಿಸಿ ತನ್ನ ಶಕ್ತಿ ಪ್ರದರ್ಶನ ನಡೆಸಿತ್ತು. ಆರಂಭದಲ್ಲಿ ಇದನ್ನು ಬಿಜೆಪಿ ಹೈಜಾಕ್ ಮಾಡಲು ಯತ್ನಿಸಿತಾದರೂ ತನ್ನ ಇಚ್ಛಾಶಕ್ತಿಯ ಕೊರತೆ ಮತ್ತು ಸದಾಶಿವ ಆಯೋಗದ ವರದಿ ಜಾರಿ ವಿಚಾರದಲ್ಲಿ ಸುಳ್ಳು ಹೇಳಿ ನಂಬಿಸಲು ಸಾಧ್ಯವಿಲ್ಲದ ಕಾರಣ ತೆಪ್ಪಗಾಯಿತು. ತದನಂತರದಲ್ಲಿ ಈ ಸಮಾವೇಶದ ಮಹತ್ವ ಕಾಂಗ್ರೆಸ್‌ಗೆ ಅರ್ಥವಾಯಿತು ಅನ್ನಿಸುತ್ತೆ ಆದಕ್ಕೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಸಚಿವರು, ಶಾಸಕರು ಸಮಾವೇಶದಲ್ಲಿ ಭಾಗವಹಿಸಿ ಭರವಸೆ ನೀಡಿ ಹೋಗಿದ್ದಾರೆ.

ಸದ್ಯಕ್ಕೆ ಸದಾಶಿವ ಆಯೋಗದ ವರದಿ ಜಾರಿಯಾಗುತ್ತದೋ ಇಲ್ಲವೋ ಬೇರೆ ಮಾತು, ಆದರೆ ಆದರ ಪರ ಮಾತನಾಡಬೇಕಾದ ಅನಿವಾರ್ಯ ಸ್ಥಿತಿಗೆ ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು ಸಿಲುಕಬೇಕಾದ ಹೋರಾಟದ ಸ್ಥಿತಿ ನಿರ್ಮಾಣವಾಗಿದೆ. ಒಳಮೀಸಲಾತಿ ಜಾರಿಯಾಗಬೇಕಿರುವುದು ನ್ಯಾಯಯುತವೂ ಆಗಿದೆ. ಆದರೆ ಇಂತಹ ಪರಿಸ್ಥಿತಿಯಲ್ಲಿಯೂ ಲಿಂಗಸಗೂರು ಶಾಸಕ ಮಾನಪ್ಪ ವಜ್ಜಲ್ ಮಾತ್ರ ಬಹಿರಂಗವಾಗಿಯೇ ಒಳಮೀಸಲಾತಿಗೆ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ದಲಿತರಲ್ಲಿ ಮಾದಿಗ ಸಮುದಾಯದವರೇ ಹೆಚ್ಚಿರುವ ರಾಯಚೂರು ಜಿಲ್ಲೆಯಲ್ಲಿಯೇ ಸದಾಶಿವ ವರದಿಯ ವಿರುದ್ಧ ಮೂರು ಪ್ರತಿಭಟನೆಗಳನ್ನು ಮಾಡಿಸಿರುವುದಲ್ಲದೇ ಇದರ ಕುರಿತು ಆಕ್ಷೇಪ ವ್ಯಕ್ತಪಡಿಸಿದ ಚಿತ್ರದುರ್ಗ ವ್ಯಕ್ತಿಯೊಬ್ಬರ ವಿರುದ್ಧ ಕೊಲೆ ಬೆದರಿಕೆ ದೂರು ದಾಖಲಿಸುವಷ್ಟರಮಟ್ಟಿಗೆ ಈತನ ಒಳಮೀಸಲು ವಿರೋಧ ವ್ಯಕ್ತಗೊಂಡಿದೆ.


ಒಳಮೀಸಲಾತಿ ವಿರೋಧಿಸಲು ಕಾರಣವೇನು?

ಸತತ ಎರಡನೇ ಬಾರಿಗೆ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರವಾದ ಲಿಂಗಸಗೂರಿನಿಂದ ಜೆಡಿಎಸ್ ಶಾಸಕನಾಗಿ ಆಯ್ಕೆಯಾಗಿರುವ ಮಾನಪ್ಪ ವಜ್ಜಲ್, ದಲಿತರಲ್ಲೇ ಮೇಲ್ಜಾತಿ ಅಥವಾ ಸ್ಪೃಶ್ಯ ಜಾತಿಯಾದ ಭೋವಿ (ವಡ್ಡರ್) ಸಮುದಾಯಕ್ಕೆ ಸೇರಿದವ. ಲಿಂಗಸಗೂರು ಮಾತ್ರವಲ್ಲದೇ ರಾಯಚೂರು ಜಿಲ್ಲೆ ಸೇರಿದಂತೆ ಇಡೀ ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿ ದಲಿತರಲ್ಲಿ ಮಾದಿಗ ಸಮುದಾಯದ ಜನಸಂಖ್ಯೆಯೇ ಹೆಚ್ಚು. ಬಹಳಷ್ಟು ಕಾಲ ಈ ಸಮುದಾಯ ಅವಕಾಶವಂಚಿತರಾದ್ದರಿಂದ ಸಹಜವಾಗಿಯೇ ರಾಜಕೀಯ ಕ್ಷೇತ್ರದಲ್ಲಿಯೂ ಮುಂದೆ ಬರಲು ಸಾಧ್ಯವಾಗಿಲ್ಲ. ರಾಯಚೂರು ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷನಾಗಿದ್ದ ಎ.ವಸಂತ್‌ಕುಮಾರ್ ಬಿಟ್ಟರೆ ಉಳಿದಂತೆ ರಾಜಕಾರಣದಲ್ಲಿ ಮಾದಿಗ ಸಮುದಾಯದಿಂದ ಮಿಂಚಿದ ಮುಖಗಳೇ ಕಮ್ಮಿ.


ಹಣಕಾಸಿನ ವಿಷಯದಲ್ಲಿ ಪ್ರಬಲರಾಗಿರುವವರಿಗೆ ಮಾತ್ರ ರಾಜಕೀಯ ಪಕ್ಷಗಳು ಟಿಕೆಟ್ ನೀಡುವುದರಿಂದ ಲಿಂಗಸಗೂರು ಮೀಸಲು ಕ್ಷೇತ್ರವಾದರು ಯಾವೊಬ್ಬ ಮಾದಿಗ ಸಮುದಾಯದವರಿಗೆ ಯಾವೊಂದು ಪಕ್ಷವೂ ಟಿಕೆಟ್ ನೀಡುತ್ತಿಲ್ಲ, ಇದನ್ನೇ ಪ್ಲಸ್‌ಪಾಯಿಂಟ್ ಆಗಿಸಿಕೊಂಡಿರುವ ಮಾನಪ್ಪ ವಜ್ಜಲ್ ಮೇಲ್ಜಾತಿ ಸಮುದಾಯಗಳ ಜೀ ಹುಜೂರ್ ಆಸಾಮಿಯಂತೆ ಶಾಸಕನಾಗಿ ಮೆರೆಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಒಳಮೀಸಲಾತಿ ಕೂಗು ಜೋರಾದರೆ ಅಥವಾ ಆ ಕೂಗಿಗೆ ಮಣಿದು ಸದಾಶಿವ ವರದಿಯೇನಾದರೂ ಜಾರಿಯಾದರೆ ಸಹಜವಾಗಿ ಲಿಂಗಸಗೂರು ಕ್ಷೇತ್ರದ ಮೇಲೆ ತನ್ನ ಹಿಡಿತ ಕೈತಪ್ಪುತ್ತದೆ ಅನ್ನೋದು ಮಾನಪ್ಪನ ಭಯ. ಅಲ್ಲದೇ ಮುಂದಿನ ಸಲ ಅತಂತ್ರ ವಿಧಾನಸಭೆ ನಿರ್ಮಾಣವಾಗಿ ಕಾಂಗ್ರೆಸ್ಸೋ, ಬಿಜೆಪಿಯೋ ಅಧಿಕಾರ ಹಿಡಿಯಬೇಕೆಂದರೆ ಜೆಡಿಎಸ್‌ನ ಸಾಥ್ ಬೇಕೇಬೇಕು; ಆಗ ಮೂರನೇ ಸಲ ಎಂಎಲ್‌ಎ ಆಗಿ ಆಯ್ಕೆಯಾಗುವ ತನಗೆ ಮಂತ್ರಿಗಿರಿ ಕಾಯಂ ಅನ್ನೋ ಕನಸಿನಲ್ಲೇ ಒಳಮೀಸಲಾತಿ ವಿರುದ್ಧ ಅಖಾಡಕ್ಕಿಳಿದಿದ್ದಾರೆ.

ಮೂರು ಪ್ರತಿಭಟನೆ ಮತ್ತು ದೂರು


ಒಳಮೀಸಲಾತಿ ಪರ ಹೋರಾಟಗಳು ಮಾನಪ್ಪ ವಜ್ಜಲ್‌ನ ನಿದ್ದೆಗೆಡಿಸಿದಂತಿವೆ. ಅಷ್ಟೇ ಅಲ್ಲ ಈತನನ್ನು ಬೆಂಬಲಿಸುವ ಜೆಡಿಎಸ್ ಮಾಜಿ ತಾಲ್ಲೂಕು ಅಧ್ಯಕ್ಷ ಲಿಂಗಾಯತ ಸಮುದಾಯದ ಭೂಪನಗೌಡ ಕರಡಕಲ್ ಮತ್ತು ನಾಯಕ ಸಮುದಾಯದ ರಾಜಸೋಮನಾಥ್ ನಾಯಕ್‌ರಂತವರೂ ಸದಾಶಿವ ವರದಿ ಜಾರಿಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಮಾನಪ್ಪ ವಜ್ಜಲ್‌ನ ತಮ್ಮ ನಾಗಪ್ಪ ವಜ್ಜಲ್ ದೊಡ್ಡ ಕಂಟ್ರಾಕ್ಟರ್. ಅಣ್ಣನ ಪ್ರಭಾವದಡಿ ಬಹಳಷ್ಟು ಕಾಮಗಾರಿ ಗುತ್ತಿಗೆ ಹಿಡಿದು ದುಂಡಗಾದವನು. ಅಣ್ಣನಂತೆ ಇವನಿಗೂ ಒಳಮೀಸಲಾತಿ ಬೇಡವಾಗಿದೆ. ಭೂಪನಗೌಡ ಕರಡಕಲ್, ರಾಜಸೋಮನಾಥ್ ನಾಯಕ್ ಮತ್ತು ನಾಗಪ್ಪ ವಜ್ಜಲ್, ಈ ಮೂರು ಜನರ ತಾಳಕ್ಕೆ ತಕ್ಕಂತೆ ಮಾನಪ್ಪ ವಜ್ಜಲ್ ಕುಣಿಯುತ್ತಿದ್ದಾರೆ. ಒಂದುವೇಳೆ ಒಳಮೀಸಲಾತಿ ಹೋರಾಟ ಜೋರಾಗಿ, ಆ ನೆಪದಲ್ಲಿ ಮಾದಿಗ ಸಮುದಾಯದಲ್ಲಿ ಹೊಸ ನಾಯಕತ್ವಗಳು ರೂಪುಗೊಂಡರೆ,



ಮಾನಪ್ಪ ವಜ್ಜಲ್



ನಾಗಪ್ಪ ವಜ್ಜಲ್



ವಸಂತ್ ಕುಮಾರ್

ಲಿಂಗಸಗೂರು ಕ್ಷೇತ್ರದಲ್ಲಿ ಬಹುಸಂಖ್ಯಾತರಾಗಿರುವ ಮಾದಿಗ ಸಮುದಾಯಕ್ಕೇ ಟಿಕೆಟ್ ಸಿಕ್ಕು ತನಗೆ ಕೈತಪ್ಪಿದರೆ ಏನುಗತಿ ಅನ್ನೋ ಆತಂಕ ಆತನದು. ಹಾಗಾಗಿ ಈತನ ಪಟಾಲಮ್ಮೇ ಮುಂದೆ ನಿಂತು ಲಿಂಗಸಗೂರು, ಮಸ್ಕಿಯಲ್ಲಿ ಒಳಮೀಸಲಾತಿ ವಿರುದ್ಧ ಮೂರು ಪ್ರತಿಭಟನೆಗಳನ್ನು ನಡೆಸಿದೆ.

ಮಾನಪ್ಪ ವಜ್ಜಲ್ ಒಳಮೀಸಲಾತಿಯ ವಿರುದ್ಧ ಬಡಬಡಿಸುತ್ತಿರುವುದನ್ನು ಗಮನಿಸಿದ ಚಿತ್ರದುರ್ಗದ ಮಾದಿಗ ಸಮುದಾಯದ ಮುಖಂಡರಾದ ನಾಗರಾಜ್ ಕೋಲ್ಕರ್ ಎಂಬಾತ ಮಾನಪ್ಪ ವಜ್ಜಲ್‌ಗೆ ಫೋನ್ ಮಾಡಿ ಒಳಮೀಸಲಾತಿಯ ಅಗತ್ಯತೆಯ ಬಗ್ಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ್ದರು. ನೀವೊಬ್ಬ ದಲಿತರಾಗಿ ಇನ್ನೊಬ್ಬ ದಲಿತರ ನೋವುಗಳನ್ನು ಅರ್ಥಮಾಡಿಕೊಳ್ಳಿ ಅಂತ ಮನವಿ ಮಾಡಿದ್ದರು. ಅಷ್ಟಕ್ಕೇ ಕುಪಿತಗೊಂಡ ಮಾನಪ್ಪ ವಜ್ಜಲ್ 'ನನಗೆ ಬುದ್ಧಿ ಹೇಳಲು ಬರುತ್ತೀಯಾ? ಏನು ಮಾಡಬೇಕು, ಬಿಡಬೇಕು ಎಂದು ನನಗೆ ಗೊತ್ತಿದೆ, ನಿಮ್ಮದು ಜಾಸ್ತಿಯಾಯ್ತು, ನೋಡ್ತಾ ಇರಿ ಮಾಡ್ತೀನಿ ನಿಮಗೆ' ಎಂದು ಫೋನ್ ಕಟ್ ಮಾಡಿದ್ದೇ ತಡ ಲಿಂಗಸಗೂರು ಪೊಲೀಸ್ ಠಾಣೆಯಲ್ಲಿ, ಅಪರಿಚಿತ ವ್ಯಕ್ತಿಯೊಬ್ಬ ತನಗೆ ಫೋನ್ ಮಾಡಿ ಪ್ರಾಣ ಬೆದರಿಕೆ ಹಾಕಿದ್ದಾನೆ ಎಂಬ ದೂರು ನೀಡಿದ್ದಾರೆ.

ಶಾಸಕರೇ ದೂರು ಕೊಟ್ಟಮೇಲೆ ಪೊಲೀಸರು ಸುಮ್ಮನಿರುತ್ತಾರಾ? ಈಗಾಗಲೇ ಪೊಲೀಸರು ನಾಗರಾಜ್ ಕೋಲ್ಕರ್ ಮೇಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಶುರುಮಾಡಿದ್ದಾರೆ. ಮಾನಪ್ಪ ವಜ್ಜಲ್ ತನ್ನ ವಿರುದ್ಧ ಯಾರೂ ಮಾತನಾಡದಂತಹ ಜಂಗಲ್‌ರಾಜ್ ನಡೆಸುತ್ತಿರೋದು ಇದರಿಂದಲೇ ಸಾಬೀತಾಗುತ್ತೆ.

ಪ್ರಗತಿ ಶೂನ್ಯ, ದೌರ್ಜನ್ಯ ಮಾನ್ಯ

ಲಿಂಗಸಗೂರು ಕ್ಷೇತ್ರದಲ್ಲಿ ಏಳೆಂಟು ವರ್ಷಗಳ ಹಿಂದೆ ನಡೆದ ಅಭಿವೃದ್ಧಿ ಕೆಲಸಗಳ ಶಿಥಿಲಾವಸ್ಥೆಯ ಕುರುಹುಗಳು ಬಿಟ್ಟರೆ ಮಾನಪ್ಪ ವಜ್ಜಲ್ ಶಾಸಕಗಿರಿಯನ್ನು ಎತ್ತಿತೋರುವಂತ ಯಾವೊಂದು ಕಾಮಗಾರಿಯೂ ಕಾಣುವುದಿಲ್ಲ. ರಾಂಪುರ ಏತ ನೀರಾವರಿ ಯೋಜನೆಯಲ್ಲಿ ನಿರ್ವಹಿಸಿದ ಕಾಮಗಾರಿಗಳು ಹಳ್ಳ ಹಿಡಿದಿದ್ದು, ರೈತರ ಜಮೀನಿಗೆ ಸಮರ್ಪಕವಾಗಿ ನೀರು ದೊರೆಯುತ್ತಿಲ್ಲ. ಈ ಯೋಜನೆಯಲ್ಲಿ ಮಾನಪ್ಪ ಭರಪೂರ ಆಮದನಿ ಕಂಡದ್ದು ಬಿಟ್ಟರೆ ಜನರಿಗೆ ಹೆಚ್ಚೇನೂ ಅನುಕೂಲವಾಗಿಲ್ಲ ಎನ್ನುವುದು ಸ್ಥಳೀಯರ ವಾದ. ಕೃಷ್ಣ ನದಿಯ ದಂಡೆಯಲ್ಲಿಯೇ ಇರುವ ಲಿಂಗಸಗೂರು ತಾಲೂಕಿನಲ್ಲಿ ನೀರಾವರಿ ಯೋಜನೆಗಳಿದ್ದರೂ ಸಮರ್ಪಕವಾಗಿ ಅನುಷ್ಠಾನಗೊಳ್ಳದ ಕಾರಣ ಲಿಂಗಸಗೂರು ಈಗಲೂ ಬರದ ಬೆಂಗಾಡಾಗಿದೆ. ಮಳೆ ಬಂದರೆ ಮಾತ್ರ ಬೆಳೆ ಎನ್ನುವ ಪರಿಸ್ಥಿತಿ ಇಲ್ಲಿಯದು. ಅನ್ನಭಾಗ್ಯ ಯೋಜನೆಯಿಂದಾಗಿ ಜನ ಒಪ್ಪೊತ್ತಿನ ಊಟ ಕಾಣುವಂತಾಗಿದೆ. ಅದೇರೀತಿ ಎನ್‌ಆರ್‌ಬಿಸಿ 5ಎ ನಾಲೆ ಯೋಜನೆ ಜಾರಿಗಾಗಿ ಈ ಭಾಗದ ರೈತರು ಮೂರು ಸಲ ಪಾದಯಾತ್ರೆ ಮಾಡಿ ಮನವಿಪತ್ರ ಕೊಟ್ಟರೂ ಯಾವುದೇ ರೀತಿಯ ಸ್ಪಂದನೆ ಈ ಶಾಸಕನಿಂದ ದೊರೆತಿಲ್ಲ. ಸತತ ಬರದಿಂದಾಗಿ ಲಿಂಗಸಗೂರಿನಿಂದ ಉದ್ಯೋಗ ಅರಸಿ ಬೆಂಗಳೂರು, ಮಂಗಳೂರಿಗೆ ಗುಳೇ ಹೋಗುವವರ ಸಂಖ್ಯೆ ದಿನೇದಿನೇ ಹೆಚ್ಚಾಗುತ್ತಿದೆ.

ಇನ್ನು ರಸ್ತೆಗಳ ಕತೆ ಕೇಳುವುದೇ ಬೇಡ, ಸರ್ಜಾಪುರ ರಸ್ತೆ ಮರಣಶಯ್ಯೆಯಲ್ಲಿ ಒದ್ದಾಡಲು ಶುರುವಾಗಿ ವರ್ಷಗಳೇ ಕಳೆದುಹೋಗಿವೆ. ಹಟ್ಟಿ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿ ಮೇಲ್ದರ್ಜೆಗೆ ಏರಿಸಬೇಕೆಂದು ಗ್ರಾಮಸ್ಥರು ಬಹಳ ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದ್ದರೂ ಇದಕ್ಕೆ ಮಾನಪ್ಪ ವಜ್ಜಲ್ ಕವಡೆ ಕಾಸಿನ ಕಿಮ್ಮತ್ತು ನೀಡಿಲ್ಲ, ತನ್ನ ರಾಜಕೀಯ ಆಗುಹೋಗುಗಳ ಲೆಕ್ಕಾಚಾರದಲ್ಲಿ ಮುಳುಗಿರುವ ಮಾನಪ್ಪ ಅದಕ್ಕೆ ಅಡ್ಡಗಾಲಾಗಿದ್ದಾರೆ.

ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಾಂಡಾಗಳು ಇದ್ದರೂ ಇವುಗಳ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ತೋರಲಾಗಿದೆ. ಅಲ್ಲಿಯ ಜನರಿಗೆ ನೀರು, ವಿದ್ಯುತ್, ಆರೋಗ್ಯ ಮತ್ತು ಶಿಕ್ಷಣದಂತಹ ಮೂಲಭೂತ ಅಗತ್ಯ ಒದಗಿಸುವಲ್ಲಿ ಶಾಸಕನಾಗಿ ಮಾನಪ್ಪ ವಜ್ಜಲ ಸಂಪೂರ್ಣ ವಿಫಲನಾಗಿದ್ದಾರೆ. ಇನ್ನು ದಲಿತರ ಪರಿಸ್ಥಿತಿ ತೀರಾ ಚಿಂತಾಜನಕ. ಯರಡೋಣಿ ಘಟನೆ ಜಿಲ್ಲೆಯನ್ನೇ ಬೆಚ್ಚಿಬೀಳಿಸಿದೆ. ಯರಡೋಣಿಯ ಪ್ರಬಲ ಎಸ್ಟಿ ಸಮುದಾಯದವರು ಎಸ್ಸಿ ಸಮುದಾಯದವರ ಮೇಲೆ ದುರ್ಗಮ್ಮನ ಜಾತ್ರೆಗೆ ಕೋಣ ಕಡಿಯುವಂತೆ ತಾಕೀತು ಮಾಡಿದ್ದರು. ಆದರೆ ಅದನ್ನು ನಿರಾಕರಿಸಿದ್ದ ಎಸ್ಸಿ ಸಮುದಾಯ ಕಾನೂನುಪ್ರಕಾರ ಪ್ರಾಣಿಹತ್ಯೆ ಮಾಡುವಂತಿಲ್ಲ ಹಾಗಾಗಿ ನಾವು ಬಹಿರಂಗ ಕೋಣ ಕಡಿಯುವುದಿಲ್ಲ ಅಂತ ದಿಟ್ಟ ಉತ್ತರ ಕೊಟ್ಟಿದ್ದರು. ಇದರಿಂದ ಕುಪಿತರಾದ ಎಸ್ಟಿ ಸಮುದಾಯದವರು 'ನೀವೊಂದುವೇಳೆ ಕೋಣ ಕಡಿಯದಿದ್ದಲ್ಲಿ ಕೋಣ ಕಡಿಯುವ ಹಾಗೆ ನಿಮ್ಮನ್ನು ಕಡಿಯಬೇಕಾಗುತ್ತದೆ' ಅಂತ ಬೆದರಿಕೆ ಹಾಕಿದ್ದರು. ಕೊನೆಗೆ ಮಾತಿಗೆ ಮಾತು ಬೆಳೆದು ಗಲಭೆಗೆ ತಿರುಗಿಕೊಂಡು ಎಸ್ಸಿ ಸಮುದಾಯದವರ ಮೇಲೆ ಹಲ್ಲೆ ನಡೆಸಲಾಗಿತ್ತು. ಯರಡೋಣಿಯ ಹತ್ತು ದಲಿತ ಯುವಕರು ಈ ದಾಳಿಗೆ ಹೆದರಿ ಊರು ಬಿಟ್ಟು ಓಡಿಹೋಗಿದ್ದಾರೆ. ಇಷ್ಟೆಲ್ಲಾ ಆದರೂ ಮಾನಪ್ಪ ವಜ್ಜಲನ ಭಂಟ ರಾಜಸೋಮನಾಥ್ ನಾಯಕ್ ತನ್ನ ಎಸ್ಟಿ ಸಮದಾಯದ ಪರ ನಿಂತಿದ್ದಾನೆ. ಮಾನಪ್ಪ ವಜ್ಜಲ್‌ನ ದೋಸ್ತಿ ಬಳಸಿಕೊಂಡು ಈ ಘಟನೆಗಳು ಸ್ಥಳೀಯ ಮಾಧ್ಯಮಗಳಲ್ಲಿ ವರದಿಯಾಗದಂತೆ ತಡೆದಿದ್ದಾನೆ. ಇಂಥಾ ದೌರ್ಜನ್ಯ ನಡೆದರೂ ಮೀಸಲು ಕ್ಷೇತ್ರದ ಶಾಸಕ ಎನಿಸಿಕೊಂಡ ಮಾನಪ್ಪ ವಜ್ಜಲ್ ಇತ್ತ ತಲೆ ಹಾಕಿಲ್ಲ ಎಂದಾದರೆ ಆವರ ದಲಿತ ಪರ ಕಾಳಜಿ ಎಂತದ್ದಿರಬೇಡ.


ಅಣ್ಣತಮ್ಮಂದಿರ ಐಷಾರಾಮಿ ಜೀವನ

ಇತ್ತ ಮೂಲಸೌಕರ್ಯಗಳಿಲ್ಲದೆ ಜನ ಸಂಕಷ್ಟದಲ್ಲಿ ನರಳುತ್ತಿದ್ದರೆ ಅತ್ತ ಶಾಸಕ ಮಾನಪ್ಪ ವಜ್ಜಲ್ ಮತ್ತು ಆತನ ತಮ್ಮ ನಾಗಪ್ಪ ವಜ್ಜಲ್‌ನ ಐಷಾರಾಮಿ ಜೀವನ ಶೈಲಿ ಪ್ರಜಾಪ್ರಭುತ್ವವನ್ನೇ ಅಣಕಿಸುವಂತಿದೆ. ತಮ್ಮನನ್ನು ಭಾರೀ ಕಾಂಟ್ರಾಕ್ಟರ್ ಮಾಡಿರುವ ಮಾನಪ್ಪ ದೊಡ್ಡ ಯೋಜನೆ ಮತ್ತು ಕಾಮಗಾರಿಗಳನ್ನು ಕಬಳಿಸುವದರಲ್ಲಿ ನಿಸ್ಸೀಮ. ಹಾಗಾಗಿಯೇ ಲಿಂಗಸಗೂರು ರಸ್ತೆಯ ಚಿನ್ನದಂತಹ ಬಂಗಲೆ ಕಟ್ಟಲು ನಾಗಪ್ಪ ವಜ್ಜಲ… ಸಾಧ್ಯವಾದದ್ದು. 2015ರಲ್ಲಿ ಐಟಿ ಅಧಿಕಾರಿಗಳು … ಮನೆ ಮೇಲೆ ದಾಳಿ ಮಾಡಿದ್ದರು. ಆದರೆ ಹಣ, ಅಧಿಕ… ವಿರುವ ಈ ಸಹೋದರರು ಇದರಿಂದ ಹೊರಬರ… ಸಾಹಸವೇನೂ ಮಾಡಬೇಕಾಗಲಿಲ್ಲ. ಇದೇ ಹಣದ ಮ… ದಿಂದಲೇ ಕಳೆದ ಎಲೆಕ್ಷನ್‌ನಲ್ಲಿ ನಾಗಪ್ಪ ವಜ್ಜಲ್ ದೇವದು… ಕ್ಷೇತ್ರದಿಂದ ಕಾಂಗ್ರೆಸ್‌ನ ಹನುಮಂತಪ್ಪ ಆಲ್ಕೋಡ್ ವಿರು… ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಇವರಿಗೆ ದಲ… ಎಂಬ ಪದವೇನಿದ್ದರೂ ಚುನಾವಣೆಯ ಸಂದರ್ಭದ… ಮೀಸಲು ಕ್ಷೇತ್ರದಿಂದ ಸ್ಪರ್ಧಿಸಲು ಮತ್ತು ಮತ ಪಡೆಯ… ಸೀಮಿತವಷ್ಟೇ. ಇನ್ನುಳಿದಂತೆ ಪಕ್ಕಾ ಪಾಳೇಗಾರಿಕೆ ನಡವ… ಈ ಸೋದರರದ್ದು.

ಇಂತಿಪ್ಪ ಮಾನಪ್ಪ ಈಗ ಒಳಮೀಸಲಾತಿಗ… ಕಲ್ಲುಹಾಕಲು ಹಾತೊರೆಯುತ್ತಿದ್ದಾರೆ. ಸರ್ಕಾರಗ… ಒಳಮೀಸಲಾತಿ ಜಾರಿ ಮಾಡುವ ಭಾಷಣ ಮಾಡಿ, ಕೊ… ಇಂತವರ ವಿರೋಧಗಳ ಬೆದರುಬೊಂಬೆ ತೋರಿಸಿ ತಪ್ಪ… ಗುವ ಖಯಾಲಿಯನ್ನು ಚೆನ್ನಾಗಿ ಕರಗತ ಮಾಡಿಕೊಂಡಿ… ಸಿದ್ದರಾಮಯ್ಯನವರ ಸರ್ಕಾರ ಅಂತಹ ಸಂಪ್ರದಾಯವ… ಮುರಿಯುತ್ತಾ ಅಥವಾ ಹಳೇ ಸರ್ಕಾರಗಳ ಚಾಳಿಯ… ಮುಂದುವರೆಸುತ್ತಾ ಕಾದುನೋಡಬೇಕು. ವಿಪರ್ಯಾಸವೆಂದ… ಇಡೀ ರಾಯಚೂರು ಜಿಲ್ಲೆಯ ಏಕೈಕ ಮಾದಿಗ ನಾಯ… ಎನಿಸಿಕೊಂಡಿದ್ದ ವಸಂತ್‌ಕುಮಾರ್‌ನನ್ನೂ ಕಾಂಗ್ರೆಸ್ ಜಿಲ್ಲಾ… ಪಟ್ಟದಿಂದ ಕೆಳಗಿಳಿಸಿರುವ ಕಾಂಗ್ರೆಸ್ಸಿನಲ್ಲಿ… ಡಿ.ಎಚ್.ಹುಲಿಗೇರಿ ಮಾತ್ರ ಮಾನಪ್ಪ ವಜ್ಜಲ್‌ಗೆ ಪೈಪೋ… ಕೊಡುವ ವ್ಯಕ್ತಿಯಾಗಿದ್ದಾರೆ. ಈತನೂ ದೊಡ್ಡ ಗ್ರಾನೈ… ಕುಳವಾಗಿದ್ದು ಶೋಷಿತ ಜನರ ಪರ ನಿಲ್ಲುತ್ತಾರೆ… ಭರವಸೆಗಳಿಲ್ಲ. ಈಗ ತಳಸಮುದಾಯಗಳ ಶೋಷಿತರ… ಹೋರಾಟವೊಂದೇ ಉಳಿದ ಮಾರ್ಗ.

■ ಮುತ್ತುರಾ…

ಚಿತ್ರದುರ್ಗ ನಗರಸಭೆ: ಹಮಾಲಿ ಕಾಂತನದ್ದೇ ಕಾರುಬಾರು!


ಹಮಾಲಿ ಕಾಂತ

ಹೇಳಿಕೊಳ್ಳಲು ಚಿತ್ರದುರ್ಗ ಜಿಲ್ಲಾ ಕೇಂದ್ರ, ಸಾಲದ್ದಕ್ಕೆ ...ಕರಿ ನಾಯಕನ ಏಳು ಸುತ್ತಿನ ಕೋಟೆಯ - ಒನಕೆ ...ವ್ವನ ಕಿಂಡಿಯ ಪ್ರವಾಸಿತಾಣ. ಆದರೂ ಅಭಿವೃದ್ಧಿಯ ...ರದಲ್ಲಿ ಈ ನತದೃಷ್ಟ ನಗರ ಎಪ್ಪತ್ತು ವರ್ಷಗಳಷ್ಟು ...ಕ್ಕೆ ಬಿದ್ದಿದೆ. ಅದೇ ಇಕ್ಕಟ್ಟು ಓಣಿಗಳು, ಧೂಳೆಬ್ಬಿಸುವ ...ಳು, ಫುಟ್‌ಪಾತೇ ಇಲ್ಲದ ದಾರಿಗಳು, ಒಟ್ಟಾರೆ ...ವಸ್ಥೆಯ ಆಗರವಾಗಿದೆ ಕನ್ನಡ ನಾಡಿನ ಐತಿಹಾಸಿಕ ... ಅತ್ತ ಅಭಿವೃದ್ಧಿಯೂ ಹೊಂದದ, ಇತ್ತ ಹೈ-ಕ ...ಲನ್ನೂ ತಪ್ಪಿಸಿಕೊಂಡ ಚಿತ್ರದುರ್ಗ ನಗರಕ್ಕೆ ಜನಪ್ರತಿನಿ...ೇ ಪರಮ ಸೈತಾನಿಗಳು. ಅದರಲ್ಲೂ ನಗರಸಭೆಗೆ ...ಸಿರುವ ಖತರ್ನಾಕ್ ದಂಡಪಿಂಡ ಕಾರ್ಪೊರೇಟರ್ ...ದ್ದಾರಲ್ಲ ಅವರ ಕಸುಬೇ ನಗರದ ಅಂದಗೆಡಿಸುವುದು. ...ುರ್ಗ ಜನರ ದುರ್ಗತಿಯೋ ಏನೋ ಈ ನಗರಸಭೆಗೆ ...ಂಥಾ ಫಟಿಂಗ ಪುಣ್ಯಾತ್ಮರು ಆರಿಸಿಬರುತ್ತಾರೆಂದರೆ ...ಕ್ಷನಾದವನು ನಗರಸಭೆ ಪಡಸಾಲೆಯಲ್ಲಿ ಇಸ್ಪೀಟ್ ...ು ನಿಭಾಯಿಸಿಕೊಂಡರೆ ಕಾರ್ಪೊರೇಟರ್ ಆಗುವವರಲ್ಲಿ ...ರ್ಕರ್ಧ ಮಂದಿ ಪೊಲೀಸ್ ಠಾಣೆಯ ಸ್ಲೇಟ್ ...ಿಗಳು.

...ದುರ್ಗದ ನಗರಸಭೆಯಲ್ಲಿ ಈ ಸಲ ಒಟ್ಟು 35 ...ದಿ ಸದಸ್ಯರಿದ್ದಾರೆ. ಅವರಲ್ಲಿ ಸುಮಾರು ಹತ್ತು ಮಂದಿ ... ಆಸಾಮಿಗಳು ಅಂತಂದರೆ ಇನ್ನು ದುರ್ಗ ಅದಿನ್ನೇಗೆ ...ತಿ ಕಾಣಬೇಕು. ಅಂದಹಾಗೆ, ಈ ಸಕಲಪ್ಪು ...ಕೋರ ಪಡಪೋಷಿಗಳಿಗೆ ತಿಪ್ಪಾರೆಡ್ಡಿ, ಎಸ್.ಕೆ. ಬಸವ...ನ್‌ನಂತಹ ಲೋಕಲ್ ಲೀಡರ್‌ಗಳೇ ಗಾಡ್‌ಫಾದರ್ ... ಈ ಇಬ್ಬರೂ ಪೈಪೋಟಿಗೆ ಬಿದ್ದವರಂತೆ ಕ್ರೈಮ್ ...ಗರನ್ನೇ ನಗರಸಭೆಯ ಸದಸ್ಯರನ್ನಾಗಿಸುತ್ತಿರೋದು ಅವರ ...ಕ್ಕೇ ವಿನಃ ಜನರ ಉದ್ಧಾರಕ್ಕಂತೂ ಅಲ್ಲವೇ ಅಲ್ಲ.

ಹಮಾಲಿ ಕಾಂತ

...ಚಿತ್ರದುರ್ಗದ ನಗರಸಭೆಯನ್ನು ರಾಜಾರೋಷವಾಗಿ ಹೀರಿ ಬಿಸಾಕಿದ್ದವರಲ್ಲಿ ಹಮಾಲಿ ಕಾಂತರಾಜನದ್ದೇ ಮೊದಲ ಹೆಸರು. ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಹಮಾಲಿಗಿರಿ ಮಾಡಿಕೊಂಡಿದ್ದ ಒರಟು ಕಾಂತ ಕಾಟನ್ ಮರ್ಚೆಂಟ್ ಕಂ ರಾಜಕಾರಣಿ ತಿಪ್ಪಾರೆಡ್ಡಿಯ ಶಿಷ್ಯನಾದ. ಜೊತೆಗೆ ಕಾಂತ ಚಿತ್ರದುರ್ಗದ ಕ್ರೈಮ್ ಅಡ್ಡಾದ ಬಾಸ್‌ನಂತೆ ಉರುವಣಿಗೆ ಶುರುಹಚ್ಚಿದ್ದ. ಹಮಾಲಿ ಗ್ಯಾಂಗಿನ ಒಂದಷ್ಟು ಒರಟುತನ, ಜಾತಿಕಾರಣಕ್ಕೆ ವೀರಮದಕರಿ ಗೆಟಪ್ಪಿನ ದುರಹಂಕಾರ ರೂಢಿಸಿಕೊಂಡ. ಆಗಷ್ಟೇ ತಿಪ್ಪಾರೆಡ್ಡಿಯ ಜಪ ಮಾಡುತ್ತಾ ನಗರಸಭೆ ಸದಸ್ಯನಾಗಿ ಆಯ್ಕೆಯಾಗಿದ್ದ. 2003ರ ಬರಗಾಲದಿಂದ ಜನ ಕುಡಿಯುವ ನೀರಿಗೂ ತತ್ತರಿಸುತ್ತಿದ್ದಾಗ ಟ್ಯಾಂಕರ್ ಮೂಲಕ ಜನರಿಗೆ ನೀರುಣಿಸುವ ಸಾಹಸಕ್ಕೆ ಸರ್ಕಾರ ಕೈಹಾಕಿತ್ತು. ಆಗ ಶಾಸಕನಾಗಿದ್ದ ತಿಪ್ಪಾರೆಡ್ಡಿ ಆ ಕಾಂಟ್ರ್ಯಾಕ್ಟ್ ಕೊಡಿಸಿದ್ದು ಇದೇ ಕಾಂತನಿಗೆ. ನೀರು ಸರಬರಾಜು ನೆಪದಲ್ಲಿ ಕಾಂತ ಬರೋಬ್ಬರಿ ಎಂಬತ್ತು ಲಕ್ಷವನ್ನು ನೀರಿನಷ್ಟೆ ಸಲೀಸಾಗಿ ಕುಡಿದು ಬಿಸಾಕಿದ್ದ. ಆ ಹಗರಣ ಬಯಲಾಗಿ, ಆಗ ಚಿತ್ರದುರ್ಗದ ಡಿಸಿಯಾಗಿದ್ದ ಅಮರನಾರಾಯಣ ಸಾಹೇಬರು ಬಾಕಿ ಕೊಡಬೇಕಿದ್ದ ನಲ್ವತ್ತು ಲಕ್ಷ ರೂಪಾಯಿಗೆ ಕೊಕ್ಕೆ ಹಾಕಿದ್ದರು. ಕಾಂತ ವಿಲವಿಲ ಒದ್ದಾಡಿಹೋಗಿದ್ದ. ತಿಪ್ಪಾರೆಡ್ಡಿ ಅದೆಂತಹ ಸಮಯಸಾಧಕ ರಾಜಕಾರಣಿ ಎಂದರೆ ಅವನ ಚೇಲಾ ಕಾಂತ ಬಿಲ್ ಬಿಡಿಸಿಕೊಳ್ಳಲು ಒದ್ದಾಡುತ್ತಿದ್ದರೂ ಎಲ್ಲಿ ಆ ಕೆಸರು ತನ್ನ ಮುಸುಡಿಗೂ ಸವರಿಕೊಂಡುಬಿಡುತ್ತೋ ಅಂತ ಸೈಲೆಂಟಾಗಿ ಸೈಡಿಗುಳಿದುಬಿಟ್ಟ. ಆಗಲೇ ಕಾಂತ, ತಿಪ್ಪಾರೆಡ್ಡಿಯಿಂದ ದೂರ ಸರಿಯಲು ಶುರು ಮಾಡಿದ್ದು. ಆದರೆ ಆಗ ಖತರ್ನಾಕ್ ಕಾಂತನ ಕೈಹಿಡಿದಿದ್ದು ಬಂಗಾರಪ್ಪನ ಪರಮಶಿಷ್ಯ ಪ್ರಾಮಾಣಿಕ ರಾಜಕಾರಣಿ ಶೇಷಣ್ಣ ಕುಮಾರ. ಕಾಂತನ ಬಾಕಿ ಬಿಲ್ ಬಿಡುಗಡೆಯಾಗುವಂತೆ ಶೇಷಣ್ಣ ಕುಮಾರ್ ನೆರವಾದರೆ ಈ ಕಾಂತ ಮಾತ್ರ ಮುಂದಿನ ದಿನಗಳಲ್ಲಿ ಶೇಷಣ್ಣನಿಗೇ ತಿರುಗುಬಾಣ ಮಡಗಿ ಅಷ್ಟರಲ್ಲಾಗಲೇ ಜೆಡಿಎಸ್‌ನಲ್ಲಿ ಮಿಂಚುತ್ತಿದ್ದ ಎಸ್.ಕೆ.ಬಸವರಾಜನ್ ಪಟಾಲಮ್ಮು ಸೇರಿಕೊಂಡಿದ್ದ.


2006ರಲ್ಲಿ ಜೆಡಿಎಸ್‌ನಿಂದ ನಗರಸಭೆ ಸದಸ್ಯನಾಗಿ ಆಯ್ಕೆಯಾದ ಕಾಂತ ಅಧ್ಯಕ್ಷನೂ ಆಗಿಬಿಟ್ಟ. ಶಾಸಕ ಬಸವರಾಜನ್‌ಗೆ ಮತ್ತಷ್ಟೂ ಸನಿಹವಾದ. ಇಬ್ಬರೂ ಒಂದೇ ಪಕ್ಷದವರು, ಸಾಲದ್ದಕ್ಕೆ ಫಟಿಂಗ ಕಾಂತ ಸಣ್ಣದಾಗಿ ಗೂಂಡಾಗಿರಿ ದಂಡಿನ ನಾಯಕನಾಗಿ ಚಿಗುರುತ್ತಿದ್ದ; ಬಸವರಾಜನ್‌ಗೂ ಅದೇ ಬೇಕಾಗಿತ್ತು, ಬಳಸಿಕೊಂಡ. ಕೈ-ಜೆ.ಡಿ.ಎಸ್. ಸಮ್ಮಿಶ್ರ ಆಡಳಿತದಲ್ಲಿ ಕಾಂತ ಅಧ್ಯಕ್ಷನಾದ ನಂತರ ನಗರಸಭೆಯಲ್ಲಿ ಮರ್ಯಾದಸ್ಥ ಸದಸ್ಯರು ನೇಪಥ್ಯಕ್ಕೆ ಸರಿದುಬಿಟ್ಟರು. ಇದಕ್ಕೂ ಮುನ್ನ 1996ರಲ್ಲೇ ಓಸಿ ಬಿಡ್ಡರ್ ಸರ್ದಾರ್ ಪಾಶ ನಗರಸಭೆ ಅಧ್ಯಕ್ಷನಾಗಿದ್ದಾಗ ನಗರಸಭೆಯ ನಡುಮನೆಯಲ್ಲೇ ಇಸ್ಪೀಟ್ ಆಡಿಸಿ ಅರಗಿಸಿಕೊಂಡಿದ್ದ. ಆಗಿನಿಂದಲೇ ಚಿತ್ರದುರ್ಗ ನಗರಸಭೆ ಸಭ್ಯ ರಾಜಕಾರಣಕ್ಕಲ್ಲ ಎನ್ನುವಂತಾಗಿತ್ತು. ಆದರೆ ಗೂಂಡಾಗಿರಿಯ ಕಾಂತ ಅಧ್ಯಕ್ಷನಾದ ನಂತರವಂತೂ ಅದು ಪರಮಪೋಲಿಗಳ ಅಡ್ಡೆಯಾಗಿಹೋಯ್ತು.


ಕಾಂತನೇ ರಿಮೋಟು

ಮಾಜಿ ಹಮಾಲಿ ಯಾವಾಗ ದುಡ್ಡು, ರಾಜಕಾರಣದ ರುಚಿ ಕಂಡನೋ ಅಲ್ಲಿಂದ ಅವನ ವರಸೆಗಳೂ ಮಗ್ಗುಲು ಬದಲಿಸಿದವು. ಚಿತ್ರದುರ್ಗ ಜಿಲ್ಲೆಯಲ್ಲಿ ಜೆ.ಡಿ.ಎಸ್. ಪಕ್ಷಕ್ಕೆ ಹೇಳಿಕೊಳ್ಳುವಂತಹ ನೆಲೆಯೇ ಇಲ್ಲ. ಆದರೂ ಚಿತ್ರದುರ್ಗದ ನಗರಸಭೆ ಅಧಿಕಾರ ಹಿಡಿಯುವಲ್ಲಿ ಆದರದ್ದೇ ನಿರ್ಣಾಯಕ ಪಾತ್ರ. ಹಾಗಾಗಿ ನಗರಸಭೆಗೆ ಕಾಂತನೇ ರಿಮೋಟು. ಜಿಲ್ಲಾದ್ಯಂತ ಕೈ ಪಾರ್ಟಿಯ ಶಾಸಕರು, ಮಂತ್ರಿ, ಪಾರ್ಲಿಮೆಂಟ್ ಮೆಂಬರಿದ್ದರೂ ಚಿತ್ರದುರ್ಗ ನಗರಸಭೆಯಲ್ಲಿ ಮಾತ್ರ ಕಾಂತನದ್ದೇ ಫೈನಲ್ ಮಾತು. ಯಾವ ಪಾರ್ಟಿಯ ಮೆಂಬರು ನಗರಸಭೆ ಪ್ರವೇಶ ಮಾಡಿದರೂ ಕಾಂತ ಹೇಳಿದಂತೆಯೇ ಗೋಣು ಅಲ್ಲಾಡಿಸಬೇಕು. ನಗರಸಭೆಯಲ್ಲಿ ಕಾಂತ 2 ಬಾರಿ ಅಧ್ಯಕ್ಷನಾಗಿದ್ದಲ್ಲದೆ ಆತ ಮತ್ತು ಅವನ ಹೆಂಡತಿ ರತ್ನಮ್ಮ ಇಬ್ಬರೂ ನಗರಸಭೆಯ ಹಾಲಿ ಸದಸ್ಯರೇ!


ಕಾಂತ ಅಧ್ಯಕ್ಷನಾದ ನಂತರ ಚಿತ್ರದುರ್ಗ ನಗರಸಭೆಯನ್ನು ಲೂಟಿ ಹೊಡೆದ. ಇವನ ದುರಾಡಳಿತ ಮತ್ತು ಲೂಟಿಗೆ ಮೂಗುದಾರ ಹಾಕಲು ಯಾರಿಂದಲೂ ಸಾಧ್ಯವಾಗಿಲ್ಲ. ಯಾಕೆಂದರೆ ಬಲಾಢ್ಯ ನಾಯಕ ಸಮುದಾಯದ ಲೀಡರೆಂದು ತನಗೆ ತಾನೇ ಬಿಂಬಿಸಿಕೊಂಡಿರುವ ಕಾಂತನ ಮತಬ್ಯಾಂಕ್ ಪವರ್ ನೋಡಿ ಯಾವ ಶಾಸಕ-ಮಂತ್ರಿಯೂ ಇವನ ತಂಟೆಗೆ ಹೋಗುವುದಿಲ್ಲ.

ಚಿತ್ರದುರ್ಗ ಕೆ.ಎಸ್.ಆರ್.ಟಿ.ಸಿ. ಬಸ್ ಡಿಪೊ ಜಾಗವನ್ನೇ ಈ ಕಾಂತ ಬೀಡಾ ಸ್ಟಾಲ್ ಲೋಕಿಗೆ ಬರೆದು ಕೊಟ್ಟಿದ್ದ ಆ ವಿಚಾರ ಇಡೀ ಚಿತ್ರದುರ್ಗದಲ್ಲೇ ಹರಡಿದರೂ ಯಾರೂ ಅವನನ್ನು ಕೊಂಕಿಸಲಾಗಲಿಲ್ಲ. ಇನ್ನು ಚಿತ್ರದುರ್ಗದ ರಾಜಬೀದಿಯ ಆಜಾದ್ ವಿಲ್ ಹಿಂಭಾಗದ ಅಪಾರ್ಟ್‌ಮೆಂಟ್ ಅವ್ಯವಹಾರವಂತೂ ಅಪಾಯದ ಹಂತ ತಲುಪಿದೆ. ಮಾರ್ವಾಡಿ ಎಬ್ಬಿಸಿದ ಅನಾಮಧೇಯ ಅಪಾರ್ಟ್‌ಮೆಂಟಿಗೆ ಕಾಂತನದೇ ಶ್ರೀರಕ್ಷೆ ಎಂಬುದು ಗುಟ್ಟಾಗುಳಿದ ಸಂಗತಿಯೇನಲ್ಲ. ಈ ಅಪಾರ್ಟ್‌ಮೆಂಟಿಗೆ ನಗರಸಭೆಯ ಅನುಮತಿಯೇ ಇಲ್ಲ. ಈ ತಕರಾರು ನ್ಯಾಯಾಲಯದಲ್ಲಿದ್ದರೂ ಎದ್ದುನಿಂತ ಈ ಅಪಾರ್ಟ್‌ಮೆಂಟ್ ಅವ್ಯವಹಾರದಲ್ಲಿ ಕಾಂತ ಮುಕ್ಕಿದ್ದೇ ಹೆಚ್ಚು. ಇನ್ನು ಜೆ.ಸಿ.ಆರ್. ಬಡಾವಣೆಯ 50x70 ಅಳತೆಯ ರಸ್ತೆಯನ್ನೇ ಸೈಟಾಗಿ ಪರಿವರ್ತಿಸಿ ಅನಾಮಧೇಯರ ಹೆಸರಿನಲ್ಲಿ ಲಪಟಾಯಿಸಿದ್ದಾನೆನ್ನುವ ವರ್ತಮಾನ ಈಗ ಸದ್ದು ಮಾಡತೊಡಗಿದೆ. ಒಟ್ಟಾರೆ ಕಾಂತನ ಕಪಿಮುಷ್ಠಿಯಲ್ಲಿ ನಗರಸಭೆ ನಲುಗತೊಡಗಿದೆ.


ತಿಪ್ಪಾರೆಡ್ಡಿ


ಎಸ್.ಕೆ.ಬಸವರಾಜನ್


ಎಚ್.ಆಂಜನೇಯ


ಮಂಜುನಾಥ್ ಗೊಪ್ಪೆ

ಕಾಂತನ ಅಧ್ಯಕ್ಷಗಿರಿಯ ಎರಡು ಅವಧಿಯಲ್ಲಾದ ಆಸ್ತಿ, ಸೈಟು, ಆರ್ಥಿಕ ಭ್ರಷ್ಟಾಚಾರದ ಸಮಗ್ರ ತನಿಖೆ ನಡೆದರೆ ಕಾಂತ ಮತ್ತವನ ಫಟಿಂಗ ಸದಸ್ಯರು ಕಂಬಿ ಎಣಿಸುವುದು ಗ್ಯಾರಂಟಿ. ಕಾಂತನ ಪ್ರಾಬಲ್ಯ ಮತ್ತು ದರ್ಪಕ್ಕೆ ಅಧಿಕಾರಿಗಳೂ ಸಹಕರಿಸಿ, ತಾವೂ ಉಂಡು ಕೈತೊಳಕೊಂಡದ್ದು ಅಕ್ಷರಶಃ ಸತ್ಯ.

ಜೆಡಿಎಸ್ ಪಕ್ಷದಿಂದ ಚಿತ್ರದುರ್ಗ ಶಾಸಕನಾಗಿದ್ದ (ಹಾಲಿ ಕಾಂಗ್ರೆಸ್‌ನಲ್ಲಿ ತಳವೂರಿದ್ದಾನೆ) ಎಸ್.ಕೆ.ಬಸವರಾಜನ್ ಮತ್ತು ಹಾಲಿ ಬಿಜೆಪಿ ಶಾಸಕ ತಿಪ್ಪಾರೆಡ್ಡಿಯ ಶಿಷ್ಯವರ್ಗವೇ ಚಿತ್ರದುರ್ಗ ನಗರಸಭೆಯನ್ನು ಲೂಟಿಹೊಡೆದಿದೆ. ಅಸಲಿಗೆ ಚಿತ್ರದುರ್ಗದ ನಗರಸಭೆ ಜಿಲ್ಲಾ ಉಸ್ತುವಾರಿ ಸಚಿವ ಆಂಜನೇಯನ ಹಿಡಿತ ತಪ್ಪಿ ಕಾಂತನ ಕಣ್ಣಳತೆಯಲ್ಲೇ ನಡೆಯುತ್ತಿದೆ.

ಇಂಥಾ ನಗರಸಭೆಗೆ ಹೊಸ ಕಮೀಶನರ್ ಆಗಿ ಚಂದ್ರಪ್ಪ ಬಂದಿದ್ದಾರೆ. ಮೊದಲು ದಲಿತ ಸಂಘರ್ಷ ಸಮಿತಿಯಲ್ಲಿದ್ದ ಚಂದ್ರಪ್ಪ ಪ್ರಾಮಾಣಿಕ ಅಧಿಕಾರಿ ಎಂದು ಹೆಸರು ಮಾಡಿದವರು. ಹೊಳಲ್ಕೆರೆ, ಹೊಸದುರ್ಗದ ಪುರಸಭೆಗಳನ್ನು ಸರಿದಾರಿಗೆ ತಂದು ಲಕ್ಷಾಂತರ ರೂಪಾಯಿ ಆದಾಯ ಬರುವಂತೆ ಮಾಡಿದ್ದಲ್ಲದೇ ಪುರಸಭೆ, ಪಟ್ಟಣ ಪಂಚಾಯ್ತಿ ನಿವೇಶನ ಉಳಿಸಿ ಮಳಿಗೆ ಕಟ್ಟಿಸಿ ಆದಾಯದ ಮೂಲ ಹಿಗ್ಗಿಸಿದ್ದವರು. ಇಂಥಾ ಚಂದ್ರಪ್ಪ ಇಲ್ಲೂ ಭ್ರಷ್ಟಾಚಾರದ ಕಳೆ ತೆಗೆಯುತ್ತಾರಾ ಅಂತಾ ನೋಡಬೇಕಿದೆ. ಘಟಾನುಘಟಿ ರಾಜಕಾರಣಿಗಳು ಕೃಪಾಕಟಾಕ್ಷವನ್ನೇ ತಮ್ಮ ಬತ್ತಳಿಕೆಯಲ್ಲಿ ಬಚ್ಚಿಟ್ಟುಕೊಂಡಿರುವ ಈ ಖೂಳರನ್ನು ಬಲಿ ಹಾಕುವುದು ಸುಲಭ ಕೆಲಸವೇನಲ್ಲ.

ಅಧ್ಯಕ್ಷ ಮಂಜುನಾಥ್ ಗೊಪ್ಪೆ


ಈಗ ನಗರಸಭೆ ಅಧ್ಯಕ್ಷನಾಗಿ ಠಳಾಯಿಸಿರೋದು ಮಂಜುನಾಥ್ ಗೊಪ್ಪೆಯೆಂಬ ಫೇಮಸ್ ಗ್ಯಾಂಬ್ಲರ್. ಇವನೂ ಕಾಂತನ ಪರಮಶಿಷ್ಯ ಅಲಿಯಾಸ್ ಅವನ ಕೈಗೊಂಬೆ. ಚಿತ್ರದುರ್ಗದ ಇಸ್ಪೀಟ್ ಅಡ್ಡದಿಂದ ಕೋಟಿಗಟ್ಟಲೆ ದುಡಿದ ಮಂಜ ಕಾಂತನಿಗೆ ಲಕ್ಷಾಂತರ ರೂಪಾಯಿ ಕಪ್ಪ ಸಲ್ಲಿಸಿಯೇ ಅಧ್ಯಕ್ಷನಾದವನು. ಹಾಗೆ ನೋಡಿದರೆ ಅಧ್ಯಕ್ಷನಾಗಲು ಇವನಿಗೆ ಯಾವ ಅರ್ಹತೆಯೂ ಇಲ್ಲ. ಇಂಥಾ ನಾಲಾಯಕ್ ಸದಸ್ಯರಿಂದಲೇ ನಗರಸಭೆ ತುಂಬಿ ತುಳುಕುತ್ತಿರುವಾಗ ಗ್ಯಾಂಬ್ಲರ್ ಮಂಜನ ಅರ್ಹತೆಯನ್ನು ಯಾರು ತಾನೆ ಪ್ರಶ್ನಿಸಿಯಾರು?


ಇಂಥಾ ಹುಳಗಳ ಉರುವಣಿಗೆಯಿರುವ ದುರ್ಗ, ಯುದ್ಧ ನಡೆದು ಹಾಳುಬಿದ್ದ ಸ್ಮಶಾನದಂತಿದೆ. ರಸ್ತೆ ನೀರು, ಕಾನೂನು, ಯಾವುದೂ ನೆಟ್ಟಗಿಲ್ಲ. ಇಂಥಾ ದುರ್ಗವನ್ನು ಆ ಉಚ್ಚಂಗಿಯೇ ಕಾಪಾಡಬೇಕು.

■ ಟಿ.ಎನ್.ಎಸ್

...ಡಬ್ಲಿಂಗ್ ಚಂದ್ರ, ಬಾಬುರೆಡ್ಡಿ ಮತ್ತು ಎಸ್‌ಪಿ ಎತ್ತಂಗಡಿ ಡ್ರಾಮಾ


ನಗರಸಭೆಯ ಮತ್ತೊಂದು ಕ್ರಿಮಿ ಈ ಡಬ್ಲಿಂಗ್ ಚಂದ್ರ. ಸದ್ಯ ಚಿತ್ರದುರ್ಗ ...ಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷನಾದರು ತನ್ನ ಡಬ್ಲಿಂಗ್ ಕಸುಬಿನಿಂದ ಚಿತ್ರದುರ್ಗದ ಹೆಸರಿಗೇ ಕಳಂಕ ಅಂಟಿಸಿದವನು. ಇವನೂ ಕಾಂತನ ಪರಮ ಶಿಷ್ಯನೇ. ಕೆಲ ದಿನಗಳ ಹಿಂದಷ್ಟೇ 'ಪತ್ರಿಕೆ' ಇವನ ಕ್ರೈಮ್ ವೃತ್ತಾಂತದ ಸವಿಸ್ತಾರ ವರದಿ ಪ್ರಕಟಿಸಿತ್ತು.


ಡಬ್ಲಿಂಗ್ ಚಂದ್ರ


ಸರ್ದಾರ್ ಪಾಶ

ಆಗ ಚಂದ್ರನ ಎಡೆಮುರಿ ಕಟ್ಟಲು ಆಗಿನ ಎಸ್.ಪಿ. ಅನುಚೇತ್ ಸಜ್ಜಾಗಿದ್ದರು. ಆದರೆ ಡಿ.ವೈ.ಎಸ್.ಪಿ ಕವಳಪ್ಪ ಎಸ್.ಪಿ.ಯನ್ನೇ ದಾರಿತಪ್ಪಿಸಿ ಚಂದ್ರನನ್ನು ಬಚಾವು ಮಾಡಿದ್ದ. ಆ ತಂತ್ರದ ಮಾಸ್ಟರ್ ಮೈಂಡೇ ಕಾಂತ. ಕವಳಪ್ಪನ ಬೊಕ್ಕಸಕ್ಕೆ ಡಬ್ಲಿಂಗ್ ಚಂದ್ರನ ಪಾಪದ ದುಡ್ಡು ಭರ್ತಿಯಾಗಿದ್ದರಿಂದ ಸಿರಿಗೆರೆಮಠದ ವಾಚ್‌ಮನ್ ಬಿರುದಾಂಕಿತ ಡಿ.ವೈ.ಎಸ್.ಪಿ. ಕವಳಪ್ಪ ಚಂದ್ರನನ್ನು ಸೇಫ್ ಮಾಡಿದ್ದ. ಕಾಂತ ಮತ್ತು ಡಬ್ಲಿಂಗ್ ಚಂದ್ರನ ಮನೆಮುರುಕ ದಂಧೆಯ ತಕರಾರುಗಳಿಗೆಲ್ಲ ಡಿ.ವೈ.ಎಸ್.ಪಿ. ಕವಳಪ್ಪನೇ ಪಂಚಾಯ್ತಿದಾರ. ಚಂದ್ರ-ಮಂಜ ಯಾರಿಗೇ ಟೋಪಿ ಹಾಕಿ ಗದ್ದಲವೆದ್ದರೂ ರಾಜಿ ಪಂಚಾಯ್ತಿ ಮಾಡುವುದು ಈ ಕವಳಪ್ಪ ಎನ್ನುವ ಮನೆಮುರುಕ ಅಧಿಕಾರಿಯೇ. ಅಷ್ಟಕ್ಕೂ ಈ ಚಂದ್ರ ಅಂತಾರಾಷ್ಟ್ರೀಯ ಡಬ್ಲಿಂಗ್ ದಂಧೆಯಲ್ಲಿ ಕುಖ್ಯಾತಿ ಪಡೆದವನು. ಯಾವಾಗ ಕವಳಪ್ಪ ಕಾಂತನ ಕೃಪಾಶೀರ್ವಾದದಿಂದ ಬಚಾವಾದನೋ ನೋಡಿ ಅಲ್ಲಿಂದ ಇವನ ...ಗೆ ಕಡಿವಾಣ ಹಾಕುವವರೇ ಇಲ್ಲದಂತಾಗಿತ್ತು.


...ದರೆ ಇತ್ತೀಚೆಗಷ್ಟೆ ಎಸ್.ಪಿ.ಯಾಗಿ ದುರ್ಗಕ್ಕೆ ಬಂದ ಖಡಕ್ ಅಫೀಸರ್ ರಂಗರಾಜನ್ ...ಂದ್ರನ ಎಡೆಮುರಿಕಟ್ಟಿ ಜೈಲಿಗಟ್ಟಿದ್ದರು. ಕೋಲಾರದಲ್ಲಿ ಪ್ರೊಬೆಷನರಿ ಮುಗಿಸಿ ದುರ್ಗಕ್ಕೆ ಬಂದಿರುವ ರಂಗರಾಜನ್‌ರ ದಕ್ಷತೆ ಮತ್ತು ಪ್ರಾಮಾಣಿಕತೆ ತಿಳಿದುಕೊಂಡು ಚಂದ್ರನ ಟೀಮು ಅವರು ದುರ್ಗಕ್ಕೆ ವರ್ಗವಾಗುವುದನ್ನು ತಡೆಯಲು ಕಸರತ್ತು ನಡೆಸಿದ್ದರು. ಅದಕ್ಕೋಸ್ಕರ ಒಂದು ಕೋಟಿ ಲಂಚ ನೀಡುವುದಾಗಿ ಕಂಡಕಂಡ ರಾಜಕಾರಣಿಗಳ ಬಳಿ ಸೂಟ್‌ಕೇಸ್ ಹಿಡಿದು ಓಡಾಡಿದ್ದ. ದುರ್ಗದ ಅದೃಷ್ಟಕ್ಕೆ ಚಂದ್ರನ ಅಂತಹ ಕಸರತ್ತು ಫಲ ನೀಡಲಿಲ್ಲ. ದುರ್ಗಕ್ಕೆ ಬಂದ ರಂಗರಾಜನ್ ಮೊದಲು ಬಲಿಹಾಕಿದ್ದೇ ಈ ಡಬ್ಲಿಂಗ್ ಚಂದ್ರನನ್ನು. ಅವನನ್ನು ಜೈಲಿಗಟ್ಟಿದ ಸಂಗತಿ ದುರ್ಗದ ಮಾನವಂತರಿಗೆ ಖುಷಿ ತಂದಿದ್ದರೆ ಕಾಂತ ಅಂಡ್ ಗ್ಯಾಂಗಿನ ಕ್ರೈಮ್‌ಗಳಿಗೆ ನಡುಕ ಹುಟ್ಟಿಸಿತ್ತು.


ಡಿ.ವೈ.ಎಸ್.ಪಿ ಕವಳಪ್ಪ

ಆದರಲ್ಲೂ ದುರ್ಗದ ಪೊಲೀಸ್ ಮತ್ತು ಪಾತಕ ಜಗತ್ತಿನ ಕೊಂಡಿಯಂತಿದ್ದ ಮನೆಮುರುಕ ಡಿ.ವೈ.ಎಸ್.ಪಿ. ಕವಳಪ್ಪನನ್ನು ರಂಗರಾಜನ್ ಎತ್ತಂಗಡಿ ಮಾಡಿಸಿದ್ದು ಈ ಕ್ರಿಮಿಗಳಿಗೆ ತಗುಲಿದ ಬಹುದೊಡ್ಡ ಶಾಕ್. ಅದಾದನಂತರ ಕಾಂಗ್ರೆಸ್ ಲೋಕಲ್ ಕುಳ ಬಾಬುರೆಡ್ಡಿಯ ಗ್ಯಾಂಬ್ಲಿಂಗ್ ಲಾಡ್ಜ್‌ನ ಮೇಲೆ ರೇಡು ಮಾಡಿದ ನಂತರವಂತೂ ದುರ್ಗದ ಪುಢಾರಿಗಳು ಥಂಡಾ ಹೊಡೆದಿದ್ದಾರೆ. ಈ ಬಾಬುರೆಡ್ಡಿ ಮೊನ್ನೆಮೊನ್ನೆವರೆಗೂ ಜಿ.ಪಂ. ಮೆಂಬರಾಗಿ ಮೆರೆದಾಡಿದವ. ಇತ್ತೀಚೆಗೆ ನಡೆದ ಜಿ.ಪಂ. ಚುನಾವಣೆಯಲ್ಲಿ ಮತ್ತೊಂದು ಬಾರಿ ಗುಡ್ಡದರಂಗವ್ವನಹಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿ ಮಣ್ಣುಮುಕ್ಕಿದ್ದಾನೆ. ಬಾಬುರೆಡ್ಡಿ ಮತ್ತು ಇವನ ಅಣ್ಣ ಹನುಮಂತ ರೆಡ್ಡಿ ಒಡೆತನದ ಜಿ.ಬಿ.ಟಿ. ಲಾಡ್ಜ್ ಎಂದರೆ ಅದು ಪ್ರಖ್ಯಾತರ ಗ್ಯಾಂಬ್ಲಿಂಗ್ ಇಸ್ಪೀಟ್ ಅಡ್ಡ. ಯಾವಾಗ ಎಸ್.ಪಿ. ರಂಗರಾಜನ್ ಬಾಬುರೆಡ್ಡಿ, ಡಬ್ಲಿಂಗ್ ಚಂದ್ರನಂಥಾ ಕ್ರಿಮಿಗಳ ಬುಡಕ್ಕೇ ಕೈಹಾಕಲು ಶುರು ಮಾಡಿದರೋ ಆಗಿನಿಂದ ಆವರನ್ನು ಜಿಲ್ಲೆಯಿಂದ ಎತ್ತಂಗಡಿ ಮಾಡಿಸಲು ಪುಢಾರಿಗಳ ಪಕ್ಷಾತೀತ ಸಂಘಟನೆಯೊಂದು ಹುಟ್ಟಿಕೊಂಡು ಮಸಲತ್ತು ಶುರು ಮಾಡಿದೆ. ದುರಂತವೆಂದರೆ ರಂಗರಾಜನ್ ವರ್ಗಾವಣೆಗೆ ಮಂತ್ರಿ ಆಂಜನೇಯ ಕೂಡಾ ಈ ಪುಢಾರಿಗಳೊಂದಿಗೆ ಕೈಜೋಡಿಸಿದ್ದಾರೆ.

ಹಣ-ಹೆಣ್ಣು ಬೇಟೆಯ ಜ್ಯೋತಿಷ್ಯ

ಮಂಗಳೂರಲ್ಲಿ ಸೋಗಲಾಡಿ ಸಮ್ಮೋಹಿನಿ ಪಂಡಿತರ ಸಂತಾನ!!


ಢೋಂಗಿ ಸಮ್ಮೋಹಿನಿ ತಜ್ಞ ಶರ್ಮ ಯಾನೆ ಲೋಕೇಶ್


ಹೈಟೆಕ್ ಮಾಯಾನಗರಿ ಮಂಗಳೂರಿನ ಒಡಲಲ್ಲಿ ನಾನಾ ನಮೂನೆಯ ಚಂಡ-ಪ್ರಚಂಡ ಚಾಂಡಾಲರು ಅಡಗಿಕೊಂಡಿದ್ದಾರೆ! ಒಂದೆಡೆ ಧರ್ಮಕಾರಣ ದುರುಳರಾದರೆ, ಮತ್ತೊಂದೆಡೆ ಭೂಗತ ಪಾತಕಿ ಪಡೆ! ಮಗದೊಂದೆಡೆ ತರತರದ ಮಾಫಿಯಾ ದಂಧೆದಾರರು, ಹಳೆ ನೋಟು ಬದಲಿಸಿಕೊಡುವ ಏಜೆಂಟರು, ತೊಗಲೋದ್ಯಮಿಗಳು, ಮಾದಕ ದ್ರವ್ಯ ಮಾರಾಟಗಾರರು, ಮನೆಮುರುಕ ಜ್ಯೋತಿಷಿಗಳು... ಹೀಗೆ ಮೋಸ-ವಂಚನೆಯೇ ಕಸುಬಾಗಿಸಿಕೊಂಡವರ ದಂಡು-ದಂಡುಗಳೇ ಜಾಲ ಬಿಚ್ಚಿ ಕೂತಿವೆ!! ಈ ಪಾಪಿಗಳಿಗೆ ಅಮಾಯಕ ಮಂದಿ ಬಲಿ ಬಿದ್ದು "ಅಯ್ಯಯ್ಯೋ" ಅನ್ನುತ್ತಿದ್ದಾರೆ. ಇದೆಲ್ಲಾ ಮಂಗಳೂರು ಪೊಲೀಸರಿಗೆ ಗೊತ್ತಿಲ್ಲವೆಂದೇನಲ್ಲ, ಸುಲಿಗೆಕೋರರಿಂದ ಸಿಕ್ಕಷ್ಟು ಕಿಸೆಗಿಳಿಸಿ ಖಾಕಿವಾಲಾಗಳು ಕಣ್ಣು ಮುಚ್ಚಿ ಹಾಲು ಕುಡಿವ ಬೆಕ್ಕಂತೆ ಸುಮ್ಮನಿರುತ್ತಾರೆ. ತೀರಾ ತಮ್ಮ ಬುಡಕ್ಕೆ ಪ್ರಕರಣ ಬರುತ್ತದೆಂದಾಗ ಹಠಾತ್ ರೇಡು ಬಿದ್ದು ಮಹಾ ಕರ್ತವ್ಯ ತತ್ಪರರಂತೆ ತೋರಿಸಿಕೊಳ್ಳುತ್ತಾರೆ.

ಇದು ಮಂಗಳೂರಿನ ನಿತ್ಯ ನೂತನ ನರಕದ ಗೋಳು. ಇಂಥ ಅಪಸವ್ಯಗಳ ನಡುವೆಯೇ ಜಾಗೃತ ಮನಸ್ಸುಗಳ ಸಮಾಜಘಾತುಕರ ಮಟ್ಟ ಹಾಕುವ ರಿಸ್ಕ್ ಕಾರ್ಯಾಚರಣೆಗಳು ನಡೆಯುತ್ತಲೇ ಇವೆ. ಮೊನ್ನೆ-ಮೊನ್ನೆ ಪ್ರಖರ-ನಿಷ್ಠೂರ ವಿಚಾರವಾದಿ ನರೇಂದ್ರ ನಾಯಕ್ ಭರ್ಜರಿ ಹುತ್ತ ಬಡಿದು ಉರುಳಿಸಿದ್ದಾರೆ. ನಾಯಕರ ಬರೋಬ್ಬರಿ ಹೊಡೆತಕ್ಕೆ ಘಟಸರ್ಪವೊಂದು ಸಿಕ್ಕಿಬಿದ್ದು ಬಂಧನಕ್ಕೆ ಒಳಗಾಗಿದೆ. ಇಲ್ಲೊಂದು ಕ್ರೂರ ವ್ಯಂಗ್ಯವಿದೆ. ಕಾನೂನಿನ ಬೋನಿಗೆ ಬದ್ದಿರುವುದು, ಶ್ರಮವಿಲ್ಲದೆ ದುಡ್ಡು ಮಾಡುವ ಬ್ರಾಹ್ಮಣರ 'ದಂಧೆ' ಮಾಡಲು ಹೋದ ಕೆಳಸ್ತರದ ಅಬ್ರಾಹ್ಮಣ ಗ್ಯಾಂಗು! ಪೌರೋಹಿತ್ಯ-ಜ್ಯೋತಿಷ್ಯವೆಂದು ವಿಪ್ರರು ಬೆವರಿಳಿಸದೆ ಲಕ್ಷ-ಲಕ್ಷ ದೋಚುವ ಉದ್ಯೋಗದ ಆಕರ್ಷಣೆಗೆ ಬಿದ್ದ ಶೂದ್ರರು ಜನಿವಾರ ಧರಿಸಿ ಮಾಡಿದ ದಗಲುಬಾಜಿ ಪುರಾಣ ನಾಯಕರ ಸರ್ಜಿಕಲ್ ಸ್ಟ್ರೈಕ್‌ನಿಂದ ಅನಾವರಣಗೊಂಡಿದೆ!!


ಆತ ತನ್ನನ್ನು ಜ್ಯೋತಿಷ್ಯ ಮಾರ್ತಾಂಡನೆಂದು ಕರಪತ್ರದ ಮುಖಾಂತರ ಬಿಂಬಿಸಿಕೊಂಡಿದ್ದ. ಅಪಾರ ಜ್ಯೋತಿಷ್ಯಶಾಸ್ತ್ರ ಪಾರಂಗತನೂ, ಮಾಂತ್ರಿಕ ವಿದ್ಯಾ ಪಂಡಿತನೂ ತಾನೆಂದು ಆತ ಹೇಳಿಕೊಂಡಿದ್ದ. ಆದರೆ ಕರಪತ್ರದಲ್ಲಿ ದಕ್ಷಿಣ ಭಾರತದ ಸುಪ್ರಸಿದ್ಧ ಮಾಂತ್ರಿಕ ಜ್ಯೋತಿಷಿ ಎಂದಿದ್ದರೆ ಅತ್ತಾವರದ ಕಚೇರಿಯಲ್ಲಿದ್ದ ಬೋರ್ಡ್ ವಿದ್ಯಾಶಂಕರ ಶರ್ಮನೆಂದು ನೇತುಬಿದ್ದಿತ್ತು, ಸಮಸ್ಯೆ ಪರಿಹಾರಕ್ಕೆ ಹೋದವರಿಗೆ ಸಿಗುವುದು ರಾಮಕೃಷ್ಣ ಶರ್ಮನಾಗುತ್ತಿತ್ತು, ಹೀಗೆ ಒಬ್ಬೊಬ್ಬರಿಗೆ ಒಂದು ಹೆಸರಿನ ಖೋಟಾ ಮಾಂತ್ರಿಕರು ಎದುರಾಗುತ್ತಿದ್ದರು. ಆದರೆ ವಿಚಾರವಾದಿ ನಾಯಕರ ಸ್ಟಿಂಗ್ ಆಪರೇಷನ್‌ನಲ್ಲಿ ಸಿಕ್ಕಿಬಿದ್ದಾತ ಲೋಕೇಶ್ ಎಂಬ ದಾವಣಗೆರೆ ಮೂಲದ ಲಂಬಾಣಿ ಸಮುದಾಯದ ಅಭಿನವ ವಿಪ್ರೋತ್ತಮ!!

ಮಂಗಳೂರಿನ ಅತ್ತಾವರ ಏರಿಯಾದಲ್ಲಿ ಈ ಸ್ವಯಂಘೋಷಿತ ಮಾಂತ್ರಿಕ ಪಟಾಲಮ್ ಬೀಡುಬಿಟ್ಟು ಸರಿಸುಮಾರು ಒಂದೂವರೆ ದಶಕವೇ ಕಳೆದಿದೆ. ಅಸಹಾಯಕ ಹೆಣ್ಣುಮಕ್ಕಳು, ಪರಿತ್ಯಕ್ತ ಹೆಂಗಸರು, ಮಕ್ಕಳಾಗದ ಕೊರಗಿನ ನಾರಿಯರನ್ನೇ ಈ ಕಾಮ-ಕಾಂಚಾಣ ತವಲಿನ ಜ್ಯೋತಿಷಿಗಳು ಪ್ರಮುಖ ಗುರಿಯಾಗಿಸಿಕೊಂಡಿದ್ದರು. ಈ ಸುಲಿಗೆಕೋರರ ವಂಚನೆ-ಮೋಸದ ದಂಧೆಯಿಂದ ಸುತ್ತಲಿನ ಜನ ಕನಲಿ ಹೋಗಿದ್ದರು. ಹೋಟೆಲಿನವರು, ದೋಬಿ ಅಂಗಡಿಯವರು ಮತ್ತಿತರ ಸಣ್ಣ-ಪುಟ್ಟ ದಂಧೆದಾರರೆಲ್ಲ ಸದ್ರಿ ಜ್ಯೋತಿಷಿಗಳ ಮಂಕುಬೂದಿ ಕರಾಮತ್ತು ನೋಡಿ ರೋಸತ್ತುಹೋಗಿದ್ದರು. ಹೀಗಾಗಿ ಮುಗ್ಧ ಮಂದಿ ಅಲ್ಲಿಗೆ ಹೋಗಲು ಬಂದರೆ ಅಸಲಿ ಪುರಾಣ ಹೇಳುತ್ತಿದ್ದರು. ಆದರೆ ಜೀವನದ ಜಂಜಡದಲ್ಲಿ ಬಿದ್ದು ದಿಕ್ಕು ತಪ್ಪಿದ್ದ ಅಮಾಯಕ ಮಂದಿ ಈ ಮಾಂತ್ರಿಕರ ದಪ್ಪ ಜನಿವಾರ, ಉದ್ದುದ್ದದ ಉಂಡೆನಾಮ, ಸಂಸ್ಕೃತ ಪಠಣಕ್ಕೆ ಮಾರುಹೋಗಿ ಖೆಡ್ಡಾಕ್ಕೆ ಬೀಳುತ್ತಲೇ ಇದ್ದರು. ಹೀಗೆ ಈ ಪಾಪ ಕೂಪದಲ್ಲಿ ಬಿದ್ದು ಒದ್ದಾಡಿದವರಲ್ಲಿ ಮಹಿಳೆಯರೇ ಜಾಸ್ತಿ!

ಹೆಚ್ಚು-ಕಮ್ಮಿ ಹದಿನೈದು ವರ್ಷದಿಂದ ಮಂಗಳೂರು-ಉಡುಪಿಗಳಲ್ಲಿ ಜಾಲ ಪಸರಿಸಿ ನಿರಾತಂಕವಾಗಿ ಸುಲಿಗೆ ಮಾಡಿಕೊಂಡಿದ್ದ; ಅಸಹಾಯಕ ಹೆಂಗಸರ ದೌರ್ಭಾಗ್ಯ ಬಿಡಿಸುವ ನೆಪದಲ್ಲಿ ಬಳಸಿಕೊಂಡಿದ್ದ ಪಾಪಿ ಮಾಂತ್ರಿಕರಿಗೆ ಜನವರಿ 3 ತಮ್ಮ ಗ್ರಹಚಾರ ಕೆಡುವ ದಿನವೆಂಬುದು ಗೊತ್ತಾಗಲೇ ಇಲ್ಲ, ಅಂದು ಈ ಪಾಖಂಡಿಗಳು ದಿನಪತ್ರಿಕೆಯಲ್ಲಿ ಹಾಕಿ ಹಂಚಿದ್ದ ತಮ್ಮ ಜ್ಯೋತಿಷ್ಯ ಬಿಸ್ನೆಸ್ ಪ್ರಚಾರದ ಹ್ಯಾಂಡ್‌ಬಿಲ್ ವಿಚಾರವಾದಿ ನರೇಂದ್ರ ನಾಯಕರ ಕೈಗೆ ಸಿಕ್ಕಿದೆ. ಅದರಲ್ಲಿ ದಕ್ಷಿಣ ಭಾರತದಲ್ಲೇ ಕೀರ್ತಿಶಾಲಿಯಾಗಿರುವ ಮಾಂತ್ರಿಕ-ಜ್ಯೋತಿಷಿ ವಿದ್ಯಾಶಂಕರ ಲೈಂಗಿಕ ರೋಗ ನಿವಾರಣೆ, ದಾಂಪತ್ಯ ಸಂಬಂಧ ಸುಧಾರಣೆ, ಬಂಜೆತನ ನಿವಾರಣೆ, ಸ್ತ್ರೀ ವಶೀಕರಣ, ಶತ್ರು ಸಂಹಾರ, ಅಪಾರ ಹಣ ಗಳಿಸುವ ಯೋಗ ಪ್ರಾಪ್ತಿಯಂಥ ನಿತ್ಯ ಜೀವನದ ರಂಗುಬಿರಂಗಿ ಸಮಸ್ಯೆಗಳ ಪರಿಹಾರ ಮಾಡುತ್ತಾರೆಂದು ಭೋಂಗು ಬಿಡಲಾಗಿತ್ತು. ಕೇರಳ ಹಾಗು ಕೊಳ್ಳೆಗಾಲದ ಮಾಂತ್ರಿಕ ವಿದ್ಯಾಶಂಕರ್ ಪ್ರಖ್ಯಾತ ವಶೀಕರಣ ಸ್ಪೆಷಲಿಸ್ಟ್ ಎಂದು ದೊಡ್ಡಕ್ಷರದಲ್ಲಿ ಅಚ್ಚಿಸಲಾಗಿತ್ತು. ಸಂಪರ್ಕಕ್ಕೆ


ಮಗಳು ಪ್ರಮೀಳಾ ಜೊತೆ ನರೇಂದ್ರ ನಾಯಕ್


ಜನವಾದಿ ಮಹಿಳಾ ಸಂಘಟನೆಯವರ ಜತೆ ಸಂತ್ರಸ್ತೆ



ಜ್ಯೋತಿಷ್ಯ ದಂಧೆ ಕರಪತ್ರ

ಮೊಬೈಲ್ ದೂರವಾಣಿ ಸಂಖ್ಯೆ 9845296545 ಕೊಡಲಾಗಿತ್ತು.

ಢೋಂಗಿತನ-ಪವಾಡ ಬಯಲು ಮಾಡುವ ಗುಣಧರ್ಮದ ನರೇಂದ್ರ ನಾಯಕ್‌ಗೆ ಸದ್ರಿ ಕರಪತ್ರ ಓದಿದಾಗ ಮೈ ಉರಿದುಹೋಗಿದೆ. ತಕ್ಷಣ ಕರಪತ್ರದಲ್ಲಿದ್ದ ನಂಬರಿಗೆ ಫೋನು ಮಾಡಿದ್ದಾರೆ. ತಮ್ಮ ಸಮಸ್ಯೆ ಪರಿಹಾರಕ್ಕೆ ಬರುತ್ತೇನೆ ಎಂದಿದ್ದಾರೆ. ಅದಕ್ಕೆ 'ವಿದ್ಯಾಶಂಕರ್' ತಾನು ಉಡುಪಿಯಲ್ಲಿದ್ದೇನೆ, 8ರಂದು ಮಂಗಳೂರಿಗೆ ಬರ್ತೇನೆ ಎಂದಿದ್ದಾನೆ. ಬಂದಾಗ ಫೋನು ಮಾಡುತ್ತೇನೆಂದಿದ್ದಾನೆ. ಜ್ಯೋತಿಷ್ಯ ಕೇಳುವ ತವಕದಲ್ಲಿರುವಂತೆ ಅಂಗಲಾಚುವ ಧ್ವನಿಯಲ್ಲಿ ನಾಯಕರು ಆ ಕಳ್ಳ ಮಾಂತ್ರಿಕನಿಗೆ ಯಾವಾಗ ಬರ್ತೀರಿ ಎಂದು ಮತ್ತೆ ಕೇಳಿದ್ದಾರೆ. ಅದಕ್ಕಾತ 5ನೇ ತಾರೀಖಿಗೆ ಬರ್ತೇನೆ, ಬನ್ನಿ ಎಂದಿದ್ದಾನೆ!

ನಾಯಕರ ಮೂಢನಂಬಿಕೆ ವಿರೋಧಿ ಮನಸ್ಸು ಘಟಿಂಗ ಮಾಂತ್ರಿಕನನ್ನು 'ಸ್ಟಿಂಗ್'ನಲ್ಲಿ ಕೆಡವಲು ಸ್ಕೆಚ್ ಹಾಕಿದೆ. ತಕ್ಷಣ ಕರಪತ್ರದಲ್ಲಿರುವ ನಂಬರ್ ಯಾರದೆಂದು ನೋಡೋಣವೆಂದು ನಾಯಕರು ಸಣ್ಣ ತನಿಖೆ ಮಾಡಿದ್ದಾರೆ. ಆಗದು ಸುಳ್ಳು ಹೆಸರಲ್ಲಿರುವ ಏರ್‌ಟೆಲ್ ಕಂಪನಿಯ ಮೊಬೈಲ್ ನಂಬರ್ ಎಂಬುದು ಖಾತ್ರಿಯಾಗಿದೆ. ಆ ನಂಬರು 'Mo Dullicpp' ಎಂಬ ಹೆಸರಲ್ಲಿತ್ತು. ಬಂಜೆತನ ನಿವಾರಣೆಯ ನೆಪದಲ್ಲಿ ವಿದ್ಯಾಶಂಕರ್‌ನ ಸಂಧಿಸುವ ಪ್ಲಾನ್ ಹಾಕುತ್ತಾರೆ. ನಾಯಕ್ ಡಿವೈಎಫ್‌ಐನ ಕಾರ್ಯಕರ್ತೆ ಪ್ರಮೀಳಾ ಎಂಬ ಹುಡುಗಿಗೆ ತನ್ನ ಮಗಳಂತೆ ನಟಿಸಲು ಕೇಳಿದ್ದಾರೆ. ಆಕೆ ಒಪ್ಪಿದ್ದಾಳೆ. ಆ ನಂತರ ಮತ್ತೆ ಮಾಂತ್ರಿಕ ಮಾಮನಿಗೆ ಸತತ ಫೋನಾಯಿಸಿದ್ದಾರೆ. ಆತ ತಾನು ಪೂಜಾ ವಿಧಿ-ವಿಧಾನದಲ್ಲಿ ನಿರತನಾಗಿದ್ದೇನೆಂದು ತಾಂತ್ರಿಕನ ತಂತ್ರ ತೋರಿಸಿಕೊಂಡಿದ್ದಾನೆ. ಅಂತೂ ಸಂಜೆ 4.30ರ ಹೊತ್ತಿಗೆ ಅತ್ತಾವರದ ತನ್ನ 'ಅಡ್ಡೆ'ಗೆ ಬರುವಂತೆ ಹೇಳಿದ್ದಾನೆ.

ತಂದೆ-ಮಗಳ ಸೋಗಿನಲ್ಲಿ ನಾಯಕ್-ಪ್ರಮೀಳಾ ಹೋಗಿದ್ದಾರೆ. ಅಲ್ಲಿ ವಿದ್ಯಾಶಂಕರ್ ಎಂಬ ದಕ್ಷಿಣ ಭಾರತ

⇨11

ಥೂ...! ಸೆಕ್ಸ್ ಮಂತ್ರಗಾಳಿ!!

ಬುರುಡೆ ಜ್ಯೋತಿಷಿ ರಾಮಕೃಷ್ಣ ಶರ್ಮ ಯಾನೆ ಲೋಕೇಶ್ ಯಾವಾಗ ಪೊಲೀಸರ ಪಾಲಾದನೋ ಆಗಾತನ ಗ್ಯಾಂಗಿನ ದುಷ್ಕೃತನದ ಪುರಾಣ ಒಂದೊಂದಾಗಿ ಹೊರಬರಲಾರಂಭಿಸಿದೆ. ಹಣ ಮತ್ತು ಹೆಣ್ಣಿನ ತೆವಲಿನ ಈ ಕೇರಳ-ಕೊಳ್ಳೇಗಾಲ ಮಾಂತ್ರಿಕ ಸ್ಪೆಷಲಿಸ್ಟ್‌ಗಳು ಅಸಹಾಯಕ ಹುಡುಗಿಯರು-ಹೆಂಗಸರನ್ನು ಕಾಮದಾಟಕ್ಕೆ ಬಳಸಿಕೊಂಡಿದ್ದಾರೆ. ಮೋಸ-ವಂಚನೆ-ಶೋಷಣೆ ಮಾಡಿದ್ದಾರೆ. ರಾಮಚಂದ್ರಾಪುರಮಠದ ರೇಪಿಸ್ಟ್ ರಾಘುನ ಕಾಮತಂತ್ರಗಳ ಬಳಸಿ ಹೆಣ್ಣುಮಕ್ಕಳ ತಿಂದು ತೇಗಲು ಹವಣಿಸಿದ್ದಾರೆ.

ವಿಚ್ಛೇದಿತ ತಂದೆ-ತಾಯಿಯ ಮಗಳಾದ ಎಳೆಯ ಪ್ರಾಯದ ಹುಡುಗಿಯೊಬ್ಬಳಿಗೆ ನೌಕರಿ ಸಿಗುವಂತೆ ತಂತ್ರ-ಮಂತ್ರ ಮಾಡುವೆನೆಂದು ನಂಬಿಸಿದ್ದ ರಾಮಕೃಷ್ಣ ಶರ್ಮನ ಗ್ಯಾಂಗ್ ಆಕೆಯಿಂದ ಬರೋಬ್ಬರಿ 9 ಸಾವಿರ ಕಿತ್ತುಕೊಂಡದ್ದಲ್ಲದೆ ಕಾಮ ಕ್ರೌರ್ಯಕ್ಕೂ ಬಳಸಲು ಹವಣಿಸಿದ್ದಾರೆ. ಆಕೆ ಡಿಗ್ರಿ ಮುಗಿಸಿಕೊಂಡಿದ್ದಳು. ಮೊದಲೇ ಸಂಕಟದ ಸಂಸಾರದ ಕೂಸದು. ಉದ್ಯೋಗಕ್ಕೆ ಅಲೆದಲೆದು ಸುಸ್ತಾಗಿದ್ದಳು. ಉದ್ಯೋಗ ಸಿಗದೆ ಹತಾಶಳಾಗಿ ಬದುಕಲ್ಲಿ ಭರವಸೆಯೇ ಕಳೆದುಕೊಂಡಿದ್ದಳು. ಆಗವಳಿಗೆ ಸ್ಥಳೀಯ ಚಾನೆಲ್‌ನಲ್ಲಿ ಈ ಮಾಂತ್ರಿಕ-ಸ್ಪೆಷಲಿಸ್ಟ್‌ಗಳ ಜಾಹೀರಾತು ಕಣ್ಣಿಗೆ ಬಿದ್ದಿದೆ.

ಕೆಲವೇ ತಿಂಗಳಲ್ಲಿ ನೌಕರಿ ಕೊಡಿಸುವ ನಂಬಿಕೆ ಶರ್ಮ ಸಂತಾನ ಆಕೆಯಲ್ಲಿ ಮೂಡಿಸಿದೆ. ಅಪ್ಪನೂ ಕುಟುಂಬ ನಿರ್ವಹಣಾ ಹಣ ಸರಿಯಾಗಿ ಕೊಡುತ್ತಿರಲಿಲ್ಲ, ಆಕೆಗೆ ಬಡತನ ಕಾಡುತ್ತಿತ್ತು, ಆದರೂ ನೌಕರಿ ಈ ಮಾಂತ್ರಿಕ ಕೊಡಿಸುತ್ತಾನೆಂಬ ಭರವಸೆಯಲ್ಲಿ ಆತ ಹೇಳಿದಂತೆ ಹಣ ಕೊಡುತ್ತ ಹೋದಳು. ಕಂತುಗಳಲ್ಲಿ ಸರಿಯಾಗಿ 9 ಸಾವಿರ ಕೊಟ್ಟಿದ್ದಳು. ಆದರೆ ಕೆಲವೇ ತಿಂಗಳಲ್ಲಿ ನೌಕರಿ ಕೊಡಿಸುತ್ತೇನೆಂದ ಶರ್ಮನಿಂದ ಹಲವು ತಿಂಗಳಾದರೂ ಉದ್ಯೋಗ ಸಿಗುವಂತೆ ಮಾಡಲಾಗಲಿಲ್ಲ, ಆಗಾಕೆ ತನ್ನ ಹಣ ವಾಪಸ್ ಕೊಡುವಂತೆ ವರಾತ ಶುರು ಮಾಡಿದ್ದಾಳೆ.

ಆಗಾಕೆಯನ್ನು ಭೇಟಿ ಆಗುವುದರಿಂದ ತಪ್ಪಿಸಿಕೊಳ್ಳಲು ಹವಣಿಸಿದ್ದಾನೆ. ಆದರೆ ಹುಡುಗಿ ಹಠ ಬಿಡದೇ ಗಂಟು ಬಿದ್ದು ಕಾಸು ಕೇಳಹತ್ತಿದ್ದಾಳೆ. ಆಗ ಶರ್ಮನ 'ಕರ್ಮ'ಕತೆ ಬಿಚ್ಚಿಕೊಂಡಿದೆ. ಅವಳ ಗ್ರಹಚಾರ ಸರಿಯಿಲ್ಲವೆಂದು ಹೇಳಿ ಒಂದು ತಾಯತ ಕೈಗೆ ಕಟ್ಟಿದ್ದಾನೆ. ಒಂದಿಷ್ಟು ಮಂತ್ರ ಹೇಳಿಕೊಟ್ಟಿದ್ದಾನೆ. ತರತರದ ಪೂಜೆ ಮಾಡಲು ಹೇಳಿದ್ದಾನೆ. ಇದ್ಯಾವುದೂ ಫಲ ಕೊಡದಿದ್ದಾಗ, ಅದೃಷ್ಟ ಸರಿಯಾಗಲು ಬ್ರಾಹ್ಮಣನ ಜತೆ ರಾಸಲೀಲೆ ನಡೆಸಲು ಸಲಹೆ ಕೊಟ್ಟಿದ್ದಾನೆ.

ಇದನ್ನು ಕೇಳಿದ್ದೇ ಆ ಮರ್ಯಾದಸ್ಥ ಹುಡುಗಿ ಕೆರಳಿ ರೇಗಾಡಿದ್ದಾಳೆ. ಆಗ ಪಕ್ಕಾ ರಾಘೂಸ್ವಾಮಿ ಸ್ಟೈಲಲ್ಲಿ ಶರ್ಮ ಕಾಮದೀಕ್ಷೆ ಕೊಡಲು ನೋಡಿದ್ದಾನೆ. "ಅದರಲ್ಲೇನೂ ತಪ್ಪಿಲ್ಲ... ಅದು ಕಾಮದ ಆಟವಲ್ಲ... ನಿನ್ನ ಅದೃಷ್ಟ ಸರಿಯಾಗಲು ಈ ಲೈಂಗಿಕ ಕ್ರಿಯೆ ಅವಶ್ಯ... ನಿನ್ನ ಗ್ರಹಚಾರ ಇದರಿಂದ ಸರಿಯಾಗುತ್ತದೆ...!" ಎಂದು ಭೋಂಗು ಬಿಟ್ಟಿದ್ದಾನೆ. ಈ ಘಟನೆಯ ಬಳಿಕ ಆಕೆ ಶರ್ಮನ ಹಿಡಿತದಿಂದ ತಪ್ಪಿಸಿಕೊಂಡು ಬಚಾವಾಗಿದ್ದಾಳೆ. ಅತ್ಯಾಚಾರದಿಂದ ತಪ್ಪಿಸಿಕೊಂಡ ಆಕೆ ಶರ್ಮನ ಸಹವಾಸವೇ ಬೇಡವೆಂದು ದೂರಾಗಿದ್ದಾಳೆ.

ಆದರೆ ಒಂದು ದಿನ ಇದ್ದಕ್ಕಿದ್ದಂತೆ ಶರ್ಮ ಆಕೆಗೆ ಫೋನಾಯಿಸಿ ತನ್ನ ಗುರೂಜಿ ಬಂದಿದ್ದಾರೆ. ಆತ ಪವರ್‌ಫುಲ್ ಮಾಂತ್ರಿಕ. ನಿನ್ನ ಉದ್ಯೋಗದ ಆಸೆ ಈಡೇರಿಸುತ್ತಾರೆ. ಒಮ್ಮೆ ಬಂದು ಹೋಗು ಅಂದಿದ್ದಾನೆ. ಅಸಹಾಯಕತೆ-ಬಡತನ-ನಿರಾಶೆಯಿಂದ ಕಂಗಾಲಾಗಿದ್ದ ಹುಡುಗಿ ಓಡಿಹೋಗಿದ್ದಾಳೆ. ಅಲ್ಲಿ ನೋಡಿದರೆ ಒಬ್ಬ ಮಧ್ಯ ವಯಸ್ಸಿನ ದಢೂತಿ ಬೂದಿ ಮೈ ತುಂಬ ಬಳಿದುಕೊಂಡು ಮಜಬೂತಾದ ಜನಿವಾರ ಹಾಕಿಕೊಂಡು ಕುಂತಿದ್ದ. ಆತ ಒಂದಿಷ್ಟು ಗ್ರಹಚಾರ-ಅದೃಷ್ಟ ಮಂತ್ರ-ತಂತ್ರದ ಬೋಧನೆ ಬಿಗಿದ ನಂತರ ಒಂದಿಷ್ಟು ಬೂದಿ ಕೈಲಿ ಹಿಡಿದು ಇದನ್ನು ನಿನ್ನ ಮೈಗೆ ಹಚ್ಚುತ್ತೇನೆ ಎಂದು ಹುಡುಗಿ ಹತ್ತಿರ ಬಂದಿದ್ದಾನೆ.

ಆಕೆ ಬೆಚ್ಚಿ ಬಿದ್ದಿದ್ದಾಳೆ. ಅಷ್ಟಕ್ಕೆ ಸುಮ್ಮನಾಗದ ಆ ಕಾಮಪಿಪಾಸು ಮಾಂತ್ರಿಕ ಆಕೆಗೆ ಚೂಡಿದಾರದ ಟಾಪ್ ಮೇಲೆತ್ತಿ, ಪ್ಯಾಂಟ್ ಕಳಚುವಂತೆ ಹೇಳಿದ್ದಾನೆ. ಈ ಬೂದಿ ಹೊಕ್ಕಳಿಗೆ ಹಚ್ಚಿದ ತಕ್ಷಣ ಗ್ರಹಚಾರ ಹೋಗುತ್ತದೆ. ಉದ್ಯೋಗ ಗ್ಯಾರಂಟಿ ಅಂದಿದ್ದಾನೆ. ಅದಕ್ಕೆ ಹುಡುಗಿ ಒಪ್ಪಲಿಲ್ಲ, ಆಗ ಆತನೇ ಆಕೆಯ ಬಟ್ಟೆ ಕಳಚಲು ಮುಂದಾಗಿದ್ದಾನೆ. ಆತನ ಅತ್ಯಾಚಾರದ ಉದ್ದೇಶ ಅರ್ಥಮಾಡಿಕೊಂಡ ಹುಡುಗಿ ಅಲ್ಲಿಂದ ತಪ್ಪಿಸಿಕೊಂಡು ಓಡಿದ್ದಾಳೆ. ಹಾಗಂತ ಫೋನಲ್ಲಿ ಹಣ ಕೊಡುವಂತೆ ಒತ್ತಾಯಿಸುವುದು ನಿಲ್ಲಿಸಿರಲಿಲ್ಲ.

ಜನವರಿ 7ರಂದು ಹಣ ಕೊಡುವುದಾಗಿ ಶರ್ಮ ಹೇಳಿದ್ದ. ಅದರಂತೆ ಆಕೆ ಅಂದು ಆತನ ಅಡ್ಡೆ ಬಳಿ ಬಂದಾಗ ಬೀಗ ಜಡಿದದ್ದು ನೋಡಿ ಕಂಗಾಲಾಗಿದ್ದಾಳೆ. ಅಲ್ಲೇ ಪಕ್ಕದಲ್ಲಿದ್ದ ಲಾಂಡ್ರಿ ಅಂಗಡಿಯವರ ಬಳಿ ಕೇಳಿದ್ದಾಳೆ. ಆ ಮಾಂತ್ರಿಕ-ಪೊಲೀಸರ ಪಾಲಾಗಿದ್ದು ಲ್ಯಾಂಡ್ರಿ ಕೆಲಸಗಾರರು ಹೇಳಿದ್ದಾರೆ. ನರೇಂದ್ರ ನಾಯಕರ ಫೋನ್ ನಂಬರ್ ಕೊಟ್ಟು "ಇವರನ್ನು ಸಂಧಿಸಿದರೆ ನಿನ್ನ ಹಣ ಪಡೆಯಲು ಸಾಧ್ಯವಾಗಬಹುದು" ಎಂದಿದ್ದಾರೆ. ಆಕೆ ನರೇಂದ್ರ ನಾಯಕರಿಗೆ ತನ್ನೆಲ್ಲ ಕತೆ ಹೇಳಿದ್ದಾಳೆ.

ನಾಯಕ್ ಜನವಾದಿ ಮಹಿಳಾ ಸಂಘಟನೆಯವರನ್ನು ಜತೆಗಿಟ್ಟುಕೊಂಡು ಆಕೆಗೆ ಸಹಾಯ ಮಾಡಲು ಪ್ರಯತ್ನ ನಡೆಸಿದ್ದಾರೆ. ಈಗ ದುಷ್ಟ ಮಾಂತ್ರಿಕನ ಮೇಲೆ ಲೈಂಗಿಕ ಹಲ್ಲೆಯ ಮತ್ತೊಂದು ಕೇಸಾಗಿದೆ. ರೇಪ್‌ಗೆ 'ಬ್ರಾಹ್ಮಣ'ನೊಬ್ಬನ ರೆಡಿ ಮಾಡಿದ್ದ ಶರ್ಮ ಜೈಲಲ್ಲಿ ತಾನೇ ಬೆತ್ತಲಾಗಿ ನಿಲ್ಲುವ ಪರಿಸ್ಥಿತಿ ತಂದುಕೊಂಡಿದ್ದಾನೆ!

ಈ ಹುಡುಗಿಯ ನೋವಿನ ಕತೆ ಢೋಂಗಿ ಮಾಂತ್ರಿಕರ ಬಲೆಗೆ ಹೋಗಿ ಬೀಳುವ ಹೆಂಗಸರಿಗೊಂದು ಪಾಠದಂತಿದೆ!

ಕುಮಟಾ: ರೇಪಿಸ್ಟ್ ರಾಘು ಸಂಗಡ ಸರ್ಕಾರಿ ಸಂಸ್ಥೆಗಳು!!

ಹವ್ಯಕರ ರಾಮಚಂದ್ರಾಪುರ ಮಠದ ಸ್ತ್ರೀಸುಖ ...ಪ್ತ ಸಂತಾಗ್ರೇಸ ರಾಘೂ ಸ್ವಾಮಿ ಕಾಮ ಕಳಂಕದ ...ಮೇಜ್ ಕಂಟ್ರೋಲ್‌ಗೆ 'ಮಂಗಲ ಗೋ ಯಾತ್ರೆ' ...ನಾವೆ ಶುರು ಹಚ್ಚಿಕೊಂಡಿರುವುದು ಸರಿಯಷ್ಟೇ. ...ಂದು ಮಠಬಾನಿಗಳ ಫ್ಲಾಪ್ ಶೋ. ತಾಲಿಬಾನಿಗಳ ಬಂಧುಗಳಂತಿರುವ ಈ ಮಠಬಾನಿಗಳು ಮಾನಗೆಟ್ಟ ...ವನ್ನು ಉಳಿಸಿಕೊಂಡು ಪುಷ್ಕಳ ಭೋಜನಕ್ಕೆ ಮಾಡಿದ ಸಂಚು ಈಗ ಹವ್ಯಕರ ಕೇರಿ-ಕೇರಿಗಳಲ್ಲಿ ರೋಚಕ ...ಗೆ ಗ್ರಾಸವಾಗಿದೆ. ಹವ್ಯಕರ ಹೊಳ್ಳಿಗಳ ಮೇಲೆ ಕವಳಕ್ಕೆ ಸುದ್ದಿ ಸಾಥ್ ಕೊಡುತ್ತಿದೆ. ರಾಘು ಅದೆಷ್ಟೇ ತುಂಡು ...ಹೊಡೆದರೂ ಸೆಷನ್ಸ್ ನ್ಯಾಯಾಲಯದ ಕಟಕಟೆಯಲ್ಲಿ ಕಾಮಕಾಂಡ ಕತೆ ಹೇಳಬೇಕಾಗಿರುವುದು ತಪ್ಪಲು ...ವೇ ಇಲ್ಲ ಬಿಡಿ!

ಮಂಗಲ ಗೋ ಯಾತ್ರೆ ಎಂಬ ರಾಘುನ ದಗಲುಬಾಜಿ ...ಕೆಲವೇ ದಿನದಲ್ಲಿ ಉತ್ತರ ಕನ್ನಡದ ಕುಮಟೆಯಲ್ಲಿ ...ಯಾಗಲಿದೆ. ಈ 'ಹಬ್ಬ'ಕ್ಕೆ ರಾಘೂನ ಮಂತ್ರ ದಂಡ ...ತದಿಂದ ಭರ್ಜರಿ ಲಾಭ ಮಾಡಿಕೊಂಡ ಗೇರುಬೀಜ, ...ಹ್ಯಾಂಡ್‌ಗ್ಲೌಸ್, ಗೋಶಾಲೆ, ಓಟ್‌ಬ್ಯಾಂಕ್ ಬಿಸ್ನೆಸ್, ...ಚಕ್ರ ದಂಧೆ, ತೊಗಲು ತೀಟೆಯೇ ಮುಂತಾದ ...ಜ್ಯ-ವೈಯಕ್ತಿಕ ಉದ್ಯಮದ ಪತಿಗಳು ಮತ್ತು ಒಂದಿಷ್ಟು ...ಬಾನಿಗಳು ರಂಗುಬಿರಂಗಿ ಸಂಭ್ರಮದ ಸಿದ್ಧತೆಯಲ್ಲಿ ...ತಗಿದ್ದಾರೆ. ಹೇಗಾದರೂ ಮಾಡಿ ರಾಘೂನ ಕುಂಡೆ ...ಗೆ ಲೀಟರ್‌ಗಟ್ಟಲೆ ಫೆವಿಕಾಲ್ ಹಾಕಿ ಪೀಠದಿಂದ ...ಕದಲಿಸದಂತೆ ಗಟ್ಟಿಮಾಡಿ ನಂತರ ಆತನ ದೌರ್ಬಲ್ಯದ ...ನುಭವಿಗಳಾಗುವ ಹುನ್ನಾರದ ಈ ಕಳ್ಳ ಕಸುಬುದಾರರೆ ...ಗೋ ಮಂಗಲ ಯಾತ್ರೆಯ ಮುಂಚೂಣಿಯಲ್ಲಿದ್ದಾರೆ. ...ರ ಗುರುವಿಗೆ ಈ ಚಾಂಡಾಲ ಶಿಷ್ಯರೇ ಗತಿ!

...ಕಾಮ ಕೋಟಿ ರಾಘೂ ತನ್ನ ಭಂಡ ಬಂಡವಾಳ ...ಲಾದಾಗ ಅಥವಾ ಕಮರ್ಷಿಯಲ್ ಪ್ರಾಜೆಕ್ಟ್‌ಗಳಿಗೆ ...ನ ಜರೂರತ್ತು ಬಿದ್ದಾಗ ಪುಣ್ಯಕೋಟಿಯ ಸಂರಕ್ಷನ ...ವಾಡ ತೊಡುವುದು ಲಾಗಾಯ್ತಿನ ಕರ್ಮ. ಈಗಿನ ...ಧಾರಿತ' ಮೇಳಕ್ಕಾತ ಇಟ್ಟಿರುವ ಹೆಸರೇ ಮಂಗಲ ...ಯಾತ್ರೆ! ರಾಘು ಮತ್ತಾತನ ಸುರತ ಸಾಧನೆಯ ...ಮಾನಿಗಳು ಸದ್ರಿ ಮೇಳ ನಡೆಸಿದ್ದರೆ ಯಾರೂ ತಲೆ ...ಕೊಳ್ಳುತ್ತಿರಲಿಲ್ಲ, ಆದರೆ ರಾಘೂನ ಅನಾಹುತಕಾರಿ ...ಗ ಸರ್ಕಾರಿ ಸಂಸ್ಥೆಗಳನ್ನು ಪ್ಲಾಸ್ಟಿಕ್ ಮುಕ್ತ ಪಥದ



ನೆಪದಲ್ಲಿ ತೆಕ್ಕೆಗೆ ಎಳೆದುಕೊಂಡು ಬಿಟ್ಟಿದೆ. ಕುಮಟಾದ ಪುರಸಭೆ ಮತ್ತು ಜೂನಿಯರ್ ಕಾಲೇಜುಗಳು ತಿಳಿದೋ ತಿಳಿಯದೆಯೋ ಸ್ತ್ರೀಕುಲ ಕಂಟಕ ರಾಘೂನ ತಾರೀಫು ಮಾಡುವ ಕಾಯಕದಲ್ಲಿ ತೊಡಗಿಕೊಂಡಿವೆ. ಸರ್ಕಾರಿ ಸಂಸ್ಥೆಗಳನ್ನು ತಮ್ಮ ಸಹಯೋಗಕ್ಕೆ ಬಳಸಿಕೊಳ್ಳುತ್ತ ತಾಲಿಬಾನಿಗಳು ದುರುದ್ದೇಶ ಸಾಧಿಸುತ್ತಿದ್ದಾರೆ.

ಕುಮಟಾ ಪುರಸಭೆ ಎಂಬುದೇ ಒಂದು ಹೊಣೆಗೇಡಿ ಸಂಸ್ಥೆ! ಇದರ ಅಸಡ್ಡಾಳ ಆಡಳಿತಗಾರರೇ ಪುರಕ್ಕೆ ದೊಡ್ಡ ಗಂಡಾಂತರ!! ಈಗಂತೂ ಪುಂಡರ ಪಟಾಲಮ್ ಆಳ್ವಿಕೆ ನಡೆಸುತ್ತಿದೆ. ಕಾಂಚಾಣ ಕೊಡದೆ ಯಾವುದೇ ಕೆಲಸ ಆಗುವುದಿಲ್ಲ, ರಾಘು ಸ್ವಾಮಿಗೆ ಗೋಕರ್ಣ ದೇವಸ್ಥಾನದ ಕೀಲಿಕೈ ಹಸ್ತಾಂತರ ಮಾಡಿ ಅನುಭವಿಸಬಾರದ ಗ್ರಹಚಾರಕ್ಕೆಲ್ಲ ತುತ್ತಾದ ಮಾಜಿ ಶಾಸಕ ದಿನಕರ ಶೆಟ್ಟಿ ಗುರುವಿನ ಗುಲಾಮನಾದರಷ್ಟೇ ಹವ್ಯಕರ ಓಟು ಸಿಗುತ್ತದೆಂದು ಮಂಗಲ ಗೋಯಾತ್ರೆಗೆ ನೆರವಾಗುತ್ತಿದ್ದಾನೆ. ದಿನಕರ ಶೆಟ್ಟಿ ರಂಗ್‌ರಂಗೀಲಾ ಗುರು ರಾಘೂನ ಶಿಷ್ಯನಾದರೆ, ಕುಮಟಾ ಪುರಸಭೆಯ ಅಧ್ಯಕ್ಷ, ಸಂತೋಷ್ ನಾಯ್ಕ ದಿನಕರನ ನಿಷ್ಠಾವಂತ ಹಿಂಬಾಲಕ.

ಈ ಒಳನಂಟಿನ ಅಂಟಿನಿಂದಾಗಿ ಕುಮಟಾ ಪುರಸಭೆ ರಾಘುನ ಢೋಂಗಿ ಗೋಯಾತ್ರೆಗೆ ಆಡಳಿತದ ಸಕಲ ಸಹಕಾರ ಕೊಡುತ್ತಿದೆ. ಒಂದೇ ಶಬ್ದದಲ್ಲಿ ಹೇಳಬೇಕೆಂದರೆ ಈ ಪುರಸಭೆ ನಿರ್ಲಜ್ಜ ಸ್ವಾಮಿ ರಾಘೂ ಪಡೆಯ ಅಡಿಯ ಅಡಯಿಟ್ಟಿದ್ದಾನೆ ಮಾಜಿ ಶಾಸಕ ದಿನಕರ ಶೆಟ್ಟಿ! ಬಿಜೆಪಿ ಸೇರಿ ಶಾಸಕನಾಗುವ ಹಗಲುಗನಸು ಕಾಣುತ್ತಿರುವ ಈ ಶೆಟ್ಟಿಗೆ ಹವ್ಯಕರ ಮತ ಕೊಡಲು ಸಾಧ್ಯವಾ? ರಾಘೂನ ಪಾದಕ್ಕಾತ ಡೈ ಹೊಡೆದಂತೆಲ್ಲ ರಾಘು ಜಾತಿಬಂಧುಗಳಿಗೆ ಕಣ್ಣಸ್ನೆಯಿಂದ ದೂರ ಸರಿಸುತ್ತಿದ್ದಾನೆ. ಇದರರ್ಥ ಇಷ್ಟೇ. ರಾಘೂ ದಿನಕರ ಶೆಟ್ಟಿಯನ್ನು ಯಾವ ಕಾರಣಕ್ಕೂ ನಂಬಲಾರ.

ಪ್ಲಾಸ್ಟಿಕ್ ಕಸವನ್ನು ಮಂಗಲ ಗೋಯಾತ್ರೆಗೆ ಥಳಕು ಹಾಕಿ ಜನರನ್ನು ದಿಕ್ಕು ತಪ್ಪಿಸುವ ವ್ಯವಸ್ಥಿತ ಷಡ್ಯಂತ್ರ ನಡೆದಿದೆ. ಮಜಾ ನೋಡಿ, ರಾಘೂನ ಫ್ಲೆಕ್ಸ್‌ಗಳೇ ಪ್ಲಾಸ್ಟಿಕಿನದು; ಪುರಸಭೆಯ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಚೀಲಗಳದೇ ದರ್ಬಾರು. ಹೊಸ ಬಸ್‌ಸ್ಟಾಂಡಿನ ಎದುರು ಕೊಳಚೆ ಹೊಳೆಯಾಗಿ ಹರಿಯುತ್ತಿದೆ. ಅದೇ ದಾರಿಯಾಗಿ 'ಪರಮ ಪೂಜ್ಯ' ರಾಘೂ ಸ್ವಾಮಿ ಬಿಜಂಗೈಯ್ಯಲಿದ್ದಾನೆ. ಇದರ ಬಗ್ಗೆ ಪುರಸಭೆ ಆಡಳಿತದ ಮೇಲೆ ಹಿಡಿತ ಸಾಧಿಸಿರುವ ಮಾಜಿ ಶಾಸಕ ಶೆಟ್ಟಿಗೆ ಯಾವ ಕಾಳಜಿಯೂ ಇಲ್ಲ, ಪುರಸಭೆ ಎದುರೇ ಬಿಸಿ-ಬಿಸಿ ಆಹಾರ ಪ್ಲಾಸ್ಟಿಕ್‌ನಲ್ಲಿ ಪ್ಯಾಕ್ ಮಾಡಿಕೊಡಲಾಗುತ್ತಿದೆ.

ಸರ್ಕಾರಿ ಜ್ಯೂನಿಯರ್ ಕಾಲೇಜಿನ ಆಡಳಿತಗಾರರ ಆಧ್ವಾನ ಪುರಸಭೆ ಕಾರ್ಯಶೈಲಿಗಿಂತ ಭಿನ್ನವಾಗೇನಿಲ್ಲ, ಈ ಕಾಲೇಜು ಸಂಘ ಪರಿವಾರದ ಶಾಖೆಯಂತಾಗಿ ಹೋಗಿದೆ. ಈಗಾಗಲೇ ಕೋಮು ಕ್ರೌರ್ಯದೊಂಬಿ ಪ್ರಚೋದನೆ ಸ್ಪೆಷಲಿಸ್ಟ್ ಕಲ್ಲಡ್ಕ ಪ್ರಭಾಕರ್ ಭಟ್ಟನೆಂಬ ಆರ್‌ಎಸ್‌ಎಸ್ ಡಾನ್ ಸದ್ರಿ ಕಾಲೇಜಿಗೆ ಬಂದು ಹಿಂದೂತ್ವದ ಪ್ರವಚನ ಬಿಗಿದುಹೋಗಿದ್ದಾನೆ. ಬಿಜೆಪಿ ಟಿಕೆಟ್ ಮೇಲೆ ಕಣ್ಣಿಟ್ಟಿರುವ ಲೊಳಲೊಟ್ಟೆ ವೈದ್ಯ ಮತ್ತು ಒಂದಿಷ್ಟು ಚೆಡ್ಡಿ ಚತುರರು ಈತನ ಕಾಲೇಜಿಗೆ ತಂದಿದ್ದರು. ಈಗ ಕಾಲೇಜಿನ ಎನ್‌ಎಸ್‌ಎಸ್ ವಿದ್ಯಾರ್ಥಿಗಳನ್ನು ಮಂಗಲ ಗೋಯಾತ್ರೆ 'ಪ್ರಮೋಷನ್'ಗೆ ಬಳಸಲಾಗುತ್ತಿದೆ! ಪ್ಲಾಸ್ಟಿಕ್ ಅನಾಹುತದ ಪ್ರಚಾರದ ನೆಪದಲ್ಲಿ ಅಮಾಯಕ ಎನ್‌ಎಸ್‌ಎಸ್ ಹುಡುಗ-ಹುಡುಗಿಯರನ್ನು ಮನೆ-ಮನೆಗೆ ಕಳಿಸಲಾಗುತ್ತಿದೆ. ಅಲ್ಲವರು ಅನೈತಿಕ ಕಾವಿ ಜೀವಿ ರಾಘುನ ಗೋಯಾತ್ರೆ ಬಗ್ಗೆ ತಾರೀಫು ಮಾಡಬೇಕಾಗಿದೆ, ಪಾಪ!!

ರಾಘೂ ಲೀವಿಂಗ್ ಟು ಗೆದರ್ ಸಂಸ್ಕೃತಿಯ ಹರಿಕಾರನೆಂಬುದು ನ್ಯಾಯಾಲಯದಲ್ಲೇ ಸಾಬೀತಾಗಿದೆ. ಈ ಸರ್ವಸಂಗ ಪರಿತ್ಯಾಗಿಗೆ ಸ್ತ್ರೀವ್ಯಾಮೋಹ ಅತಿಯಾಗಿದೆ ಎಂಬುದು ತೀರ್ಪಿನಲ್ಲೇ ಹೇಳಲಾಗಿದೆ. ತೀರ್ಪಿನ ಪುಟ ಸಂಖ್ಯೆ 82ರಲ್ಲಿ ಸ್ವಾಮೀಜಿಯ ರಾಸಲೀಲಾ ವಿನೋದ ದಾಖಲಾಗಿದೆ. ಹೀಗೆ ಶೀಲಗೆಟ್ಟ ಸ್ವಾಮಿ ವೇಷದ ಕಾಮದುರಂಧರನ ಗೋಯಾತ್ರೆಯ ಸಿದ್ಧತೆಗೆ ಹದಿಹರೆಯದ ವಿದ್ಯಾರ್ಥಿಗಳನ್ನು ಕಳಿಸಿದರೆ ಏನಾದೀತು? ರೇಪ್ ತಪ್ಪಲ್ಲ, ಸ್ವಾಮಿ ಕಾಮಿಯಾಗೋದು ಸ್ವೀಕಾರಾರ್ಹ ಎಂಬ ತಪ್ಪು ಭಾವನೆ ಯುವಕರಲ್ಲಿ ಮೂಡದೇ? ಶೀಲ-ಅಶ್ಲೀಲ, ನೈತಿಕ-ಅನೈತಿಕದ ನಡುವಿನ ತೆಳುಗೆರೆಯ ಸೂಕ್ಷ್ಮತೆಯ ಅರಿವು ಮೂಡಿಸಬೇಕಾದ ಶಿಕ್ಷಕರು, ಪಿಯು ಕಾಲೇಜು ನಿರ್ದೇಶಕರು, ಪ್ರಾಂಶುಪಾಲರು ಎಲ್ಲಕ್ಕಿಂತ ಹೆಚ್ಚಾಗಿ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷೆಯಾಗಿರುವ ಕಾಂಗ್ರೆಸ್ ಶಾಸಕಿ ಶಾರದಾ ಶೆಟ್ಟಿ ಏಕೆ ಸುಮ್ಮನಿದ್ದಾರೆ? ಯಾಕಿಷ್ಟು ಹೇತ್ಲಾಂಡಿಗಳಂತಾಡುತ್ತಿದ್ದಾರೆ?

ಪದವಿ ಪೂರ್ವ ಶಿಕ್ಷಣದ ಡಿಡಿಪಿಐ ಭಟ್ಟ ಎಂಬಾತ ರಾಘೂನ ಶಿಷ್ಯಕೋಟಿಯವನಂತೆ. ಪ್ರಾಂಶುಪಾಲ ನಾಯಕನಿಗೆ ತನ್ನ ಕರ್ತವ್ಯದ ಅರಿವೇ ಇಲ್ಲ, ಶಾಸಕಿ ಶೆಟ್ಟಿಯಮ್ಮ ಕಾಲೇಜನ್ನು ಚೆಡ್ಡಿಗಳ ಕೈಗೆ ಕೊಟ್ಟು ಚಂದ ನೋಡುತ್ತಿದ್ದಾರೆ. ರಾಘು ಮೇಲಿನ ಅತ್ಯಾಚಾರ ಆರೋಪದ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. ಈತ ದೋಖಾ ಸ್ವಾಮಿ ಎಂದು ಮುಖ್ಯ ನ್ಯಾಯಮೂರ್ತಿಯೇ ಉದ್ಗರಿಸಿದ್ದಾರೆ! ರಾಘೂನ ಹಿಂಬಾಲಕರು ತಮಗಾಗದವರ ಸಂಹಾರಕ್ಕೆ ಯಾವ ಪಾತಕಕ್ಕೂ ಸಿದ್ಧವಾಗಿದ್ದಾನೆ. ಮಕ್ಕಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ತಡೆ ಸಮಿತಿ ಅಧ್ಯಕ್ಷ-



ಎಮ್ಮೆಲ್ಸಿ ಉಗ್ರಪ್ಪರಿಗೆ ಬೆದರಿಕೆ ಹಾಕಿ ಜೈಲು ಸೇರಿದ್ದಾರೆ ರಾಘೂನ ಪರಮ ಭಕ್ತರು. ಅಲ್ಲಿಗೆ, ರಾಘೂ ತಾಲಿಬಾನಿ ಪಡೆ ಕಟ್ಟಿರುವುದು ಸಾಬೀತಾಗಿದೆ. ಪುತ್ತೂರಿನ ಶ್ಯಾಮಶಾಸ್ತ್ರಿ ಸತ್ತಾಗ ಅಥವಾ ಉಗ್ರಪ್ಪರಿಗೆ ಬೆದರಿಕೆ ಬಂದಾಗ ಈ ಸಂಭಾವಿತ ಸ್ವಾಮಿ ಏಕೆ ನಾಲ್ಕು ವಿಷಾದದ ಮಾತೂ ಆಡಿಲ್ಲಾ? ಏಕೆಂದರೆ, ಈ ಪಾತಕಿಗಳನ್ನೆಲ್ಲ ಬೆಳೆಸುತ್ತಿರುವುದೇ ರಾಘೂ ಸ್ವಾಮಿ. ಇಂಥ ಹರಾಮಿ ಸ್ವಾಮಿ ಪರವಾಗಿ ಕುಮಟಾ ಪುರಸಭೆ ಆಡಳಿತ ಯಂತ್ರ ದುರುಪಯೋಗ ಮಾಡುತ್ತಿರುವುದು ಅಕ್ಷಮ್ಯವೇ ಸರಿ.

ಈಗಲೂ ಕಾಲ ಮಿಂಚಿಲ್ಲ, ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಪೌರಾಡಳಿತ ಇಲಾಖೆಯ ಮಂತ್ರಿಗಳು, ಐಎಎಸ್ ಪ್ರಭೃತಿಗಳು ಎಚ್ಚೆತ್ತುಕೊಂಡರೆ ಆಗಲಿರುವ ಅನಾಹುತ ಒಂಚೂರು ನಿಯಂತ್ರಣ ಆದೀತು ಎಂಬುದು ಕುಮಟೆಯ ಪ್ರಜ್ಞಾವಂತರ ಅಂಬೋಣ!

■ ವರದಿಗಾರ



ಶಾರದಾ ಶೆಟ್ಟಿ ದಿನಕರ ಶೆಟ್ಟಿ

10 ⇦

...ಯ ಮಾಂತ್ರಿಕ ಇರಲಿಲ್ಲ, ಅಲ್ಲಿದ್ದದ್ದು ಮತ್ತೊಬ್ಬ ...ತಿಷ್ಯ ಮಾರ್ತಾಂಡ- ಸಿದ್ಧಿ ಸಾಧಕ ರಾಮಕೃಷ್ಣ ಶರ್ಮ. ...ಗೆ ನರೇಂದ್ರ ನಾಯಕ್‌ಗೆ ಈ ಮಾಂತ್ರಿಕ ಅಡ್ಡೆಯಲ್ಲಿ ...ನಲ್ಲ, ಹಲವರಿದ್ದಾರೆ ಎಂಬುದು ಖಾತ್ರಿಯಾಗಿದೆ. ...ಬ್ಬರು ಒಂದೊಂದು ವೇಷ ಹಾಕಿಕೊಂಡು ಹೆಂಗಸರ ... ತಪ್ಪಿಸಿ ಮಜಾ ಉಡಾಯಿಸುತ್ತಿದ್ದಾರೆಂಬುದು ...ದಟ್ಟಾಗುತ್ತದೆ. ಮಾಂತ್ರಿಕ ಛದ್ಮವೇಷದ ರಾಮಕೃಷ್ಣ ...ವಲ್ಲಿ ತಮ್ಮ 'ಮಗಳ' ಸಮಸ್ಯೆ ನಾಯಕ್ ಹೇಳಿದ್ದಾರೆ. ...ಗೆ ಮದುವೆಯಾಗಿ ಎಂಟು ವರ್ಷವಾಗಿದೆ. ...ಳಾಗಿಲ್ಲವೆಂದು ಗಂಡನ ಮನೆಯವರು ತವರಿಗೆ ...ದ್ದಾರೆ...." ಎಂದಿದ್ದಾರೆ.

...ತನ್ನ ಮಾಂತ್ರಿಕ ಶಕ್ತಿಯಿಂದ ಬಂಜೆತನ ನಿವಾರಣೆಗೆ ... ಪರಿಹಾರ ಕೊಡುವುದಾಗಿ ಜ್ಯೋತಿಷಿ ರಾಮಕೃಷ್ಣ ... ಒಂದೇಸಮನೆ ಭೋಂಗು ಬಿಟ್ಟಿದ್ದಾನೆ. ಮಕ್ಕಳಾಗುವ ...ತ್ರ ಬೋಧಿಸಿದ್ದಾನೆ. ಒಂದಿಷ್ಟು ಪೂಜಾ ವಿಧಾನ ...ದ್ದಾನೆ. ಇದಕ್ಕೆಲ್ಲ 11,300 ರೂ. ಶುಲ್ಕ ವಿಧಿಸಿದ್ದಾನೆ. ...ಗುವ ಹೊತ್ತಿಗೆ ನಾಯಕರಿಗೆ ಸದ್ರಿ ಮಾಂತ್ರಿಕನಲ್ಲಿ ...ವುದೇ 'ಶಕ್ತಿ' ಇಲ್ಲ, ಈತ ಪಕ್ಕಾ ಮೋಸಗಾರ; ...ಗಾರ, ವಂಚಕನೆಂಬುದು ಗ್ಯಾರಂಟಿಯಾಗಿದೆ. ಈ ...-ಮಗಳ' ಸಂಗಡ ಹೋಗಿದ್ದವರೊಬ್ಬರು ಈ 'ಪ್ರಹಸನ' ... ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದಾರೆ. ಆತ ಹಣಕ್ಕೆ ...ಯಿಸಿದಾಗ ನಾಯಕರು ಈಗ ತಮ್ಮ ಬಳಿ ಇರುವುದೆಲ್ಲ ...0 ಮುಖಬೆಲೆಯ ನೋಟುಗಳು. ಹೆಂಡತಿಗೆ ಹೇಳಿ ...ವೆನೆಂದು ಹೇಳಿ ಹೊರಗೆ ಹೋದ ನಾಯಕರು ...ಸರಿಗೆ ಫೋನಾಯಿಸಿದ್ದಾರೆ.

...ಈ ಕಳ್ಳ ಮಾಂತ್ರಿಕನಿಗೆ ನರೇಂದ್ರ ನಾಯಕ್ ಮಗಳು ... ಹೇಳಿದರೂ ಗೊತ್ತಾಗಲೇ ಇಲ್ಲ; ತಾನು ನರೇಂದ್ರ ...ಕ್ ಅಲ್ಲ, ನರೇಂದ್ರ ಪೂಜಾರಿ ಎಂದರೂ ಪತ್ತೆ ...ಗಲಿಲ್ಲ, ಅಂದರೆ ಇವನೆಂಥ ಸಿದ್ಧಿ ಸಾಧಕ ಜ್ಯೋತಿಷ್ಯ ಪುಂಗವನೆಂದು ನೀವೇ ಊಹಿಸಿ! ಇವನ ಮಾಂತ್ರಿಕ ಶಕ್ತಿಯ ತಾಕತ್ತು ಈಗ ಅರ್ಥವಾಯ್ತಾ?! ನೀನು ವಂಚಕ-ಮೋಸಗಾರನೆಂದು ತಂದೆ-ಮಗಳು ಆತನ ಭೂತ ಬಿಡಿಸಿದ್ದಾರೆ. ಆಗಾತ ತತ್ತರಿಸಿಹೋಗಿದ್ದಾನೆ. ಪೊಲೀಸರು ಆತನ ಎತ್ತಾಕ್ಕೊಂಡು ಹೋಗಿದ್ದಾರೆ. ಖೋಟಾ ವೈದ್ಯಕೀಯ, ಮೋಸ, ವಂಚನೆ ಮುಂತಾದ ಸೆಕ್ಷನ್ ಆತನ ಮೇಲೆ ಜಡಿಯಲಾಗಿದೆ.

ಈಗ ಎದುರಾಗಿರುವ ಪ್ರಶ್ನೆ ಈ ಚೋರ ಮಾಂತ್ರಿಕರ ಜಾಲ ಎಲ್ಲೆಲ್ಲಿ ಹಬ್ಬಿದೆ ಎಂಬುದು. ನಾಯಕರು ಈ ಮಾಂತ್ರಿಕರ ಬಣ್ಣ ಬಯಲಾಗಿಸಿದ ಸಂದರ್ಭದಲ್ಲಿ ಆದ ಗಡಿಬಿಡಿಯಲ್ಲಿ ಇಂಥ ಹಲವು ಮಾಂತ್ರಿಕರ ಗ್ಯಾಂಗ್ ಇರುವ ಸಂಕೇತಗಳು ಗೋಚರಿಸಿವೆ. ನರೇಂದ್ರ ನಾಯಕರು ಮತ್ತು ಪ್ರಮೀಳಾ ತಮ್ಮ 'ಸಮಸ್ಯೆ' ಬಗ್ಗೆ 'ರಾಮಕೃಷ್ಣ ಶರ್ಮ'ನ ಬಳಿ ಹೇಳಿಕೊಳ್ಳುವಾಗ ಇಬ್ಬರು ಆತನ ಸಹಚರರು ಪಹರೆ ನಿಂತಿದ್ದರು. ಮತ್ತೊಬ್ಬ ದೂರದಲ್ಲಿ ನಿಂತು ಯಾರಾದರೂ ಹಲ್ಲೆ-ಪೊಲೀಸರು ರೇಡು ಹಾಕುವ ಬಗ್ಗೆ ನಿಗಾ ವಹಿಸಿದಂತಿತ್ತು, ನರೇಂದ್ರ ನಾಯಕ್ "ನೀನು ವಂಚಕ" ಎಂದು ಹೇಳಿದಾಗ ಈ 'ಮಾಂತ್ರಿಕ' ತಕ್ಷಣ ಯಾರಿಗೋ ಫೋನಾಯಿಸಿ ಮರಾಠಿಯಲ್ಲಿ ಮಾತಾಡಿದ್ದಾನೆ. ತಕ್ಷಣ ವಕೀಲರ ನೇಮಿಸು. ತನ್ನ ಬಂಧನವಾಗಲಿದೆ. ಜಾಮೀನಿಗೆ ವ್ಯವಸ್ಥೆ ಮಾಡೆಂದು ಹೇಳಿದ್ದಾನೆ. ಇದೆಲ್ಲ ನೋಡಿದರೆ ವ್ಯವಸ್ಥಿತ ಜ್ಯೋತಿಷ್ಯ ಜಾಲವಿರುವ ಅನುಮಾನ ಎಂಥವರಿಗೂ ಬರದೇ ಇರದು.

ನರೇಂದ್ರ ನಾಯಕ್ ಮತ್ತವರ 'ಮಗಳು' ಮಾಂತ್ರಿಕನ ಕೋಣೆ ಪ್ರವೇಶಿಸುವಾಗ ತಾಯಿ-ಮಗಳು ಹೊರಬಿದ್ದು ಹೋಗಿದ್ದಾರೆ. ಇವರಿಂದ ಆತ 8000 ರೂ. ಕಿತ್ತುಕೊಂಡಿದ್ದ. ನಾಯಕರ ನಂತರದ ಸರದಿಗಾಗಿ ಇನ್ನೊಂದು ತಾಯಿ-ಮಗಳ ಜೋಡಿ ಕಾದು ಕುಳಿತಿತ್ತು, ಪೊಲೀಸರು ದಾಳಿ ಮಾಡುತ್ತಿದ್ದಂತೆಯೇ ಈ ತಾಯಿ-ಮಗಳು ಓಡಿಹೋಗಿದ್ದಾರೆ. ಇದು ಸದ್ರಿ ಮಾಂತ್ರಿಕರು ಮಹಿಳೆಯರ 'ಸಂಕಷ್ಟ'ಗಳ 'ಸ್ಪೆಷಲಿಸ್ಟ್' ಎಂಬುದು ನಿಸ್ಸಂಶಯವಾಗಿ ಸಾಬೀತು ಮಾಡುತ್ತದೆ. ಹೆಂಗಸರ ಸಾಂಸಾರಿಕ-ದೈಹಿಕ ದೌರ್ಬಲ್ಯವೇ ಈ ವಂಚಕರಿಗೆ ಬಂಡವಾಳ! ಈ ಕಾರ್ಯಾಚರಣೆಯ ಮರುದಿನ ನಾಯಕ್ ಮಾಂತ್ರಿಕ ಅಡ್ಡೆಯತ್ತ ಹೋಗಿದ್ದಾಗ ಮತ್ತಷ್ಟು ನಿಗೂಢ ರಹಸ್ಯಗಳು ಬಿಚ್ಚಿಕೊಂಡಿವೆ. ಅಂದು ಬೆಳಗಿನ ಜಾವವೇ ಹುಬ್ಬಳ್ಳಿ-ದಾವಣಗೆರೆಯಿಂದ ನಾಲ್ಕಾರು ಮಂದಿ ಈ ಜಾಲದವರು ಮಂಗಳೂರಿಗೆ ಬಂದು ಬಂಧಿತನ ಬಿಡುಗಡೆಯ ಪ್ರಯತ್ನ ನಡೆಸಿದ್ದಾರೆಂದು ಸುತ್ತಲಿನ ಜನರು ಹೇಳಿದ್ದಾರೆ. ವಸತಿ ಉದ್ದೇಶಕ್ಕೆಂದು ಪಡೆದಿದ್ದ ಮನೆಯಲ್ಲಿ ಮಾಂತ್ರಿಕರು ದೋಖಾ ಧಂಧೆ ನಡೆಸಿಕೊಂಡಿದ್ದರು.

ಈ ಕ್ರಿಮಿನಲ್ ಮಾಂತ್ರಿಕರು ಅಸಹಾಯಕ- ಮುಗ್ಧ ಮಹಿಳೆಯರ ಸುಲಿದ ಕತೆಗಳು ಒಂದೆರಡಲ್ಲ, ಅತ್ತಾವರದ ಹತ್ತಿರದ ಹಳ್ಳಿಯ ಒಬ್ಬಳು ಹೆಂಗಸಿನ ಸಂಸಾರ ತಾಪತ್ರಯ ನಿವಾರಿಸುವ ನೆಪದಿಂದ ಆಕೆಯಿಂದ ಬರೋಬ್ಬರಿ 30 ಸಾವಿರ ಎತ್ತಿದ್ದಾರೆ. ಆಕೆ ಕುಟುಂಬದವರ ಕಣ್ಣು ತಪ್ಪಿಸಿ ಕೊಟ್ಟ ಹಣವಾದ್ದರಿಂದ ಪೊಲೀಸರಿಗೆ ದೂರು ನೀಡುವುದಕ್ಕೂ ಹೆದರುತ್ತಿದ್ದಾಳೆ. ಹಾಗಾಗಿ ಈ ಜ್ಯೋತಿಷಿಗಳಿಗೆ ತೊಂದರೆಯೇನಾಗಿಲ್ಲ, ಇಂಥ ದೌರ್ಬಲ್ಯವೇ ಅಸ್ತ್ರ ಮಾಡಿಕೊಂಡು ಅಪಾರ್ಟ್‌ಮೆಂಟ್‌ನಲ್ಲಿ ಕಸ ಗುಡಿಸುವ ಹೆಂಗಸಿನ ಹತ್ತಿರ 50 ಸಾವಿರ ಹೊಡೆದಿದ್ದಾರೆ. ವಶೀಕರಣ ವಿದ್ಯೆ ಪ್ರಯೋಗಿಸಿ ಆಕೆಯ ಒಡೆದುಹೋದ ಸಂಸಾರ ಒಂದು ಮಾಡುವ ಭರವಸೆ ಕೊಡಲಾಗಿತ್ತು, ಇದು ಫ್ಲಾಪ್ ಆಗಿದ್ದರಿಂದ ಆಕೆ ಹಣ ವಾಪಸ್ ಕೇಳಿದಾಗ ಬೆದರಿಸಿ ಬಾಯಿ ಮುಚ್ಚಿಸಿದ್ದಾರೆ.


ಬ್ಯಾಂಕ್ ಉದ್ಯೋಗಿಯಾದ ಸುಶಿಕ್ಷಿತ ಮಹಿಳೆಯೇ ಈ ಪಾಪಕೂಪದಲ್ಲಿ ಬಿದ್ದು ಒದ್ದಾಡಿದ್ದು ಕುತೂಹಲಕರವಾಗಿದೆ. ಆಕೆಯ ಮಗಳಿಗೆ 28 ವರ್ಷವಾದರೂ ಯೋಗ್ಯ ವರನೇ ಸಿಕ್ಕಿರಲಿಲ್ಲ, ಮದುವೆ ಫಲ ಒದಗುವಂತೆ ಮಾಡುವುದಾಗಿ ಒಂದೂ ಕಾಲು ಲಕ್ಷ ಈ ಕೊಳ್ಳೆಗಾಲ-ಕೇರಳ ಮಾಂತ್ರಿಕ ವಿದ್ಯಾ ಪಾರಂಗತರು ಲಪಟಾಯಿಸಿದ್ದಾರೆ. ಸಮಸ್ಯೆಗಳಿಂದ ಜರ್ಜರಿತರಾದವರು ಬಂದರೆ ಬ್ಲಾಕ್‌ಮೇಲ್ ತಂತ್ರದಿಂದ ಹಿಂಡಿ ಹಿಪ್ಪೆ ಮಾಡುವ ಜಾತಕ ರಹಸ್ಯ ಸೂತ್ರ ಈ ಮಸಲತ್ತುಗಾರರು ಸಿದ್ಧ ಮಾಡಿಕೊಂಡಿದ್ದಾರೆ. ಮೊದಲು ಜಾತಕ ಪಡೆದುಕೊಂಡು ಇಟ್ಟುಕೊಳ್ಳುವುದು. ನಂತರ ಕೇಳಿದಷ್ಟು ಹಣ ಕೊಡುವ ತನಕ ಅದನ್ನು ಕೊಡದೆ ಸತಾಯಿಸುವುದು. ಈ ಕಿತಾಪತಿಯಿಂದ ದೊಡ್ಡ ಮೊತ್ತದ ಹಣ ಮಾಡಿದ್ದಾರೆ. ಮಜಾ ಎಂದರೆ, ಕೊಂಕಣಿ ವರ್ತಕ ಜಾಣನೊಬ್ಬ ತನ್ನ ಕಾಲಿನ ನೋವು ವಾಸಿಯಾಗಲೆಂದು 80 ಸಾವಿರ ಕೊಟ್ಟು ಹಣೆಹಣೆ ಚಚ್ಚಿಕೊಳ್ಳುತ್ತಿದ್ದಾನೆ. ಪಾಪದ ಬಡ ಕೂಲಿಕಾರ ಹೆಂಗಸರ 'ವಶೀಕರಣ'ದಿಂದ ಕೊಳ್ಳೆ ಹೊಡೆದ ದೊಡ್ಡ ಲಿಸ್ಟೇ ಅತ್ತಾವರ ಏರಿಯಾದಲ್ಲಿ ಹಾರಾಡುತ್ತಿದೆ.


ಸದ್ಯಕ್ಕೆ ಒಬ್ಬನಷ್ಟೇ ಅಂದರ್ ಆಗಿದ್ದಾನೆ. ಈತನ ಹಿಂದಿರುವ ದೊಡ್ಡ ಜಾಲವನ್ನು ಬೇಧಿಸಿ ಕಂಬಿ ಹಿಂದೆ ಕಳಿಸುವ ಸವಾಲು ಮಂಗಳೂರು ಪೊಲೀಸ್ ಕಮೀಷನರ್ ಚಂದ್ರಶೇಖರ್ ಮುಂದಿದೆ. ನರೇಂದ್ರ ನಾಯಕ್ 'ಮಾಂತ್ರಿಕ ಮಂಡಳಿ'ಗೆ ಬುದ್ಧಿ ಕಲಿಸುವ ಹಠಕ್ಕೆ ಬಿದ್ದು ಹಗಲಿರುಳೂ ಈ ಇಳಿವಯಸ್ಸಿನಲ್ಲಿ ಹೋರಾಡುತ್ತಿದ್ದಾರೆ. ಎಸಿಪಿ ಶ್ರುತಿ ಎಂಬ ದಕ್ಷ ಐಪಿಎಸ್ ಅಧಿಕಾರಿಣೀ ನೇತೃತ್ವದಲ್ಲಿ ತನಿಖಾ ತಂಡ ರಚಿಸಲಾಗಿದೆ. ಮಂಗಳೂರಿನ ಜನರೀಗ ವಿಚಾರವಾದಿ ನರೇಂದ್ರ ನಾಯಕರ ವೈಚಾರಿಕ ಹೋರಾಟದ ಬಗ್ಗೆ ಮೆಚ್ಚಿ ಮಾತಾಡುತ್ತಿದ್ದಾರೆ. ಆದರೆ ಮುಗ್ಧರು ಇಂಥ ಮಂಕು ಬೂದಿ ಚೆಲ್ಲುವ ಮಂಕುದಿಣ್ಣೆಗಳ ಖೆಡ್ಡಾಕ್ಕೆ ಬೀಳದಂತೆ ಜನರು ಎಚ್ಚರ ವಹಿಸಿದಾಗಷ್ಟೇ ಈ ಮೆಚ್ಚಿಕೆಗೊಂದು ಅರ್ಥ ಬರುತ್ತದೆ. ಮಾಹಿತಿ ಹಕ್ಕು ಕಾರ್ಯಕರ್ತ ವಿನಾಯಕ ಬಾಳಿಗಾರ ಕೊಂದ ಖತರ್‌ನಾಕ್ ಚಡ್ಡಿ ನರೇಶ್ ಶೆಣೈ ಕೇಸು ಸರಿಯಾದ ದಾರಿಯಲ್ಲಿ ತನಿಖೆಗೆ ಒಳಪಡುವಂತೆ ಮಾಡಿದ್ದ ನರೇಂದ್ರ ನಾಯಕ್ ಮಾಂತ್ರಿಕ ಪಟರನ್ನ ... ಅಂತಕ್ಕೆ ತರಲು ಪ್ರಯತ್ನಿಸುತ್ತಿರುವುದು ನಿಜಕ್ಕೂ ಗ್ರೇಟ್!!

■ ನತುಹ

ತುಮಕೂರು: ಸಿಲಿಕಾನ್ ತಿಪ್ಪೆಯಾಗಲು ಮಧುಗಿರಿ ವಿರೋಧ


ಕೆ.ಎನ್.ರಾಜಣ್ಣ


ಟಿ.ಬಿ.ಜಯಚಂದ್ರ



ಸಿಲಿಕಾನ್ ಸಿಟಿಯ ಕಸದ ಸಮಸ್ಯೆಗೆ ಬಿಬಿಎಂಪಿ ಇನ್ನೂ ವೈಜ್ಞಾನಿಕ ಪರಿಹಾರ ಕಂಡುಕೊಂಡೇ ಇಲ್ಲ. ಮಂಡೂರು ಚಳವಳಿಯ ನಂತರ ಬೆಂಗಳೂರಿನ ಕಸ ವಿಲೇವಾರಿ ಮಾಡುವುದು ಬಿಬಿಎಂಪಿಗೆ ದೊಡ್ಡ ತಲೆನೋವಾಗಿದೆ. ಕಸದ ವೈಜ್ಞಾನಿಕ ಸಂಸ್ಕರಣೆಗೆ ಮುಂದಾಗುವ ದೂರದೃಷ್ಟಿಯ ಆಲೋಚನೆ ಬಿಟ್ಟು ಗಾರ್ಬೇಜ್ ಮಾಫಿಯಾಕ್ಕೆ ತಲೆದೂಗಿಸಿ ಎಲ್ಲೆಲ್ಲೋ ಕಸ ಸುರಿಯಲು ಬಿಬಿಎಂಪಿ ಹವಣಿಸುತ್ತಿದೆ. ಇದೀಗ ಬಿಬಿಎಂಪಿ ಮಂದಿಗಳ ಕಸದ ಕಣ್ಣು ಮಧುಗಿರಿಯ ಮೇಲೆ ಬಿದ್ದಿದ್ದು ಸಿಲಿಕಾನ್ ಸಿಟಿಯ ಹೊಲಸು ತಿಪ್ಪೆಯಾಗಲು ಮಧುಗಿರಿಯ ಜನ ವಿರೋಧ ಹೊರಹಾಕಿದ್ದಾರೆ. ವಿಚಿತ್ರವೆಂದರೆ ಆಡಳಿತ ಪಕ್ಷದವರೇ ಆದ ಸ್ಥಳೀಯ ಶಾಸಕ ಕೆ.ಎನ್. ರಾಜಣ್ಣನೇ ಸರ್ಕಾರದ ನಿರ್ಧಾರದ ವಿರುದ್ಧ ತಿರುಗಿಬಿದ್ದಿದ್ದಾರೆ.

ಮಧುಗಿರಿಯ ಕೃಷಿ ಭೂಮಿಯೊಳಗೆ ಬೆಂಗಳೂರು ಮಹಾನಗರ ಪಾಲಿಕೆಯ ಕಸವನ್ನು ತಂದು ಸುರಿಯಲು ಬಿಬಿಎಂಪಿ ಯತ್ನಿಸುತ್ತಿದೆ ಎಂಬ ಆರೋಪಗಳು ಕೇಳಿ ಬರುತ್ತಿದ್ದು, ಕೆಲವು ಅಧಿಕಾರಿಗಳು ಉದ್ದೇಶಿತ ಸ್ಥಳ ಪರಿಶೀಲನೆ ನಡೆಸಿಹೋಗಿದ್ದಾರೆ ಎನ್ನಲಾಗುತ್ತಿದೆ. ಅಕ್ಕಪಕ್ಕದ ಹಳ್ಳಿಯ ಜನ ಇದನ್ನು ಖಂಡಿಸಿ ಆಕ್ರೋಶ ಹೊರಹಾಕಿದ್ದಲ್ಲದೆ ಬಿಬಿಎಂಪಿ ಅಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ತಿರುಗೇಟು ನೀಡಲು ಹೋರಾಟವೊಂದನ್ನು ರೂಪಿಸುವ ಹಾದಿಯಲ್ಲಿದ್ದಾರೆ. ಮಧುಗಿರಿಯ ಕೊಡಿಗೇನಹಳ್ಳಿ ಹಾಗೂ ಪುರವರದ ಹೋಬಳಿಗಳ ಸುತ್ತಲಿನ 900 ಎಕರೆ ಪ್ರದೇಶದಲ್ಲಿರುವ 20 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಬಿಎಂಪಿ ತ್ಯಾಜ್ಯ ವಿಲೇವಾರಿ ಘಟಕ ರೂಪಿಸಲು ಪ್ರಯತ್ನಗಳು ನಡೆಯುತ್ತಿರೋದು ಸ್ಥಳೀಯರ ಕೆಂಗಣ್ಣಿಗೆ ಗುರಿಯಾಗಿದೆ. ಇಲ್ಲಿ ಹೆಸರಾಂತ ಕೃಷ್ಣಮೃಗಗಳ ಅಪರೂಪದ ಸಂತತಿಯ ಅರಣ್ಯ ಪ್ರದೇಶವಿದ್ದು ಕಸಘಟಕವೇನಾದರೂ ಸ್ಥಾಪನೆಯಾದರೆ ಇವೆಲ್ಲ ಕಣ್ಮರೆ ಯಾಗುವ ಅಪಾಯವಿದೆ. ಬೆಂಗಳೂರಿನ ಕೆಲ ಹಣವಂತರು ಇಲ್ಲಿನ ಸಾಕಷ್ಟು ಜಮೀನನ್ನು ಈಗಾಗಲೇ ಕಡಿಮೆ ಬೆಲೆಗೆ ಕೊಂಡುಕೊಂಡಿದ್ದು, 10 ವರ್ಷದಿಂದ ಬರವಿರುವುದರಿಂದ ರಿಯಲ್ ಎಸ್ಟೇಟ್ ಮಾಫಿಯಾದ ದಂಧೆಕೋರರು ಕೂಡ ಬಿಬಿಎಂಪಿಗೆ ಬೆಂಬಲವಾಗಿ ನಿಂತಿದ್ದಾರೆ ಎನ್ನಲಾಗುತ್ತಿದೆ.

ಈ ಮಧ್ಯೆ ಗುಪ್ತಚರ ಇಲಾಖೆಯ ಮಾಹಿತಿ ಪ್ರಕಾರ ಇಲ್ಲಿನ ಜನರು ಉಗ್ರ ಹೋರಾಟಕ್ಕೆ ಸಂಘಟಿತರಾಗಿದ್ದಾರೆ ಎಂದು ಸಹ ಸ್ಥಳೀಯ ಸುದ್ದಿವಾಹಿನಿಗಳು ವರದಿ ಮಾಡಿವೆ. ಕೆಲವು ತಿಂಗಳುಗಳ ಹಿಂದೆ ಜಿಲ್ಲಾಧಿಕಾರಿ ಕೆ.ಪಿ.ಮೋಹನ್ ರಾಜ್ ಮತ್ತು ಮಧುಗಿರಿ ಉಪವಿಭಾಗಾಧಿಕಾರಿ ಅನಿತಲಕ್ಷ್ಮೀರವರು ಈ ಭಾಗಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಅಲ್ಲದೇ ಹಲದಿನಗಳಿಂದ ಇಲ್ಲಿನ ಸ್ಥಳೀಯ ರೈತರ ಹೆಸರಿನಲ್ಲಿ ಬಿಬಿಎಂಪಿಗೆ ಕೆಲವು ಪತ್ರಗಳು ಹೋಗಿದ್ದು, ಆ ಪತ್ರಗಳಲ್ಲಿ ತಮ್ಮ ಜಮೀನುಗಳನ್ನು ಸಾರಾ ಸಗಟಾಗಿ ಸರ್ಕಾರಕ್ಕೆ ಬರೆದುಕೊಡಲು ನಾವು ಸಿದ್ಧರಿದ್ದೇವೆ ಎಂಬ ಸಾರಾಂಶವಿತ್ತು ಎನ್ನಲಾಗಿದೆ. ಆದರೆ ಪರಿಶೀಲನೆ ನಡೆಸಿದಾಗ ಅವೆಲ್ಲ ಬೋಗಸ್ ಪತ್ರಗಳು, ಯಾಕೆಂದರೆ ಆ ಪತ್ರದಲ್ಲಿ ಹೆಬ್ಬೆಟ್ಟು ಹಾಗೂ ಸಹಿ ಹಾಕಿರುವವರು ಸತ್ತು 10 ವರ್ಷಗಳೇ ಕಳೆದಿವೆ ಎಂಬುದು ತಿಳಿದುಬಂದಿದೆ. ಕೆಲವು ಭೂಮಾಫಿಯಾವಾಲಾಗಳು, ಬಿಬಿಎಂಪಿಯ ಅಧಿಕಾರಿಗಳು, ಕೆಲ ಸಚಿವರು ಸೇರಿಕೊಂಡು ದುರುದ್ದೇಶ ಪೂರಿತವಾಗಿಯೇ ಇಂತಹ ಪತ್ರಗಳನ್ನು ಸೃಷ್ಟಿಸಿದ್ದಾರೆ ಎಂಬ ಸುದ್ದಿ ಹರಡಿದ ನಂತರ ಜನ ಮತ್ತಷ್ಟೂ ಸಿಟ್ಟಿಗೆದ್ದಿದ್ದಾರೆ.

ಕಳೆದ 30 ವರ್ಷಗಳಿಂದ ಇಲ್ಲಿನ ಕೃಷ್ಣಮೃಗ ತಾಣವನ್ನು ವನ್ಯಜೀವಿ ಕೇಂದ್ರವನ್ನಾಗಿ ಘೋಷಿಸಬೇಕು, ಸುತ್ತಮುತ್ತಲ ಕೃಷಿಕರಿಗೆ ಈ ಕೃಷ್ಣಮೃಗಗಳಿಂದ ಉಂಟಾಗುತ್ತಿರುವ ಬೆಳೆನಷ್ಟಕ್ಕೆ ಪರಿಹಾರ ಕೊಡಬೇಕೆಂದು ಸ್ಥಳೀಯ ರೈತ ಸಂಘಟನೆ ಹಾಗೂ ಪ್ರಾಣಿಪ್ರಿಯ ಸಂಘಟನೆಗಳು ಹೋರಾಟ ನಡೆಸುತ್ತಿವೆ. ಆದರೆ ಈ ಬಗ್ಗೆ ಸರ್ಕಾರ ಕಣ್ಣುಮುಚ್ಚಿ ಕುಳಿತಿದ್ದು ಈಗ ಅಲ್ಲಿ ವಿಷಮಯ ತ್ಯಾಜ್ಯ ಸುರಿಯಲು ಅತ್ಯಾಸಕ್ತಿ ತೋರಿಸುತ್ತಿದೆ. ಈ ಭಾಗದ ಹಳ್ಳಿಗಳ ಮಧ್ಯೆ ಜಯಮಂಗಲಿ ಎಂಬ ನದಿ ಹರಿಯುತ್ತಿದ್ದು ಇದು ಜೀವನದಿ ಅಲ್ಲದಿದ್ದರೂ ಇಲ್ಲಿನ ಅಂತರ್ಜಲ ಮಟ್ಟ ಕಾಯ್ದುಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಆದರೆ ವಿಷತ್ಯಾಜ್ಯವನ್ನು ಈ ನದಿ ಪಕ್ಕ ಸುರಿದರೆ ಅದು ಅಂತರ್ಜಲವನ್ನೂ ವಿಷಮಯವಾಗಿಸುವ ಅಪಾಯ ತಪ್ಪಿದ್ದಲ್ಲ.

ಕಳೆದ ಜೂನ್ ತಿಂಗಳಲ್ಲಿ ಸಚಿವ ಕೆ.ಜೆ.ಜಾರ್ಜ್ "ಬೆಂಗಳೂರು ನಗರದ ತ್ಯಾಜ್ಯ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕಿದ್ದು, ತ್ಯಾಜ್ಯ ಸಂಸ್ಕರಣೆ ಮರುಬಳಕೆ ಮತ್ತು ಇದಕ್ಕೆ ಸಂಬಂಧಿಸಿದ ಎಲ್ಲಾ ಕೈಗಾರಿಕೆಗಳಿಗೂ ಈ ಪ್ರದೇಶದಲ್ಲಿ ಸೌಲಭ್ಯ ಕಲ್ಪಿಸುವ ಉದ್ದೇಶವಿದೆ. ಹಾಗಾಗಿ ಮಧುಗಿರಿ ತಾಲ್ಲೂಕಿನಲ್ಲಿ ಒಂದು ಸಾವಿರ ಎಕರೆ ಪ್ರದೇಶದಲ್ಲಿ ತ್ಯಾಜ್ಯ ನಿರ್ವಹಣೆ ಪಾರ್ಕ್ ನಿರ್ಮಾಣ ಮಾಡಲಾಗುವುದು. ಅಗತ್ಯ ಭೂಸ್ವಾಧೀನಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಗೆ ಸೂಚನೆ ನೀಡಲಾಗಿದೆ" ಎಂದು ಪತ್ರಿಕಾಗೋಷ್ಠಿ ನಡೆಸಿದ್ದರು. ಉತ್ತರ ಕೊರಿಯಾದ ಸಿಯೋಲ್‌ನಲ್ಲಿ ಇರುವಂತೆ ತ್ಯಾಜ್ಯ ವಿಲೇವಾರಿ ಪಾರ್ಕ್ ನಿರ್ಮಿಸಿ ಅದರ ಸುತ್ತಲೂ 10 ಅಡಿ ಎತ್ತರದ ಕಾಂಪೌಂಡ್ ಕಟ್ಟಿ, ಮರ ಬೆಳೆಸಿ ಸುತ್ತಲಿನ ಜನರಿಗೆ ತೊಂದರೆಯಾಗದಂತೆ ಕ್ರಮಕೈಗೊಳ್ಳಲಾಗುವುದು ಎಂಬ ಭರವಸೆಯನ್ನೇನೊ ಮಂತ್ರಿಗಳು ಹೊರಹಾಕಿದ್ದರು. ಆದರೆ ನಮ್ಮ ಸರ್ಕಾರಗಳ ಕಾರ್ಯವೈಖರಿ ಎಂತದ್ದು ಅನ್ನೋದನ್ನು ಕಳೆದ ಅರವತ್ತು-ಎಪ್ಪತ್ತು ವರ್ಷಗಳಿಂದ ಕಾಣುತ್ತಾ ಬಂದಿರುವ ಜನರಿಗೆ ಸಚಿವರ ಮಾತಿನ ಮೇಲೆ ಯಾವ ಭರವಸೆಯೂ ಉಳಿದಿಲ್ಲ. ಅಲ್ಲದೇ, ತುಮಕೂರಿನ ಅಜ್ಜಗೊಂಡನಹಳ್ಳಿಯಲ್ಲಿ ಸ್ಥಳೀಯರ ವಿರೋಧದ ನಡುವೆಯೂ ಈಗಾಗಲೇ ಕಸ ವಿಲೇವಾರಿ ಘಟಕ ನಿರ್ಮಾಣವಾಗಿದ್ದು, ವೈಜ್ಞಾನಿಕವಾಗಿ ಮಾಡುತ್ತೇವೆಂದು ಹೇಳಿಕೊಂಡ ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆ ಅವೈಜ್ಞಾನಿಕವಾಗಿಯೇ ಕಸವನ್ನು ಮಣ್ಣಿನಲ್ಲಿ ಹೂತು ನೆಲವನ್ನು ವಿಷಮಯವಾಗಿಸುತ್ತಿದೆ. ಇದರಿಂದ ಸುತ್ತಮುತ್ತಲ ಹಳ್ಳಿಗಳಿಗೆ ಭಯಾನಕ ನೊಣ ಮತ್ತು ಸೊಳ್ಳೆಗಳು ಹರಡುತ್ತಿದ್ದು ಜನ ಆತಂಕಗೊಂಡಿದ್ದಾರೆ. ಅಲ್ಲದೇ ಈ ಘಟಕ ವಿರೋಧಿಸಿ ಹೋರಾಟ ಮಾಡಿದ್ದ ಹೋರಾಟಗಾರರ ಮೇಲಿನ ಕೇಸ್‌ಗಳನ್ನು ವಾಪಾಸ್ ಪಡೆಯಲಾಗುವುದು ಎಂದಿದ್ದ ಸರ್ಕಾರ ಈಗ ಉಲ್ಟಾ ಹೊಡೆಯುತ್ತಿದೆ. ಇಂಥಾ ಮಾತುಗಳ, ಸರ್ಕಾರಗಳ ಸಚಿವರ ಭರವಸೆಯನ್ನು ನಂಬಲು ಜನ ಸುತಾರಾಂ ಸಿದ್ಧರಿಲ್ಲ. ಹಾಗಾಗಿಯೇ, ಸಚಿವ ಜಾರ್ಜ್ ಆ ಗೋಷ್ಠಿ ನಡೆಸಿದ ಕೆಲವೇ ದಿನಗಳಲ್ಲಿ ಮಧುಗಿರಿ ಶಾಸಕ ಕೆ.ಎನ್.ರಾಜಣ್ಣ ನಗರದ ಅಂಬೇಡ್ಕರ್ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಚಿವ ಆಂಜನೇಯರ ಸಮ್ಮುಖದಲ್ಲಿಯೇ ಅದಕ್ಕೆ ಭಾರೀ ವಿರೋಧ ವ್ಯಕ್ತಪಡಿಸಿದ್ದರು.

ಕಸ ರಾಜಕಾರಣ

ಮೊದಲಿನಿಂದಲೂ ಮಧುಗಿರಿ ಶಾಸಕ ಕೆ.ಎನ್.ರಾಜಣ್ಣ ಹಾಗೂ ತುಮಕೂರು ಉಸ್ತುವಾರಿ ಸಚಿವ ಟಿ.ಬಿ.ಜಯಚಂದ್ರ ನಡುವೆ ರಾಜಕೀಯ ಸಂಘರ್ಷ ನಡೆಯುತ್ತಲೇ ಇದೆ. ಇತ್ತೀಚೆಗೆ ಮಧುಗಿರಿಯಲ್ಲಿ ಉದ್ಘಾಟನೆಯಾದ ಹೊಸ ನ್ಯಾಯಾಲಯದ ಕಾರ್ಯಕ್ರಮಕ್ಕೆ ಶಾಸಕ ಕೆ.ಎನ್.ರಾಜಣ್ಣನವರನ್ನೇ ಆಹ್ವಾನಿಸಿಲ್ಲವೆಂದು ಭಾರೀ ವಿರೋಧ ವ್ಯಕ್ತವಾಗಿತ್ತು. ಇದೆಲ್ಲಾ ಸಚಿವ ಟಿ.ಬಿ. ಜಯಚಂದ್ರರದ್ದೇ ಪಿತೂರಿ ಎಂದು ಆರೋಪಿಸಿ ರಾಜಣ್ಣ ಆ ಕಾರ್ಯಕ್ರಮದಿಂದ ದೂರ ಉಳಿದಿದ್ದರು. ಇನ್ನು ಕಾರ್ಯಕ್ರಮದಲ್ಲಿ ಭಾಗವಹಿಸಲೆಂದು ಆಗಮಿಸುತ್ತಿದ್ದ ಕಾನೂನು ಸಚಿವ ಜಯಚಂದ್ರಗೆ ಮಾರ್ಗಮಧ್ಯೆಯೇ ಸಿದ್ದರಾಮಯ್ಯ ಫೋನ್ ಮಾಡಿ ಛೀಮಾರಿ ಹಾಕಿದ್ದರಿಂದ ವಾಪಸ್ ತೆರಳಿದ್ದರು ಎನ್ನಲಾಗುತ್ತಿದೆ. ಇಂಥಾ ವಿರೋಧಿ ರಾಜಕಾರಣಗಳ ನಡುವೆ ಇದೀಗ ಬಿಬಿಎಂಪಿ ಕಸದ ವಾರ್ ಶುರುವಾಗಿದೆ. ರಾಜಣ್ಣನ ಮೇಲಿನ ರಾಜಕೀಯ ದ್ವೇಷಕ್ಕಾಗಿಯೇ ಮಧುಗಿರಿಯಲ್ಲಿ ಬಿಬಿಎಂಪಿ ಕಸ ಸುರಿಯಲು ಜಯಚಂದ್ರ ಕಾಣದ ಕೈನಂತೆ ಕೆಲಸ ಮಾಡುತ್ತಿದ್ದಾರೆ ಎನ್ನಲಾಗುತ್ತಿದೆ.


ಅದೇನೇ ಇರಲಿ, ಮಧುಗಿರಿಯಲ್ಲಿ ಕಸ ತ್ಯಾಜ್ಯ ಘಟಕ ತೆರೆಯುವ ಸರ್ಕಾರದ ಸಂಚಿಗೆ ಈಗಾಗಲೇ ರಾಜ್ಯ ರೈತಸಂಘ ಹಾಗೂ ಹಸಿರುಸೇನೆ ಒಳಗೊಂಡಂತೆ ತಾಲ್ಲೂಕಿನ ಹಲವು ಪ್ರಗತಿಪರ ಸಂಘಟನೆಗಳು ರೈತ ಸಂಘದ ತಾಲ್ಲೂಕು ಘಟಕದ ಕಾರ್ಯದರ್ಶಿ ಶಂಕ್ರಪ್ಪನವರ ನೇತೃತ್ವದಲ್ಲಿ ದೊಡ್ಡಮಟ್ಟದ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಬಿಸಿ ಮುಟ್ಟಿಸಿದ್ದಾರೆ. ಸರ್ಕಾರ ಜನರ ಆಕ್ರೋಶವನ್ನು ಅರ್ಥಮಾಡಿಕೊಳ್ಳದೆ ಹೋದರೆ ಮುಂದೊಂದು ದಿನ ಮಂಡೂರು ಮಾದರಿಯಲ್ಲಿ ಭಾರೀ ಚಳವಳಿಯನ್ನೇ ಎದುರಿಸಬೇಕಾಗುತ್ತದೆ ಎನ್ನುವ ಸಂದೇಶವನ್ನೂ ಜನ ರವಾನಿಸಿದ್ದಾರೆ. ಒಟ್ಟಿನಲ್ಲಿ ಜನಪರ, ರೈತಪರ ಲೇಬಲ್ಲು ಅಂಟಿಸಿಕೊಂಡ ಸರ್ಕಾರಗಳ ಅಡಿಯಲ್ಲೇ ಈ ರೈತದೌರ್ಜನ್ಯ ನಡೆಯುತ್ತಿರೋದು ವಿಪರ್ಯಾಸವೇ ಸರಿ.


■ ಅನಿಲ್‌ಕುಮಾರ್, ಚಿಕ್ಕದಾಳವಟ್ಟ


ಯಲಬುರ್ಗಾ: ರಾಯರೆಡ್ಡಿ ಬುಡದಲ್ಲಿ ಕಮಲದ ಕಲರವ


ಶ್ರೀಪಾದಪ್ಪ


ಬಸವರಾಜ ರಾಯರೆಡ್ಡಿ


ನವೀನ್


ಹಾಲಪ್ಪ ಆಚಾರ


ಪಟೇಲ್

ಯಲಬುರ್ಗಾ ತಾಲೂಕಿನ ರಾಜಕೀಯ ಇತಿಹಾಸ ಕೆದಕಿದಾಗ ಕಳೆದ 50 ವರ್ಷಗಳಿಂದ ಭದ್ರವಾಗಿ ತಳವೂರಿದ ಕಾಂಗ್ರೆಸ್ ಬೇರುಗಳೇ ರಾಚುತ್ತವೆ. ಕಾಂಗ್ರೆಸ್‌ಗೆ ಪರ್ಯಾಯ ರಾಜಕೀಯ ಶಕ್ತಿಯಾಗಿ ಜನತಾ ಪರಿವಾರ ಬೆಳೆದು ನಿಂತಿತಾದರೂ 1999ರ ನಂತರ ಮತ್ತೆ ಕಾಂಗ್ರೆಸ್‌ನ ಗತವೈಭವ ಪುನರಾವರ್ತನೆಯಾಗಿತ್ತು. ಇಂಥಾ ಯಲಬುರ್ಗದಲ್ಲಿ ಇದೀಗ ಬಿಜೆಪಿ ತನ್ನ ನೆಲೆ ಭದ್ರ ಮಾಡಿಕೊಳ್ಳುವ ಪ್ರಯತ್ನದಲ್ಲಿದೆ.

1999ರವರೆಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಗೆ ಅಸ್ತಿತ್ವ ಎಂಬುದೇ ಇರಲಿಲ್ಲ, ಆದರೆ 1999ರಲ್ಲಿ ಜರುಗಿದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಈಶಣ್ಣ ಗುಳಗಣ್ಣವರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಲ್ಲದೆ ಗಣನೀಯ 17 ಸಾವಿರ ಮತ ಪಡೆದನೋ ಆಗಿನಿಂದ ಕೇಸರಿ ಪಕ್ಷ ಇಲ್ಲಿ ಕೊಸರಾಡಲು ಶುರು ಮಾಡಿತ್ತು, 2004ರಲ್ಲಿ ಮತ್ತೆ ಇದೇ ಗುಳಗಣ್ಣನವರ ಬಿಜೆಪಿ ಅಭ್ಯರ್ಥಿಯಾಗಿ 2ನೇ ಬಾರಿಗೆ ಸ್ಪರ್ಧಿಸಿ ಕಾಂಗ್ರೆಸ್‌ನ ಬಸವರಾಜ ರಾಯರೆಡ್ಡಿ ವಿರುದ್ಧ ಕೇವಲ 4 ಸಾವಿರ ಮತಗಳ ಅಂತರದಿಂದ ಸೋತರೂ, ಆ ಸೋಲು ಬಿಜೆಪಿಗೆ ಒಂದಷ್ಟು ನೆಲ ಗಟ್ಟಿಮಾಡಿಕೊಟ್ಟಿತ್ತು, ಅದರ ಫಲವೇ 2008ರಲ್ಲಿ ಈಶಣ್ಣ ತನ್ನ ಮೂರನೇ ಯತ್ನದಲ್ಲಿ ಕಳೆದೆರಡು ಸೋಲಿನ ಅನುಕಂಪ ಮತ್ತು ಯಡ್ಡಿ ಕೃಪಾಪೋಷಿತ ಸಿಂಪತಿ ಡ್ರಾಮಾದಲ್ಲಿ ಗೆದ್ದು ಬಂದದ್ದು, ಅಲ್ಲಿಗೆ ಯಲಬುರ್ಗಾದಲ್ಲಿ ಮೊದಲ ಬಾರಿಗೆ ಕೇಸರಿ ಬಾವುಟ ಹಾರಾಡಲು ಪ್ರಾರಂಭಿಸಿತ್ತು.

ಹಾಲಿ ಮಂತ್ರಿ ಬಸವರಾಜ ರಾಯರೆಡ್ಡಿ ವಿರುದ್ಧ ಅಂದು ಎದ್ದಿದ್ದ ಜನವಿರೋಧಿ ಅಲೆಯ ನೆರವಿನೊಂದಿಗೆ ಈಶಣ್ಣ ಅನಾಮತ್ 29 ಸಾವಿರ ಮತಗಳ ಅಂತರದ ಗೆಲುವು ಸಾಧಿಸಿದ್ದ. ಆದರೆ ಶಾಸಕನಾಗಿ 2 ವರ್ಷ ಕಳೆಯುವುದರೊಳಗೆ ಈಶಣ್ಣವರ ಅನಾರೋಗ್ಯಕ್ಕೆ ಈಡಾಗಿ ಪಕ್ಷ ಸಂಘಟನೆ ನೆನೆಗುದಿಗೆ ಬಿತ್ತು, ಇನ್ನು ಯಲಬುರ್ಗಾ ತಾಲೂಕಿನ ಬಿಜೆಪಿ ಬಿಗ್‌ಬಾಸ್ ಮಾಜಿ ಎಂ.ಎಲ್.ಸಿ ಹಾಲಪ್ಪ ಆಚಾರ ಕೂಡಾ ಯಲಬುರ್ಗದಲ್ಲಿ ಕಮಲ ಅರಳಲು ಸಾಕಷ್ಟು ಬೆವರು ಹರಿಸಿದ್ದಾನೆ. ತಾಲೂಕಿನ ಬಿಜೆಪಿಯೊಳಗೆ ಒಂದು ಹುಲ್ಲುಕಡ್ಡಿ ಅಲ್ಲಾಡಬೇಕಾದರೂ ಈ ಹಾಲಪ್ಪ ಆಚಾರನ ಇಶಾರೆ ಬೇಕು ಎಂಬಷ್ಟರಮಟ್ಟಿಗೆ ಬಿಜೆಪಿಯಲ್ಲಿ ಹಾಲಪ್ಪ ಪ್ರಭಾವವಿದೆ. ಹಾಲಪ್ಪ ಮೊದಲು ಜನತಾ ಪರಿವಾರದಲ್ಲಿ ರಾಜಕೀಯ ಆರಂಭಿಸಿ, ಈಗಿನ ಮಂತ್ರಿ ರಾಯರೆಡ್ಡಿಗೆ ಸಾಥ್ ಕೊಟ್ಟಿದ್ದ, ಆಮೇಲೆ ಇಬ್ಬರ ನಡುವೆ ಮನಸ್ತಾಪ ಉಂಟಾಗಿ ಸುದೀರ್ಘ 20 ವರ್ಷಗಳ ರಾಜಕೀಯ ಸ್ನೇಹ ಮುರಿದುಬಿದ್ದಿತ್ತು, 2007ರಲ್ಲಿ ಹಾಲಪ್ಪ ಆಚಾರ ಬಿಜೆಪಿ ಸೇರ್ಪಡೆಯಾಗುವ ಮೂಲಕ ಆ ಪಕ್ಷದೊಳಗೆ ಪ್ರಭಾವಿಯಾಗುತ್ತಾ ಬಂದರು. ಪಕ್ಷದೊಳಕ್ಕೆ ಅಡಿ ಇಡುತ್ತಿದ್ದಂತೆಯೇ ಬಿಜೆಪಿ ಪಕ್ಷ ಹಾಲಪ್ಪನವರಿಗೆ ಜಿಲ್ಲಾ ಬಿಜೆಪಿ ಅಧ್ಯಕ್ಷನ ಪಟ್ಟ ಕಟ್ಟಿತ್ತು, ಅದೇ ಬಲದಲ್ಲಿ 2008ರ ಚುನಾವಣೆಯಲ್ಲೇ ಹಾಲಪ್ಪ ಆಚಾರ ಬಿಜೆಪಿಯ ಟಿಕೆಟ್‌ಗಾಗಿ ಟ್ರೈ ಮಾಡಿದ್ದರು. ಆದರೆ ಟಿಕೆಟ್ ಈಶಣ್ಣನಿಗೆ ಒಲಿದಿತ್ತು.

ನಂತರ 2009ರ ಲೋಕಸಭಾ ಚುನಾವಣೆ ಎದುರಾದಾಗ ಕೊಪ್ಪಳ ಕ್ಷೇತ್ರದ ಕೇಸರಿ ಟಿಕೆಟ್‌ಗೆ ಯತ್ನಿಸಿದಾಗಲೂ ಹಾಲಪ್ಪನವರಿಗೆ ನಿರಾಸೆಯೇ ಸಿಕ್ಕಿದ್ದು. ಎಸ್.ಶಿವರಾಮೆಗೌಡಗೆ ಟಿಕೆಟ್ ಪ್ರಾಪ್ತಿಯಾಗಿತ್ತು, ಕೊನೆಗೆ ಅವರಿಗೆ ಅದೃಷ್ಟ ಒಲಿದದ್ದು 2010ರಲ್ಲಿ ರಾಯಚೂರ ಮತ್ತು ಕೊಪ್ಪಳ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿ ವಿಧಾನ ಪರಿಷತ್ ಚುನಾವಣೆ ಎದುರಾದಾಗ. ಅಸಲಿಗೆ ಆಗ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ತುಂಬೆಲ್ಲಾ ಪ್ರತಿ ಗ್ರಾಮ ಪಂಚಾಯ್ತಿ ತಾಲ್ಲೂಕು, ಜಿಲ್ಲಾ ಪಂಚಾಯ್ತಿ ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ ಬೆಂಬಲಿತ ಪ್ರತಿನಿಧಿಗಳೇ ತುಂಬಿಕೊಂಡಿದ್ದರು. ಅಂತಹ ಸಂದರ್ಭದಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲುವುದು ಕನಸಿನ ಮಾತೇ ಆಗಿತ್ತು, ಅದನ್ನು ಗಮನಿಸಿಯೇ ಸ್ವತಃ ಯಡ್ಡಿ ಹಾಲಪ್ಪನಿಗೆ "ನೀನು ಗೆಲ್ಲುವುದು ಕಷ್ಟ ಹೀಗಾಗಿ ಆಲೋಚನೆ ಮಾಡಿ" ಅಂತ ಗೀತೋಪದೇಶ ಮಾಡಿದ್ದರು.


ಅದನ್ನು ಲೆಕ್ಕಿಸದ ಹಾಲಪ್ಪ ಟಿಕೆಟ್ ಗಿಟ್ಟಿಸಿಕೊಂಡದ್ದು ಮಾತ್ರವಲ್ಲ ಬಸವರಾಜ ರಾಯರೆಡ್ಡಿಯಂತಹ ಅತಿರಥ ಮಹಾರಥರ ಅಭಯವಿದ್ದ ಕಾಂಗ್ರೆಸ್ ಸ್ಪರ್ಧಿ ಬಸವರಾಜ ಪಾಟೀಲ ಇಟಗಿಯನ್ನು ಸೋಲಿಸಿದ್ದರು. 2013ರ ವಿಧಾನಸಭಾ ಚುನಾವಣೆಯಲ್ಲೂ ಹಾಲಪ್ಪನಿಂದ ಇಂತದ್ದೇ ಚಮತ್ಕಾರ ನಿರೀಕ್ಷಿಸಿದ್ದ ಯಡ್ಡಿ-ಪರಿತ್ಯಕ್ತ ಬಿಜೆಪಿ ಹಾಲಪ್ಪನಿಗೇ ಟಿಕೆಟ್ ಕೊಟ್ಟಿತ್ತು. ಆದರೆ ಬಿಜೆಪಿಯ ದಾಯಾದಿ ಟೊಂಗೆಗಳಾದ ಯಡ್ಡಿಯ ಕೆಜೆಪಿ ಮತ್ತು ರಾಮುಲುನ ಬಿಎಸ್‌ಆರ್ ಬಿಜೆಪಿಯ ಜೊತೆಗೆ ಹಾಲಪ್ಪ ಆಚಾರರನ್ನೂ ತಳ ಮುಟ್ಟಿಸಿದ್ದವು.

ಆದರೆ ಈ ಸಲ ಪರಿಸ್ಥಿತಿ ಸಂಪೂರ್ಣ ಭಿನ್ನವಾಗಿದೆ. ಹೊಡೆದು ಛಿದ್ರವಾಗಿದ್ದ ಕೇಸರಿ ತುಣುಕುಗಳೆಲ್ಲ ಒಟ್ಟಾಗಿವೆ. ಪ್ರಭಾವಿ ಲಿಂಗಾಯತ ಮತಗಳ ವಾರಸುದಾರ ಯಡ್ಡಿಯ ನೇತೃತ್ವ ಪಕ್ಷಕ್ಕಿರುವುದರಿಂದ ಯಲಬುರ್ಗದಲ್ಲಿ ಬಿಜೆಪಿ ಗೆದ್ದೇ ಗೆಲ್ಲುವುದೆಂಬ ಲೆಕ್ಕಾಚಾರವನ್ನೇನೊ ಹಾಕಲಾಗಿದೆ. ಆದರೆ ಟಿಕೆಟು ಯಾರಿಗೆನ್ನುವುದೇ ನಿಕ್ಕಿಯಾಗಿಲ್ಲ, ಯಾಕೆಂದರೆ ಯಡ್ಡಿ ಈ ಸಲ ತನ್ನ ನಿಷ್ಠರಿಗಷ್ಟೇ ಉಳಿಗಾಲ ಅನ್ನೋದನ್ನು ಈಶ್ವರಪ್ಪನ ಸ್ಯಾಂಪಲ್ ಮೂಲಕ ಸಾಬೀತುಮಾಡಿದ್ದಾರೆ. ಹಾಗಾಗಿ ಯಡ್ಡಿಯ ಹಿಂದೆ ಕೆಜೆಪಿಗೆ ಹೋಗದೆ ಬಿಜೆಪಿಯಲ್ಲೇ ಉಳಿದು ಸ್ಪರ್ಧಿಸಿದ್ದ ಹಾಲಪ್ಪ ಆಚಾರಿಗೆ ಯಡ್ಡಿಯ ಕೃಪೆ ಒಲಿಯುವುದು ಕಷ್ಟ.

ಕಳೆದ ಸಲ ಕೆಜೆಪಿಯಿಂದ ಅಖಾಡಕ್ಕಿಳಿದಿದ್ದ ನವೀನ್ ಕುಮಾರ್ ಗುಳಿಗೌಣ್ಣವರ್‌ಗೆ ಟಿಕೆಟು ಸಿಕ್ಕಿ ಎನ್ನಲಾಗುತ್ತಿದೆ. ಈ ನಡುವೆ ಯಲಬುರ್ಗದ ಹಾಲಿ ಶಾಸಕ ಬಸವರಾಜ ರಾಯರೆಡ್ಡಿ ಸಿದ್ದರಾಮಯ್ಯ ಸಂಪುಟದಲ್ಲಿ ಪ್ರಭಾವಿ ಸಚಿವಗಿರಿಯನ್ನೂ ದಕ್ಕಿಸಿಕೊಂಡಿರುವುದರಿಂದ ಮುಂದಿನ ಚುನಾವಣೆಯಲ್ಲಿ ಗೆಲ್ಲಲು ಸರಿಯಾದ ಅಖಾಡವನ್ನೇ ಸಿದ್ಧ ಮಾಡಿಕೊಳ್ಳುತ್ತಿದ್ದಾರೆ.

ಇದೆಲ್ಲವನ್ನು ಲೆಕ್ಕ ಹಾಕಿದರೆ ಯಲಬುರ್ಗದ 2018ರ ಭವಿಷ್ಯವನ್ನು ಹೀಗೇ ಅಂತ ಉಲಿಯಲು ಸಾಧ್ಯವಾಗದು. ಕಾಲವೇ ಉತ್ತರ ಕೊಡಬೇಕು.

■ ಸ.ಶರಣಪ್ಪ ಪಾಟೀಲ ಕರಮುಡಿ








ಓಂ ಪುರಿ-ಕಣ್ಮರೆಯಾದ ನಮ್ಮೆಲ್ಲರ ಕಾಮ್ರೇಡ್

ನೆನಪಿಸಿಕೊಳ್ಳುವುದೆಂದರೆ ಅದು ಯಾತನೆಯ ಹೊಸ ...ೂಪ

- ಬೋದಿಲೇರ್

ಎಂಬತ್ತರ ದಶಕದಲ್ಲಿ ವಿದ್ಯಾರ್ಥಿಗಳಾಗಿದ್ದ ನಮಗೆಲ್ಲ ...ೂಸ ಅಲೆ ಸಿನಿಮಾ ಅಥವಾ ಪರ್ಯಾಯ ಸಿನಿಮಾ ...ಳವಳಿ ಒಂದು ಅನುಭವ ಮಂಟಪವಾಗಿತ್ತು. ಈ ಹೊಸ ...ಲೆ ಸಿನಿಮಾದ ನಿರ್ದೇಶಕರು ಮತ್ತು ನಟ, ನಟಿಯರು ...ಮ್ಮದೇ ರೀತಿಯಲ್ಲಿ ಒಂದು ತಲೆಮಾರನ್ನು ರೂಪಿಸಿದರು. ...ದು ನಮ್ಮ ತಲೆಮಾರು. ಏನಾದರೂ ಆಗದಿದ್ದರೂ ...ರವಾಗಿಲ್ಲ, ಸ್ವಂತಿಕೆಯನ್ನು ಬಿಟ್ಟುಕೊಟ್ಟು ಕಳೆದು ...ೋಗಬೇಡ ಎಂದು ಹೇಳಿಕೊಟ್ಟಂತಹ ವಿಸ್ಮಯ ...ಷ್ಟಿಕರ್ತರು. ಈ ಚಳವಳಿಯ ಭಾಗವಾಗಿದ್ದ ನಟ ಓಂ ...ರಿ ಕಳೆದ ಶುಕ್ರವಾರ ಹೃದಯಾಘಾತದಿಂದ ಮುಂಬೈನಲ್ಲಿ ...ರಿಕೊಂಡಿದ್ದಾರೆ. ಇದು ನಮ್ಮನ್ನು ಹತಾಶೆಗೊಳಿಸಿದಂತಹ ...ದ್ದಿ. ಒಳಗೆ ಹೇಳಲಾರದಂತಹ ಸಂಕಟ. ಏಕೆಂದರೆ ಓಂ ...ರಿ ಕೇವಲ ಕನಸುಗಳನ್ನು ಬಿತ್ತುವ ಒಬ್ಬ ನಟನಾಗಿರಲಿಲ್ಲ. ...ಮ್ಮಲ್ಲಿ ಫ್ಯಾಂಟಸಿಯನ್ನು ಹೊತ್ತಿಸಿ ಮತ್ತೊಂದು ಲೋಕಕ್ಕೆ ...ದೊಯ್ಯುವ ಮಾಂತ್ರಿಕನಾಗಿರಲಿಲ್ಲ. ಆದರೆ ಓಂ ಪುರಿ ...ರತೀಯ ಸಿನಿಮಾರಂಗದ ಅರ್ಥಪೂರ್ಣ ನಟರಾಗಿದ್ದರು. ...ಹತ್ವದ ನಟರಾಗಿದ್ದರು. ಇಲ್ಲಿ ನಿರ್ದೇಶಕನ ಆಶಯಗಳನ್ನು ...ಾರುವಾಕ್ಯಾಗಿ ಗ್ರಹಿಸಿ ಆ ಕನಸಿದಂತಹ ಪಾತ್ರವೇ ...ಬಿಡುತ್ತಿದ್ದ ಓಂ ಪುರಿ ಪ್ರೇಕ್ಷಕನೊಂದಿಗೆ ನೇರವಾಗಿ ...ವಾದ ನಡೆಸುತ್ತಿದ್ದರು. ವಿದ್ಯಾವಂತನೂ ಅಲ್ಲದ ಈತ ...ನೆಯ ಮೂಲಕ ನಡೆಸುವ ವೈಚಾರಿಕ, ಮಾನವೀಯ ...ವಾದ ಏಕಕಾಲಕ್ಕೆ ನೇರವಾಗಿ, ಸಂಕೀರ್ಣವಾಗಿರುತ್ತಿತ್ತು. ...ಗೆ ಸರಿಸಾಟಿಯಾದ ಪ್ರೇಕ್ಷಕನನ್ನು ಬಯಸುತ್ತಿತ್ತು. ಮುಖದ ...ಂಬಾ ಸಿಡುಬಿನ ಕಲೆಗಳನ್ನು ಹೊಂದಿದ್ದ ಓಂ ಪುರಿಯ ...ಂದರ್ಯ ಆತನ ನಟನೆಯಲ್ಲಿತ್ತು, ಆತನ ಬದ್ಧತೆಯಲ್ಲಿತ್ತು. ...ನೆಯ ಮೂಲಕ ತನ್ನ ಜೀವಸೆಲೆಯನ್ನು ತೆರೆದಿಡುತ್ತಿದ್ದ ... ಪುರಿಯನ್ನು ನಿರ್ದೇಶಕ ಚಿತ್ರಕತೆಯ ಚೌಕಟ್ಟಿನಲ್ಲಿ ...ುಕಿದಷ್ಟೂ ಆತ ಅದನ್ನು ಸೀಳಿಕೊಂಡು ಬೆಳೆಯುತ್ತಿದ್ದ; ... ಮೂಲಕ ಇಡೀ ಸಿನಿಮಾಗೆ ಘನತೆಯನ್ನು ತಂದು ...ಡುತ್ತಿದ್ದ. ಅರ್ಥಪೂರ್ಣತೆಯನ್ನು ತಂದುಕೊಡುತ್ತಿದ್ದ. ... ಕಾರಣಕ್ಕಾಗಿಯೇ ಓಂ ಪುರಿ ಅರ್ಥಪೂರ್ಣ ನಟ.

... ಓಂ ಪುರಿ ನಟಿಸಿದ ಪಾತ್ರಗಳನ್ನು ಎಣಿಸುತ್ತಾ ...ಡುವುದೇ ಅಸಂಬದ್ಧ ಏಕೆಂದರೆ 'ಆಕ್ರೋಶ್' ಸಿನಿಮಾದ ...ಹಾನಿಯ ಭಿಕುವಾಗಲಿ, 'ಅರ್ಧಸತ್ಯ' ಸಿನಿಮಾದ ಅನಂತ ...ಂಕರ್ ಆಗಲಿ, 'ಸದ್ಗತಿ' ಸಿನಿಮಾದ ದುಕಿಯಾ ಆಗಲಿ, ...ರ್ಚ ಮಸಾಲ'ದ ಅಬು ಮಿಯಾ ಆಗಲಿ, 'ಗಾಂಧಿ' ...ಮಾದ ನಹರಿಯಾಗಲಿ, 'ಜಾನೆ ಭಿ ದೋ ಯಾರೋ'ದ ...ಜ ಆಗಲಿ, 'ತಮಸ್' ಸಿನಿಮಾದ ನತೂ ಆಗಲಿ, ...ಚೀಸ್'ನ ಸನಾತನ್ ಆಗಲಿ ಓಂ ಪುರಿ ನಮ್ಮೊಳಗೆ ಪ್ರತಿಧ್ವನಿಸುತ್ತಿದ್ದ, ಪ್ರತಿಫಲಿಸುತ್ತಿದ್ದ, ಪರ್ಯಾಲೋಚಿಸುತ್ತಿದ್ದ. ನಮ್ಮ ಮನಸ್ಸಿನ ಲಹರಿಗೆ ಮರು ಹೊಳಹು ನೀಡುತ್ತಿದ್ದ. ಅಲ್ಲಿ ಓಂ ಪುರಿಯ ನಟನೆಯಲ್ಲಿ ನಾವು ಒಂದು ಪ್ರದರ್ಶನವನ್ನು ಬಯಸಿದರೆ ಅದು ನಮ್ಮ ಮೂರ್ಖತನವಾಗುತ್ತಿತ್ತು. ಏಕೆಂದರೆ ನಟ ಓಂ ಪುರಿಯೊಂದಿಗೆ ಮುಖಾಮುಖಿಯಾಗಬೇಕೆಂದರೆ ನಮ್ಮೊಳಗೆ ಒಬ್ಬ ಸಂವೇದನಾಶೀಲ ಪ್ರೇಕ್ಷಕ ಇದ್ದಾಗ ಮಾತ್ರ ಸಾಧ್ಯ. ಓಂ ಪುರಿಯ ನಟನೆಯನ್ನು ಮಾತ್ರ ಮೆಚ್ಚಿ ಮಿಕ್ಕಂತೆ ನಾವು ಪಲಾಯನವಾದಿಯಾಗಲು ಸಾಧ್ಯವೇ ಇರಲಿಲ್ಲ. ತನ್ನ ನಟನೆಯ ಮೂಲಕ ಓಂ ಪುರಿ ಎತ್ತಿದ್ದ ಪ್ರಶ್ನೆಗಳಿಗೆ, ಬಂಡಾಯಕ್ಕೆ, ಪ್ರತಿರೋಧಕ್ಕೆ ನಾವು ಪಾಲ್ಗೊಳ್ಳಲೇಬೇಕಿತ್ತು.

ಎಪ್ಪತ್ತು, ಎಂಬತ್ತರ ದಶಕಗಳ ತಲ್ಲಣಗಳ, ಬಿಕ್ಕಟ್ಟಿನ, ಸಮತಾವಾದದ ಕನಸಿನ ಇಂಡಿಯಾದಲ್ಲಿ ತನ್ನ ನಟನೆಯ ಮೂಲಕ ಜೀವಂತಿಕೆಯಿಂದ, ಚೈತನ್ಯದಿಂದ ಸ್ಪಂದಿಸುತ್ತಿದ್ದ ಓಂ ಪುರಿ ತೊಂಬತ್ತರ ದಶಕದ ಜಾಗತೀಕರಣದ ಕೊಳ್ಳುಬಾಕುತನ, ಶ್ರೀಮಂತಿಕೆಯ ಅಟ್ಟಹಾಸ, ಗೌಜು, ಗದ್ದಲದಲ್ಲಿ ಸಂಪೂರ್ಣ ಮಂಕಾಗಿದ್ದು ಮಾತ್ರ ನಮ್ಮನ್ನು ಇಂದಿಗೂ ಕಾಡುತ್ತದೆ. ಅದಕ್ಕೆ ಆತ ಮಾತ್ರ ಹೊಣೆಗಾರನಲ್ಲ. ಇಡೀ ಹೊಸ ಅಲೆ ಸಿನಿಮಾ ಚಳವಳಿಯು ಜಾಗತೀಕರಣದ ಮತೀಯವಾದ ಮತ್ತು ಜಾತಿವಾದಕ್ಕೆ ಮುಖಾಮುಖಿಯಾಗುವಂತಹ ನುಡಿಕಟ್ಟನ್ನು, ಚಿಂತನೆಗಳನ್ನು ತನ್ನೊಳಗೆ ರೂಪಿಸಿಕೊಳ್ಳಲು ವಿಫಲವಾಗಿತ್ತು. ಈ ಪರ್ಯಾಯ ಚಳವಳಿ ತನ್ನ ವೈಫಲ್ಯದ ಜೊತೆಜೊತೆಗೆ ನಾಸಿರುದ್ದೀನ್ ಶಾ, ಓಂ ಪುರಿ, ದೀಪ್ತಿ ನಾವೆಲ್, ಪಂಕಜ್ ಕಪೂರ್, ಶಬನಾ ಅಜ್ಮಿಯಂತಹ ಕಲಾವಿದರನ್ನೂ ಹತಾಶೆಯ ಅಂಚಿಗೆ ದೂಡಿದ್ದು ಇಂದಿಗೂ ನಮ್ಮ ಕಣ್ಣ ಮುಂದಿದೆ. ಸಣ್ಣಸಣ್ಣ ಹೋಬಳಿಯ, ಹಳ್ಳಿಯ, ಪಟ್ಟಣದ ಬದುಕಿನ ಭಾಗವಾಗಿರುತ್ತಿದ್ದ ಓಂ ಪುರಿಯ ಪಾತ್ರಗಳು ದಿಢೀರನೆ ಪರಿವರ್ತನೆಗೊಂಡ. ಜಾಗತೀಕರಣದ ಭಾರತದಲ್ಲಿ ವಿಶಾಲವಾದ ಜಗತ್ತಿನೊಂದಿಗೆ ವ್ಯವಹರಿಸಲು ಶ್ರಮಪಟ್ಟು ಸುಸ್ತಾಗಿದ್ದು ಒಂದೆಡೆಯಿದ್ದರೆ ಮತ್ತೊಂದೆಡೆ ಈ ಗೋಳೀಕರಣದ ಜಗತ್ತು ಮತ್ತೇನಲ್ಲದೆ ಅದರೊಳಗೆ ಕಳೆದು ಹೋಗಲಿಕ್ಕಾಗಿಯೇ ಉಳಿದಿರುವ ಕೊಚ್ಚೆ ಎಂಬುದು ಓಂ ಪುರಿಯಂತಹ ಸೂಕ್ಷ್ಮ ಸಂವೇದನೆಯ, ಈ ಮಣ್ಣಿನ ವಾಸನೆಯನುಂಡು ಬೆಳೆದಂತಹ ನಟನಿಗೆ ಅರಿವಾಗಲು ತುಂಬಾ ತಡವಾಗಿತ್ತು. ನೀನು ಬಫೂನಿನಂತೆ ನಟಿಸು ಎಂದು ತಾಕೀತು ಮಾಡಿದ ಈ ಜಾಗತೀಕರಣದ ಭಾರತೀಯ ಸಿನಿಮಾರಂಗ ಆ ಮೂಲಕ ಓಂ ಪುರಿಯಂತಹ ಅರ್ಥಪೂರ್ಣ ನಟನಿಗೆ ಬಲು ದೊಡ್ಡ ಅವಮಾನ ಮಾಡಿತು. ಓಂ ಪುರಿ ಯಾಂತ್ರಿಕ ಅಭಿನಯಕ್ಕೆ ಶರಣಾದಂತಿದ್ದರು. ಆದರೆ ಸೋತು ಹೋಗಿದ್ದ ಓಂ ಪುರಿ

ಗೋಳೀಕರಣದ ಮುಕ್ತ ಮಾರುಕಟ್ಟೆಯಲ್ಲಿ ಕಳೆದು ಹೋಗಿದ್ದ ಅಲ್ಲಿ ನತೂನನ್ನು, ಬಿಕುನನ್ನು ಹುಡುಕಲು ನಮಗೂ ಸಾಧ್ಯವಿರಲಿಲ್ಲ. ಏಕೆಂದರೆ ನಾವೂ ಕಳೆದುಹೋಗಿದ್ದೆವು.

ಆರ್ಸನ್ ವೆಲ್ಸ್ ನಟಿಸಿ, ನಿರ್ದೇಶಿಸಿದ, 1941 ರಲ್ಲಿ ತೆರೆಕಂಡ 'ಸಿಟಿಜನ್ ಕೇನ್' ಚಿತ್ರದ ಆರಂಭದ ದೃಶ್ಯದಲ್ಲಿ ಸಾವಿನ ಹೊಸ್ತಿಲಿನಲ್ಲಿರುವ ಚಾರ್ಲ್ಸ್ ಫಾಸ್ಟರ್ ಕೇನ್ "ರೋಸ್‌ಬಡ್" ಎಂದು ಉದ್ಗರಿಸಿ ಸಾವನ್ನಪ್ಪುತ್ತಾನೆ. ಕೂಡಲೇ ಆತನ ಕೈಯಿಂದ ಹಿಮದ ಗ್ಲೋಬ್ ಕೆಳಗುರುಳಿ ಬೀಳುತ್ತದೆ. ಈ ಪದದ ನಿಗೂಢ ಹಿನ್ನೆಲೆಯನ್ನು ಬೇಧಿಸಲು ಚಿತ್ರದುದ್ದಕ್ಕೂ ಪ್ರಯತ್ನಿಸಿದ ವರದಿಗಾರ ಥಾಮ್ಸನ್ ಕ್ಲೈಮಾಕ್ಸ್‌ನಲ್ಲಿ ಹತಾಶನಾಗಿ "ಬಹುಶಃ 'ರೋಸ್‌ಬಡ್' ಎನ್ನುವುದು ಕೇನ್ ಪಡೆಯದೆ ಇರುವಂತಹದ್ದು ಅಥವಾ ಕಳೆದುಕೊಂಡಿರುವಂತಹದ್ದು" ಎಂದು ಹೇಳುತ್ತಾನೆ. ಮುಂದುವರೆದು "ಒಂದುವೇಳೆ ದೊರಕಿದ್ದರೂ ಅದರಿಂದ ಹೆಚ್ಚಿನ ಪ್ರಯೋಜನವೇನೂ ಆಗುತ್ತಿರಲಿಲ್ಲ" ಎಂದು ಉದ್ಗರಿಸಿ ಕೇನ್‌ನ ಬಂಗಲೆ 'ಜನಾಡು'ವಿನಿಂದ ನಿರ್ಗಮಿಸುತ್ತಾನೆ. ಇಂದಿನ ನವ ಉದಾರೀಕರಣದಲ್ಲಿ ಕಳೆದು ಹೋದ ಎಪ್ಪತ್ತರ, ಎಂಬತ್ತರ ದಶಕದ ಆಕ್ರೋಶ್, ಅರ್ಧಸತ್ಯ ಮರಳಿ ದೊರೆತರೂ ನಮಗೂ ಹೆಚ್ಚಿನ ಪ್ರಯೋಜನವಾಗಲಿಕ್ಕಿಲ್ಲ. ಏಕೆಂದರೆ ಇಂದಿನ ಫ್ಯಾಸಿಸ್ಟ್ ಸಂಘ ಪರಿವಾರದ ಲುಂಪೆನ್ ಗುಂಪಿನ ಫೆನಟಿಸಂ ಅನ್ನು ಎದುರಿಸುವಲ್ಲಿ ಓಂ ಪುರಿಯಂತಹ ಕಲಾವಿದನೇ ವಿಫಲಗೊಂಡಿದ್ದರು. ಅವರ ದೇಶಪ್ರೇಮದ ಉನ್ಮಾದವನ್ನು ಎದುರಿಸಲಾಗದೆ ಓಂ ಪುರಿ ಹಣ್ಣಾಗಿ ಕುಗ್ಗಿಹೋಗಿದ್ದನ್ನು ನೋಡಲು ನಮಗೂ ಸಂಕಟವಾಗುತ್ತಿತ್ತು. ನಮ್ಮೆಲ್ಲರ ಅಸಹಾಯಕತೆಗೆ ಏನಾದರೂ ಸಮರ್ಥನೆ ಇದೆಯೇ?

ನಂದಿತಾ ದಾಸ್ ನಿರ್ದೇಶನದ 'ಮಾಂಟೋ' ಸಿನಿಮಾದಲ್ಲಿ ಓಂ ಪುರಿ ತೋಬಾ ಟೇಕ್ ಸಿಂಗ್ ಪಾತ್ರ ವಹಿಸಬೇಕಿತ್ತು. ಸಾದತ್ ಹಸನ್ ಮಾಂಟೋ ಕತೆಯ ಪಾತ್ರಧಾರಿಯಾಗುವ ಅವಕಾಶವು ಓಂ ಪುರಿಗೆ ಅವರು ಎಲ್ಲವನ್ನೂ ಕಳೆದುಕೊಂಡಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಒದಗಿಬಂದಿದ್ದು ಅವರ ಸಿನಿಮಾ ಬದುಕಿನ ಒಂದು ಗೌರವದ ಮುಕ್ತಾಯದಂತಿತ್ತು. ಅವರಿಗೆ ಜಡತ್ವದಿಂದ ಹೊರಬರಲು ಸ್ಫೂರ್ತಿ ಆಗುವಂತಹ ಸಾಧ್ಯತೆ ಇತ್ತು. ಆದರೆ ಅದು ಸಹ ಸಾಧ್ಯವಾಗಲಿಲ್ಲ. ಹಿಂದೂತ್ವವಾದಿಗಳಿಗೆ ಹಂದಿಯನ್ನು ಹಿಡಿದು ಕೊಟ್ಟ ನತ್ತೂಗೆ ಅವರ ಕುತಂತ್ರದ ಹಿನ್ನೆಲೆ ಗೊತ್ತಿರಲಿಲ್ಲ. ಆದರೆ ತಾನು ಹಿಡಿದುಕೊಟ್ಟ ಹಂದಿಯನ್ನು ಈ ಹಿಂದೂತ್ವದ ಮತೀಯವಾದಿಗಳು ಮಸೀದಿಯ ಮುಂದೆ ಸಾಯಿಸಿ ಬಿಸಾಕಿದಾಗ ಇಡೀ ಪಟ್ಟಣದಲ್ಲಿ ಕೋಮು ಗಲಭೆ ಭುಗಿಲೇಳುತ್ತದೆ. ಇದಕ್ಕೆ ತಾನು ಕಾರಣನಾದೆನಲ್ಲ ಎಂದು ಪ್ರಾಯಶ್ಚಿತ್ತದಲ್ಲಿ ನರಳುವ ನತ್ತೂ ತನ್ನ ಸಂಸಾರದೊಂದಿಗೆ ಪಟ್ಟಣವನ್ನೇ ತೊರೆಯುತ್ತಾನೆ. ಇಂದು ಓಂ ಪುರಿ ಇಲ್ಲ. ತಳಮಳದಿಂದ, ಅಸಹಾಯಕತೆಯಿಂದ ನರಳಿದ ಓಂ ಪುರಿ ಬದುಕನ್ನೇ ತೊರೆದು ...

■ ಬಿ. ಶ್ರೀಪಾದ ಭಟ್

ದೇವರನ್ನೇ ಬದಲಾಯಿಸಿದ ಪುರೋಹಿತರು





ದೊಡ್ಡವರಿಗಾಗಿ ಮಕ್ಕಳ ಕಥೆ

ಒಮ್ಮೆ ದೇವರಿಗೆ ವಿಪರೀತ ಕೋಪ ಬಂತು. ಭೂಮಿಯ ಜನರು ತನ್ನನ್ನು ಭಕ್ತಿಯಿಂದ ಪೂಜಿಸಿ ನೀಡಿದ ಚಿನ್ನದ ನಾಣ್ಯಗಳ ಕಾಣಿಕೆಯನ್ನು ಗುಡಿಯ ಪುರೋಹಿತರು ಸ್ವಾಹಾ ಮಾಡುತ್ತಿದ್ದುದನ್ನು ನೋಡಿ ದೇವರಿಗೆ ತಡೆಯದಾಯಿತು. "ದೇವರೆ ಮನುಷ್ಯನನ್ನು ಸೃಷ್ಟಿ ಮಾಡಿದ್ದು; ಅವನು ನಮ್ಮ ಬಾಳಿಗೆ ಸುಖ-ಸಂಪತ್ತು, ವಜ್ರ ವೈಢೂರ್ಯಗಳನ್ನು ನೀಡಿ ತೃಪ್ತಿಯನ್ನು ನೀಡಿದ್ದಾನೆ. ಆದ್ದರಿಂದ ನಮಗೆ ಕೊಟ್ಟಿದ್ದನ್ನು ನಾವು ಭಕ್ತಿ, ಗೌರವದಿಂದ ಅವನಿಗೆ ವಾಪಾಸು ಅರ್ಪಿಸಬೇಕು" ಎಂದು ಭಕ್ತರನ್ನು ನಂಬಿಸಿ, ವಂಚಿಸಿ ಕಾಣಿಕೆಯಾಗಿ ಬಂದ ಚಿನ್ನದ ನಾಣ್ಯಗಳನ್ನು ತಮ್ಮ ಜೇಬಿಗೆ ಇಳಿಸುತ್ತಿರುವುದನ್ನು ನೋಡಿದ ದೇವರು ಇದನ್ನು ತಡೆಯಬೇಕು; ಇಲ್ಲದಿದ್ದರೆ ಜನ ನನ್ನನ್ನು ಸಂಪೂರ್ಣವಾಗಿ ಮರೆತು, ಆ ಪುರೋಹಿತರನ್ನು ಪೂಜಿಸಲು ಶುರು ಮಾಡುತ್ತಾರೆ ಎಂದು ಚಿಂತೆಗೊಳಗಾದ.

ಭೂಮಿಯನ್ನು ಆಳುತ್ತಿದ್ದ ಐಲು ದೊರೆಯ ಕನಸಿನಲ್ಲಿ ಒಂದು ರಾತ್ರಿ ಆ ದೇವರು ಕಾಣಿಸಿಕೊಂಡು ಹೀಗೆ ಹೆದರಿಸಿದ, "ಎಲೈ, ಐಲು ದೊರೆಯೆ. ನಿನ್ನ ಸಾಮ್ರಾಜ್ಯದಲ್ಲಿ ನನಗೆ ಸೇರಬೇಕಾದ ಭಕ್ತಿ, ಗೌರವಗಳು ಸಿಗದ ಹಾಗೆ ಆಗಿದೆ. ಜನರ ಭಕ್ತಿ, ಆರಾಧನೆಗಳು ನನ್ನನ್ನು ತಲುಪುತ್ತಲೇ ಇಲ್ಲ. ಗುಡಿಯ ಪುರೋಹಿತರು ಎಲ್ಲವನ್ನು ಕಬಳಿಸುತ್ತಿದ್ದಾರೆ. ಹೀಗೇ ಮುಂದುವರೆದರೆ ನಾನು ನಿನ್ನ ಸಾಮ್ರಾಜ್ಯದಲ್ಲಿ ಅಲ್ಲೋಲ-ಕಲ್ಲೋಲವನ್ನುಂಟುಮಾಡುತ್ತೇನೆ. ಎಚ್ಚರ!" ದೇವರು ಹಾಕಿದ ಬೆದರಿಕೆಗೆ ಆ ಐಲು ದೊರೆ ಭಯದಿಂದ ನಡುಗಿದ. "ಇದಕ್ಕೆ ನಾನೇನು ಮಾಡಲಿ, ದೇವರೆ. ಅನಾದಿಕಾಲದಿಂದಲೂ ನಡೆದುಕೊಂಡು ಬಂದಿರುವ ಆಚಾರವನ್ನು ಬದಲಾಯಿಸುವುದಕ್ಕೆ ಸಾಧ್ಯವೆ?" ಎಂದು ಕೈಮುಗಿದು ಕೇಳಿದ. ಅದಕ್ಕೆ ದೇವರು, "ಅನಾದಿಕಾಲದಿಂದಲೂ ಬಂದಿರುವ ಆಚಾರವನ್ನು ಇನ್ನು ಮುಂದೆ ನಡೆಸಬಾರದು. ನನಗಿಂತ ನಿಮ್ಮ ಆಚಾರವೆ ಹೆಚ್ಚಾಯಿತೆ? ನಾನು ಹೇಳಿದ ಹಾಗೆ ಕೇಳಲಿಲ್ಲ ಅಂದರೆ ಹುಷಾರ್!" ಗಾಬರಿಯಲ್ಲಿ ಐಲು ದೊರೆಯ ತಲೆಗೆ ಏನೂ ಹೊಳೆಯಲಿಲ್ಲ, ದೇವರ ಕೋಪಕ್ಕೆ ಗಡ, ಗಡ ನಡುಗುತ್ತಾ ಕೇಳಿದ, "ಪರಮಾತ್ಮ, ಈ ಆಚಾರವನ್ನು ನಿಲ್ಲಿಸಲು ನೀನೆ ಸಲಹೆ ಕೊಡು. ಅದರಂತೆ ನಡೆದುಕೊಳ್ಳುತ್ತೇನೆ."

ದೇವರು, "ಹಾಗಾದರೆ ಕೇಳು. ನನ್ನ ಭಕ್ತರು ಚಿನ್ನದ ನಾಣ್ಯದ ರೂಪದಲ್ಲಿ ನೀಡುತ್ತಿರುವ ಭಕ್ತಿ, ಗೌರವಗಳನ್ನು ನೀನು ನಿಷೇಧಿಸಬೇಕು. ಆಗ ಆ ಪುರೋಹಿತರಿಗೆ ಬುದ್ಧಿ ಬರುತ್ತದೆ. ಭಕ್ತರು ನೇರವಾಗಿ ನನ್ನನ್ನು ಆರಾಧಿಸುವ ಹಾಗೆ ವ್ಯವಸ್ಥೆ ಮಾಡಬೇಕು" ಎಂದು ಸಲಹೆಯಿತ್ತು ಮಾಯವಾದ. ಚಿನ್ನದ ನಾಣ್ಯಗಳನ್ನು ನಿಷೇಧಿಸುವುದೆ? ಐಲು ದೊರೆಗೆ ತಲೆ ತಿರುಗಿದಂತಾಯಿತು. ದೇವರು ಹೇಳಿದ ಹಾಗೆ ಮಾಡಿದರೆ ಆ ಪುರೋಹಿತರು ಬಂಡಾಯ ಏಳೋದು ಖಂಡಿತ. ಮಾಡದಿದ್ದರೆ ಈ ದೇವರು ನನ್ನ ಸಾಮ್ರಾಜ್ಯವನ್ನು ಹಾಳು ಮಾಡುವುದು ಖಚಿತ ಎಂದು ದೊರೆ ಪರಿತಪಿಸಿದ. ಬಹಳ ಯೋಚಿಸಿದ ನಂತರ ಐಲು ದೊರೆ ಪುರೋಹಿತರನ್ನು ಹೇಗಾದರು ಸಂಭಾಳಿಸಬಹುದು. ಆದರೆ ಸಾಮ್ರಾಜ್ಯ ಹಾಳಾದರೆ ನಾನೆಲ್ಲಿಯ ದೊರೆ ಎಂದು ಅನಿಸಿ ದೇವರು ಹೇಳಿದ ಹಾಗೆ ಜನರಿಗೆ ಒಂದು ಆದೇಶ ಹೊರಡಿಸಿದ. ಅದು ಹೀಗಿತ್ತು:

'ನಾಡಿನ ಪ್ರಜೆಗಳೆ, ಭಕ್ತ ಜನರೆ! ನಿನ್ನೆ ರಾತ್ರಿ ನನ್ನ ಕನಸಿನಲ್ಲಿ ನಮ್ಮ ದೇವರು ಬಂದು ಚಿನ್ನದ ನಾಣ್ಯದ ರೂಪದಲ್ಲಿ ನೀವೆಲ್ಲರೂ ತೋರಿಸುವ ಭಕ್ತಿಯನ್ನು ನಿಲ್ಲಿಸಬೇಕು ಎಂದು ಹೇಳಿದ್ದಾನೆ. ಗುಡಿಗೆ ಹೋಗಿ ಕಾಣಿಕೆಗಳನ್ನು ಕೊಡುವುದನ್ನು ಈಗಿನಿಂದಲೇ ನಿಷೇಧಿಸಲಾಗಿದೆ. ಇನ್ನು ಮುಂದೆ ನೀವು ಚಿನ್ನದ ನಾಣ್ಯವನ್ನು ಹೊಂದುವುದಾಗಲಿ ಅಥವಾ ಬಳಸುವುದಾಗಲಿ ನಿಷಿದ್ಧ. ಯಾರಾದರು ಚಿನ್ನದ ನಾಣ್ಯದ ಕಾಣಿಕೆಯನ್ನು ಗುಡಿಯ ಪುರೋಹಿತರಿಗೆ ನೀಡಿದ್ದಾದಲ್ಲಿ ಅವರನ್ನು ಬಂಧಿಸಿ, ಕತ್ತಲಕೋಣೆಯಲ್ಲಿ ಕೊಳೆಯುವ ಹಾಗೆ ಮಾಡಲಾಗುವುದು. ನಿಮ್ಮ ಎಲ್ಲಾ ಚಿನ್ನದ ನಾಣ್ಯಗಳನ್ನು ಮೂರು ದಿನಗಳ ಒಳಗೆ ಅರಮನೆಯ ಖಜಾನೆಗೆ ಕೊಡತಕ್ಕದ್ದು. ಚಿನ್ನದ ನಾಣ್ಯದ ಬದಲಿಗೆ ನೀವು ನಿಮ್ಮ ಭಕ್ತಿ, ಗೌರವಗಳನ್ನು ತೋರಿಸಲು ಊದುಬತ್ತಿಯನ್ನು ಬಳಸಬೇಕು. ಊದು ಬತ್ತಿಯ ಹೊಗೆಯ ಜೊತೆಗೆ ನಿಮ್ಮ ಭಕ್ತಿ ನೇರವಾಗಿ ಆ ದೇವರನ್ನು ತಲುಪುತ್ತದೆ. ಇದರಿಂದ ಆ ದೇವರು ಸಂತೃಪ್ತನಾಗುತ್ತಾನೆ. ನಮ್ಮ ಸಾಮ್ರಾಜ್ಯಕ್ಕೆ ಒಳ್ಳೆಯದಾಗುತ್ತದೆ. ಪುರೋಹಿತರ ಮೂಲಕ ನೀವು ನಿಮ್ಮ ಭಕ್ತಿಯನ್ನು ತೋರಿಸುವ ಅವಶ್ಯಕತೆಯಿಲ್ಲ, ನಿಮಗೆ ಬೇಕಾಗುವ ಊದುಬತ್ತಿಯನ್ನು ಅರಮನೆಯಿಂದ ಅತಿ ಶೀಘ್ರದಲ್ಲಿ ಸರಬರಾಜು ಮಾಡಲಾಗುವುದು. ಇದು ದೇವರ ಆಜ್ಞೆ, ನೆನಪಿರಲಿ."

ಐಲು ದೊರೆಯ ಆದೇಶವನ್ನು ಕೇಳಿ ಪುರೋಹಿತರು ಮತ್ತು ಪ್ರಜೆಗಳು ದಂಗಾಗಿ ಹೋದರು. ಪ್ರತಿ ಸಲವು ನಮ್ಮ ಮಾತನ್ನು ಕೇಳಿ ಮುಂದಡಿಯಿಡುತ್ತಿದ್ದ ಈ ಐಲು ದೊರೆ ಈ ಸಲ ನಮಗೆ ಗೊತ್ತಿಲ್ಲದ ಹಾಗೆ ದೇವರ ಮಾತು ಕೇಳಿ ಆದೇಶವನ್ನು ಹೊರಡಿಸಿದನಲ್ಲ ಎಂದು ಪುರೋಹಿತರು ಕೈ ಕೈ ಹಿಸುಕಿಕೊಂಡರು. ನಮಗೆ ತಿಳಿಸದೆ, ಗೊತ್ತಿಲ್ಲದ ಹಾಗೆ ಯಾವ ದೇವರು ಈ ಐಲು ದೊರೆಯ ಕನಸಿನಲ್ಲಿ ಬಂದಿದ್ದು ಎಂದು ತಿಳಿಯದಾದರು. ಈ ಐಲು ದೊರೆಯ ಹುಚ್ಚು ಆದೇಶದಿಂದ ಮತ್ತು ಆ ದೇವರಿಂದ ತಮ್ಮ ಜೇಬಿಗೆ ಕತ್ತರಿ ಬಿತ್ತು ಎಂದು ಶಾಪ ಹಾಕತೊಡಗಿದರು. ಇರಲಿ ಸಮಯ ಬಂದಾಗ ಆ ದೊರೆಗೂ ಮತ್ತು ದೇವರಿಗೂ ಪಾಠ ಕಲಿಸಬೇಕೆಂದು ಮನಸ್ಸಿನಲ್ಲಿ ಅಂದುಕೊಂಡರು.

ಇತ್ತ ಪ್ರಜೆಗಳಿಗೆ ಊದುಬತ್ತಿಯಿಂದ ತಮ್ಮ ಭಕ್ತಿ ಗೌರವಗಳನ್ನು ಹೇಗೆ ಅರ್ಪಿಸುವುದು ಎಂದು ಗೊತ್ತಾಗದೆ ಪರದಾಡಿದರು. ಊದುಬತ್ತಿಯೆಂದರೆ ಏನು? ಹೇಗಿರುತ್ತದೆ? ಎಂದು ತಮ್ಮತಮ್ಮಲ್ಲೆ ಮಾತನಾಡತೊಡಗಿದರು. ಜೊತೆಗೆ ತಾವು ಕಷ್ಟಪಟ್ಟು, ಪ್ರಾಮಾಣಿಕತೆಯಿಂದ ದುಡಿದು ದೇವರಿಗೆ ಕಾಣಿಕೆ ನೀಡಲು ಕೂಡಿಸಿಟ್ಟಿದ್ದ ಚಿನ್ನದ ನಾಣ್ಯಗಳು ಎಲ್ಲವೂ ಹಾಳಾಗಿಹೋಯಿತಲ್ಲ ಎಂದು ವ್ಯಥೆಪಟ್ಟರು. ಆದರೆ ರಾಜಾ ಪ್ರತ್ಯಕ್ಷ ದೇವತಾ ಎಂದು ನಂಬಿದ್ದ ಪ್ರಜೆಗಳು ದೊರೆಯ ಆದೇಶವನ್ನು ಪಾಲಿಸದೆ ಇದ್ದರೆ ಕತ್ತಲೆ ಕೋಣೆಯಲ್ಲಿ ಕೊಳೆಯ ಬೇಕಾಗುತ್ತದೆಯೆಂದು ವಿರೋಧ ಮಾಡದೆ ಸುಮ್ಮನಾದರು. ತಮ್ಮಲ್ಲಿದ್ದ ಎಲ್ಲಾ ಚಿನ್ನದ ನಾಣ್ಯಗಳನ್ನು ಅರಮನೆಗೆ ಸಾಗಿಸಿದರು.

* * * *

ಹೀಗೆ ಕೆಲವು ದಿನಗಳು ಕಳೆದವು. ಅರಮನೆಯಿಂದ ಬರಬೇಕಾದ ಊದು ಬತ್ತಿಗಳು ಬೇಕಾಗುವಷ್ಟು ಸಂಖ್ಯೆಯಲ್ಲಿ ಸರಬರಾಜು ಆಗಲೇ ಇಲ್ಲ. ಪ್ರಜೆಗಳು ಕಾದುಕಾದು ಸಾಕಾಗಿಹೋದರು. ದೇವರಿಗೆ ಸಲ್ಲಬೇಕಾದ ಭಕ್ತಿ, ಗೌರವಗಳು ಸಲ್ಲಲೇ ಇಲ್ಲ, ಊದು ಬತ್ತಿಯಿಲ್ಲದೆ ಪ್ರಜೆಗಳು ಗುಡಿಯ ಬಳಿ ಸುಳಿಯಲಿಲ್ಲ. ಪುರೋಹಿತರಿಗೆ ಗುಡಿಯಲ್ಲಿ ಕೆಲಸವಿಲ್ಲದ ಹಾಗೆ ಆಯಿತು. ಪ್ರಜೆಗಳಿಗೆ ದೇವರನ್ನು ಪೂಜಿಸದೆ ಹೇಗೆ ಇರೋದಪ್ಪ ಎಂದು ಚಿಂತೆಯಾದರೆ, ಪುರೋಹಿತರಿಗೆ ತಮ್ಮ ಜೇಬುಗಳು ಬರಿದಾಗಿರುವ ಚಿಂತೆ ಕಾಡತೊಡಗಿತು. ಏನಾದರು ಮಾಡಲೇ ಬೇಕು, ಇಲ್ಲದಿದ್ದರೆ ನಮಗೆ ಉಳಿಗಾಲವಿಲ್ಲವೆಂದು ಪುರೋಹಿತರು ನಿಶ್ಚಯಿಸಿದರು. ಐಲು ದೊರೆಗೆ ಗೊತ್ತಾಗದ ಹಾಗೆ ಗುಪ್ತ ಸಭೆಗಳನ್ನು ನಡೆಸಿ, ಪ್ರಜೆಗಳಲ್ಲಿ ಒಂದು ವದಂತಿಯನ್ನು ಹಬ್ಬಿಸಿದರು. "ಐಲು ದೊರೆಯ ಕನಸಿನಲ್ಲಿ ದೇವರು ಪುರೋಹಿತರಿಗೆ ತಿಳಿಸದೆ ಕಾಣಿಸಿಕೊಂಡ; ಆ ದೇವರು ಐಲು ದೊರೆಯ ಮನಸ್ಸನ್ನು ಕೆಡಿಸಿ ನಮಗೆ ಈ ದುಸ್ಥಿತಿಯನ್ನು ತಂದಿಟ್ಟಿದ್ದಾನೆ; ಹೀಗೆ ಮುಂದುವರೆದರೆ ನಮ್ಮ ಸಾಮ್ರಾಜ್ಯಕ್ಕೆ ಕೇಡುಗಾಲ ಖಂಡಿತ; ನಾವ್ಯಾರು ಜೀವಂತ ಉಳಿಯೊಲ್ಲ" ಎಂದು ಪುರೋಹಿತರು ಎಲ್ಲಾ ಕಡೆ ಸುಳ್ಳು ಸುದ್ದಿಯನ್ನು ಹಬ್ಬಿಸಿಬಿಟ್ಟರು. ಆ ದೇ... ದೂತರೆ ಈ ರೀತಿ ಹೇಳಿದ್ದಾರೆಂದರೆ ನಿಜವೇ ಇರಬೇ... ಎಂದು ಪ್ರಜೆಗಳು ಪುರೋಹಿತರ ವದಂತಿಯನ್ನು ನಂಬಿದ... ಮುಂದೆ ಏನು ಮಾಡಬೇಕೆಂದು ತೋಚದೆ ಎಲ್ಲ... ಪುರೋಹಿತರ ಬಳಿ ಹೋದರು. ಅಲ್ಲಿದ್ದ ಒಬ್ಬ ಜ್ಯೋ... ಜನರನ್ನು ಉದ್ದೇಶಿಸಿ ಹೇಳಿದ,

"ಮಿತ್ರರೆ, ನನಗೆ ನಮ್ಮ ಭವಿಷ್ಯ ಕಾಣುತ್ತಿದೆ. ದುಸ್ಥಿತಿ ಹೀಗೇ ಮುಂದುವರೆದರೆ ಆ ಐಲು ದೊರೆ... ಹುಚ್ಚುತನದಿಂದ ನಮಗೆ ಶಾಂತಿ, ನೆಮ್ಮದಿ ಇಲ್ಲದ ಹ... ಆಗುತ್ತದೆ. ಅತ್ತ ನಮ್ಮ ಚಿನ್ನದ ನಾಣ್ಯಗಳು ಹೋದ... ಇತ್ತ ಊದು ಬತ್ತಿಗಳು ಸಿಗಲಿಲ್ಲ. ನಾವು ದೇವರ... ನೋಡದ ದುಸ್ಥಿತಿಗೆ ಬಂದಿದ್ದೀವಿ. ಹೀಗೆ ಮುಂದುವರೆ... ನಮ್ಮ ಭವಿಷ್ಯದ ಗತಿ ಅಧೋಗತಿ! ನಮಗೆ ಗೊತ್ತಿ... ಹಾಗೆ ದೇವರು ಐಲು ದೊರೆಯ ಕನಸಿನಲ್ಲಿ ಬಂದಿದ್ದ... ಇದು ಅಕ್ಷಮ್ಯ ಅಪರಾಧ. ಈಗ ನಾವೆಲ್ಲರೂ ಸ... ಎರಡು ಕೆಲಸಗಳನ್ನು ಮಾಡಬೇಕು. ಮೊದಲಿಗೆ ಆ ಐ... ದೊರೆಯನ್ನು ಇಲ್ಲಿಂದ ಒದ್ದು ಓಡಿಸೋಣ. ಎರಡನೇಯ... ನಮಗೆ ತಿಳಿಸದೆ ಐಲು ದೊರೆಯ ಕನಸಿನಲ್ಲಿ ಬ... ದೇವರನ್ನೇ ಬದಲಾಯಿಸೋಣ. ಹೊಸ ದೇವರನ್ನು ನಾ... ಸೃಷ್ಟಿಸೋಣ. ಹೊಸ, ಹೊಸ ಗುಡಿಗಳನ್ನು ಕಟ್ಟೋ... ಒಳ್ಳೆ ದಿನಗಳು ಬರಲಿವೆ! ನೀವು ಹೊಸ ದೇವ... ಪೂಜೆ ಮಾಡಿ. ಅವನಿಗೆ ಪ್ರಿಯವಾದ ಚಿನ್ನದ ನಾಣ್ಯಗ... ಕಾಣಿಕೆಯಾಗಿ ನೀವು ಮತ್ತೆ ಕೊಡಬಹುದು. ಸದ್ಯಕ್ಕೆ ಐ... ದೊರೆ ಇರುವ ಅರಮನೆಗೆ ನೀವೆಲ್ಲರೂ ಲಗ್ಗೆ ಹ... ಅಲ್ಲಿರುವ ನಿಮ್ಮ ಎಲ್ಲಾ ಚಿನ್ನದ ನಾಣ್ಯಗಳನ್ನು ವಾಪ... ತೆಗೆದುಕೊಂಡು ಬನ್ನಿ". ಜ್ಯೋತಿಷಿಯ ಮಾತಿಗೆ ಎ... ಪ್ರಜೆಗಳು ಉನ್ಮಾತರಾದರು.

* * * *

ಈಗ ಹೊಸ ದೇವರು ಗುಡಿಯಲ್ಲಿ ಕುಳಿತಿದ್ದ... ಐಲು ದೊರೆ ಸಾಮ್ರಾಜ್ಯ ಬಿಟ್ಟು ಓಡಿಹೋಗಿದ್ದ... ಪ್ರಜೆಗಳು ಯಥಾಪ್ರಕಾರ ಹೊಸ ದೇವರಿಗೆ ಭ... ಗೌರವಗಳನ್ನು ಸಲ್ಲಿಸಲು ತಾವು ಕಷ್ಟಪಟ್ಟು ಸಂಪಾದಿಸಿ... ಚಿನ್ನದ ನಾಣ್ಯದ ಕಾಣಿಕೆಗಳನ್ನು ಗುಡಿಯ ಹುಂಡಿ... ಅರ್ಪಿಸುತ್ತಿದ್ದಾರೆ. ಊದು ಬತ್ತಿ ಇಲ್ಲದಿರುವುದರಿಂದ ಪ್ರಜೆ... ಭಕ್ತಿ, ಗೌರವಗಳು ದೇವರನ್ನು ತಲುಪುತ್ತಿದೆಯೋ, ಇಲ್ಲವೋ ಯಾರಿಗೂ ಗೊತ್ತಿಲ್ಲ. ಆದರೆ ಪುರೋಹಿತರ ಮ... ಜ್ಯೋತಿಷಿಗಳ ಜೇಬುಗಳು ಈಗ ಭರ್ತಿಯಾಗಿವೆ. ಕ... ಪೂರ್ತಿ ಕುಡಿದು, ತಿಂದು ತಮ್ಮ ಹೆಂಡತಿ, ಮ... ಜೊತೆಗೆ ಹಾಯಾಗಿದ್ದಾರೆ.

■ ಡಾ.ವಿಜಯಕುಮಾರ ಎಂ ಬೋರ...


ಡಯಾಫರ್ ತೊಟ್ಟ ಪ್ರಚಂಡ ನಾಯಕ!

"ದೇಶದಲ್ಲೇ ಹಿಂದುಳಿದ ತಾಲೂಕಾದ ದೇವಪುರದ ಎಂಟು ಹಳ್ಳಿಗಳ ವ್ಯಾಪ್ತಿಯಲ್ಲಿ ಒಂದು ಕೈಗಾರಿಕಾ ವಲಯ ಸ್ಥಾಪನೆ ಶುರುವಾಗಿದೆ" - ಧನ್ ಕಿ ಬಾತ್‌ನಲ್ಲಿ ಪ್ರಚಂಡ ನಾಯಕ ಭಾವಾವೇಶದಲ್ಲಿ ನುಡಿದ. ಟ್ವಿಟರ್‌ನಲ್ಲೂ ಅದನ್ನೇ ಸಾರಿದ. ಸಾವಿರಾರು ಫಾಲೋಯರ್ಸ್ 'ಭೇಷ್' ಎಂದರು.

ದೇವಪುರ ತಾಲೂಕಿನ ಆರು ಹಳ್ಳಿಗಳ ಜನರನ್ನು ಈಗಾಗಲೇ 'ಕಾನೂನುಬದ್ಧವಾಗಿಯೇ' ಸ್ಥಳಾಂತರಿಸಿ ದೂರದ ಶೆಡ್ಡುಗಳಲ್ಲಿ ಕೂಡಿ ಹಾಕಲಾಗಿದೆ. ಇನ್ನೆರಡು ಊರವರ ಪ್ರತಿರೋಧ ತಡೆಯಲು ಹರಸಾಹಸ ನಡೆದಿದೆ. ಮತ್ತೆ ಟ್ವೀಟ್ ಮಾಡಿದ ಪ್ರಚಂಡ ನಾಯಕ, "ಆರು ಹಳ್ಳಿಗಳ ಜನತೆ ಕೈಗಾರಿಕೆಗಾಗಿ, ದೇಶದ ಒಳಿತಿಗಾಗಿ ಸಣ್ಣ ತ್ಯಾಗ ಮಾಡಿದ್ದಾರೆ. ಅವರಿಗೆ ಮುಂದೆ ಎಲ್ಲಾ ಅನುಕೂಲಗಳು ಸಿಗಲಿವೆ. ಇನ್ನು ಎರಡು ಹಳ್ಳಿಗಳ ಜನ ಅದನ್ನು ಅರಿಯಬೇಕು. ಈ ಯೋಜನೆಗೆ ದೇಶದಲ್ಲಿ ಅಭೂತಪೂರ್ವ ಬೆಂಬಲ ದೊರೆಯುತ್ತಿದೆ" ಎಂದು ಸಾರಿದ.

ಮರುದಿನ ಆತನ ಕಾರ್ಯಾಲಯ ಒಂದು app ಬಿಡುಗಡೆ ಮಾಡಿ ಯೋಜನೆ ಕುರಿತು ಸಮೀಕ್ಷೆ ನಡೆಸಿ, ಶೇ.93 ರಷ್ಟು ದೇಶವಾಸಿಗಳು ಈ ಯೋಜನೆಗೆ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ಸಾರಿತು. ಮಾಧ್ಯಮಗಳು ಅದನ್ನು ಕಣ್ಣುಮುಚ್ಚಿ (ಕಿಸೆ ತೆರೆದು!) ಪ್ರಕಟಿಸಿದವು. ಈ ಸಮೀಕ್ಷೆಯಲ್ಲಿ ಮೂರು ಲಕ್ಷ ಜನ ಭಾಗವಹಿಸಿದ್ದರಂತೆ!

ಇತ್ತ ಆರು ಹಳ್ಳಿಗಳ ಜನ ಯಾವ ಸೌಕರ್ಯ ಇಲ್ಲದೇ ಶೆಡ್ಡುಗಳಲ್ಲಿ ತೊಳಲಾಡುತ್ತಿದ್ದರೆ, ಫೇಸ್‌ಬುಕ್, ಬ್ಲಾಗ್‌ಗಳಲ್ಲಿ ಆ ಜನರ ತ್ಯಾಗವನ್ನು ಹಾಡಿ ಹೊಗಳಲಾಯಿತು.



ಇನ್ನು ಎರಡು ಹಳ್ಳಿಗಳ ಪ್ರತಿರೋಧ ಮುಂದುವರಿದೇ ಇತ್ತು. ಪ್ರಚಂಡ ನಾಯಕನ ರಾಜಕೀಯ ವಿರೋಧಿ ನಾಯಕರು "ಕೈಗಾರಿಕೆ ಬೇಕು, ಆದರೆ ಜನರಿಗೆ ಪುನರ್ವಸತಿ ಕಲ್ಪಿಸಲು ಕಂಪನಿಗಳು ಮುಂದಾಗಬೇಕು" ಎಂದು ಅಡ್ಡಗೋಡೆ ಮೇಲೆ ದೀಪ ಇಟ್ಟವು.

ರಾತ್ರಿ 10ಕ್ಕೆ ಪತ್ರಿಕಾಗೋಷ್ಠಿ ಕರೆದ ನಾಯಕ "ಯೋಜನೆಯಲ್ಲಿ ಯುನಿಟ್ ಆರಂಭಿಸಲಿರುವ ಕಂಪನಿಗಳು ಜನರ ಕಷ್ಟಗಳಿಗೆ ಸ್ಪಂದಿಸಲಿವೆ. ಅಲ್ಲಿ ಘಟಕ ಸ್ಥಾಪಿಸಲಿರುವ ಡಯಾಫರ್ (ಡೈಪರ್) ಕಂಪನಿ ಸದ್ಯದಲ್ಲೇ ನಿರಾಶ್ರಿತ ಕುಟುಂಬಗಳ ಮಕ್ಕಳಿಗೆ ವರ್ಷಕ್ಕಾಗುವಷ್ಟು ಡಯಾಫರ್‌ಗಳನ್ನು ಉಚಿತವಾಗಿ ವಿತರಿಸಲಿದೆ" ಇತ್ಯಾದಿ ಘೋಷಣೆ ಮಾಡಿದ.

'ನಿರ್ಲಕ್ಷಿತ ಮಕ್ಕಳಿಗೂ ಡಯಾಫರ್ ಭಾಗ್ಯ' ಎಂದು ಬ್ರೇಕಿಂಗ್ ನ್ಯೂಸ್, ಹೆಡ್‌ಲೈನ್‌ಗಳು ಬಂದವು. ಈಗ ನಿರಾಶ್ರಿತರ ಕುರಿತ ಚರ್ಚೆ ಡಯಾಫರ್ ಕ್ರಾಂತಿಯತ್ತ ತಿರುಗಿತು. 'ಯಾಕೆ ನಮ್ಮ ಹಳ್ಳಿಯ ಮಕ್ಕಳಿಗೆ ಈ ಸೌಲಭ್ಯ ಸಿಗಬಾರದು?' ಎಂದು ನವಮಾಧ್ಯಮಗಳಲ್ಲಿ ಚರ್ಚೆ ಜೋರಾಗಿತು.

ಶೇ. 65ರಷ್ಟು ಅಪೌಷ್ಟಿಕ ಮಕ್ಕಳಿಗೆ "ಸದ್ಯದಲ್ಲೇ ಡಯಾಫರ್ ಭಾಗ್ಯ ಸಿಗಲಿದೆ" ಎಂದೆಲ್ಲ ಪ್ರಚಂಡ ನಾಯಕ ತನ್ನ ಬೆನ್ನು ತಟ್ಟಿಕೊಳ್ಳತೊಡಗಿದ. ಡಯಾಫರ್ ಎಂದರೆ ಗೊತ್ತಿರದ ಮಕ್ಕಳು ತಮ್ಮಷ್ಟಕ್ಕೆ ತಾವು ಶೆಡ್ಡುಗಳ ಎದುರಿನ ಬಯಲಲ್ಲಿ ಆಟ ಆಡುತ್ತಿವೆ. ಈಗ ಅವಕ್ಕೆ ಅಂಗನವಾಡಿಯ ಬಾಳೆಹಣ್ಣು ಮೊಟ್ಟೆ ಕೂಡ ಸಿಗದಂತಾಗಿದೆ. ಪ್ರತಿರೋಧ ಒಡ್ಡುತ್ತಿ... ಇರುವ ಎರಡು ಹಳ್ಳಿಗಳ ಜನರನ್ನು ಅಭಿವೃದ್ಧಿಯ ವಿರೋಧಿ... ಗಳು, ದೇಶದ್ರೋಹಿಗಳು ಎಂದು ಬಿಂಬಿಸಲಾಗುತ್ತಿದೆ...

* * * *

ಡಯಾಫರ್ ಕುರಿತ ಈ 'ಕತೆ', ಮೋದಿ ... ಬಿಡದೇ ಕ್ರೂರ ಭೂಸ್ವಾಧೀನ ಕಾಯ್ದೆ ಜಾರಿಗೆ ತ... ಹೊರಟಾಗ ಹೊಳೆದಿತ್ತು. ಆಗ ಇದನ್ನು ಫೋನಿನ... ಕವಿತಾ ಲಂಕೇಶ್‌ರಿಗೆ ಹೇಳಿದ್ದೆ. ಈಗ ದೊಡ್ಡ ನೋ... ಅಮಾನ್ಯೀಕರಣ, ಅದರ ವಿಫಲತೆ ಮುಚ್ಚಲು ನಗದುರಹಿ... ವಹಿವಾಟು ಎಂದೆಲ್ಲ ದಾರಿ ತಪ್ಪಿಸುತ್ತಿರುವ ಈ ಸಂದರ್ಭ... ಈ ಕತೆ ಒಂದು ರೂಪಕದಂತಿದೆ ಎಂದೇ ನನ್ನ ಭಾವ... ಇತ್ತೀಚೆಗೆ ಎಂ.ಎಸ್. ಶ್ರೀರಾಮ್ ಬರೆದ 'ಆ ಊರ... ಈಗ ಕಳ್ಳರೇ ಇಲ್ಲ' ಎಂಬ ಅತಿ ಚಿಕ್ಕ ಕತೆ (ಪ್ರಜಾವಾಣಿ... ಮುಕ್ತಚಂದ, ಜನವರಿ 1 ರ ಸಂಚಿಕೆ) ಕೂಡ 'ಪ್ರಚಂ... ನಾಯಕ'ನ ಶೈಲಿಯ ಕುರಿತಾಗಿಯೇ ಇತ್ತು.

ತನ್ನ ಗಲೀಜು ಮುಚ್ಚಿಕೊಳ್ಳಲು ಈಗ ಪ್ರಚಂ... ನಾಯಕನೇ ಡಯಾಫರ್ ಧರಿಸಿ ಭಾಷಣಗಳನ್ನು ಮಾಡುತ್ತಿದ್ದಾನೆ!

■ ಪಿ.ಕೆ. ಮಲ್ಲನಗೌಡರ

-ಶರತ್ ಅಮೆರಿಕಕ್ಕೆ ಹೊರಟಿದ್ದಾನೆ. ಹೋಗುವ ...ನ್ನ ಒಳ್ಳೆ ಪಾರ್ಟಿ ಕೊಟ್ಟು ಹೋಗುತ್ತಾನಂತೆ. ಅವನ ... ಬ್ಲ್ಯೂ ಲೇಬಲ್ ಮತ್ತು ವೈಟ್ ಲೇಬಲ್ ...ಟಲಿಗಳಿವೆ. ಅವನ್ನ ತರುತ್ತಾನಂತೆ. ಆದರೆ ಅವುಗಳನ್ನ ...ಲಿ ಮಾಡಲು ಬಹಳ ಒಳ್ಳೆ ಪ್ರಶಾಂತವಾದ ಜಾಗ ...ಕಂತೆ" ಎಂದು ಶರತ್ ಗೆಳೆಯ ರಾಧೇಯ ಫೋನ್ ...ಡಿದ. "ಅಂತಹ ಅಪರೂಪದ ಮದ್ಯ ಸೇವಿಸಲು ...ಗಳೂರಿನಲ್ಲೇ ಪ್ರಶಸ್ತವಾದ ಜಾಗವಿಲ್ಲವೆ?" ಎಂದು ...ದಾಗ, "ಇಲ್ಲ, ಬೆಂಗಳೂರಿನಲ್ಲಿ ಅಂತಹ ಜಾಗವೇ ..." ಎಂಬ ಉತ್ತರ ಬಂತು. ಆಗ ನಾನು ನಮ್ಮ ಬಾರೆ ...ಲದ ಪ್ರಸ್ತಾಪ ಮಾಡಿದೆ.

ಅದು ನಿಡು ಬಾರೆಯಲ್ಲಿದ್ದರೂ ನಮ್ಮಪ್ಪ ನೆಟ್ಟುಹೋದ ... ತೆಂಗಿನ ಮರಗಳಿವೆ. ತಾವೇ ಹುಟ್ಟಿಕೊಂಡು ಬೆಳೆದ ...ಂಗೆ ಮರಗಳಿವೆ. ತೋಟದ ಪೂರ್ವಕ್ಕೆ ಒಂದು ಅರೆ ...ಡೆಯಿದೆ. ಬಂಡೆಗೆ ನೂರಡಿ ದೂರದಲ್ಲಿ ರಸ್ತೆ ಹಾದು ...ೀಗಿದೆ. ಈ ರಸ್ತೆಗೆ ಕೇವಲ ಐದು ಕಿ.ಮೀ ದೂರದಲ್ಲಿ ...ಗಳೂರು-ಮಂಗಳೂರು ಹೈವೇ ಹಾದುಹೋಗಿದೆ. ...ರಿಂದ ಈ ಅರೆಬಂಡೆಯೇ ಪಾರ್ಟಿಗೆ ಸೂಕ್ತ ಜಾಗವೆಂದು ...ಳಿದೆ. ಅವರೆಲ್ಲಾ ಒಮ್ಮೆ ಅಲ್ಲಿ ಹಗಲು ಹೊತ್ತು ...ನೀರು ಕುಡಿದುಹೋಗಿದ್ದರಿಂದ ಕೂಡಲೇ ...ಕೊಂಡರು.

ಬೆಂಗಳೂರಿನ ಅವರೆಲ್ಲಾ ಪಂಚ ಪಾಂಡವರು ...ಜ್ಞಾತವಾಸಕ್ಕೆ ಹೊರಟವರಂತೆ ಒಂದು ದಿನದ ಕತ್ತಲೆ ...ಳಿಗೆ ರೆಡಿಯಾಗಿ ಬಂದರು. ಬರುವ ಮುನ್ನ ಅವರಲ್ಲಿ ...ವರು ವರಾಹ ಮಾಂಸ ಭಕ್ಷಗಳಾದ್ದರಿಂದ ಬೆಳ್ಳೂರು ...ನಲ್ಲಿ ಸಿಗುವ ಖಾದ್ಯವನ್ನು ಕಟ್ಟಿಸಿಕೊಂಡು ಬರಲು ...ಪ್ಲಾಪಿಸಿದರು. ಈ ಪೋರ್ಕಿನ ಹೋಟೆಲುಗಳು ...ದಿಗೂಡುಗಳಂತೆಯೇ ಇರಬೇಕೆಂಬ ನಿಯಮವೇನಿಲ್ಲ, ...ರೂ ಈ ಹೊಟೇಲ್ ಮಾಲೀಕರು ಹೇಗಿಟ್ಟದ್ದಾರೆಂದರೆ ...ದಿಗೆ ಪ್ರಿಯವಾಗುವ ಜಾಗದಂತೆಯೇ ಈ ಹೊಟೇಲನ್ನು ...ಡಗಿದ್ದಾರೆ. ಈಚೆಗೆ ಬಾಣಾವಾರದಲ್ಲಿ ಇಂತಹ ...ೀಟೆಲೊಂದಕ್ಕೆ ಹೋದಾಗ, ತಡಿಕೆ ಗೋಡೆ, ಮುರುಕಲು ...ರ್ಚ್, ವಾಸನೆ ಬೀರುವ ಟೇಬಲು, ಕಲ್ಲಿನ ಬೆಂಚು ...ನ್ನೆಲ್ಲಾ ನೋಡಿ ಪೋರ್ಕ್ ತಿನ್ನಲು ಮನಸ್ಸಾಗದೆ ಸುಮ್ಮನೆ ...ತೆ. ಆದರೆ ಜೊತೆಯಲ್ಲಿ ಬಂದ ಗೆಳೆಯ ಹಂದಿ ...ಸಾ ತಿಂದಷ್ಟೇ ಶಬ್ದ ಮಾಡುತ್ತ ಬೇಯದೇ ಇರುವ ...ಂಸವನ್ನು ಜಗಿಯುತ್ತಿದ್ದ. ಇಪ್ಪತ್ತು ಲಕ್ಷ ರೂಪಾಯಿಗಳ ...ನ ಕಾರು ಹೊಟೇಲ್ ಬಾಗಿಲಿಗೆ ಚಾಚಿಕೊಂಡಂತೆ ...ತ್ತು, "ಇಂತಹ ಜನಗಳೂ ಬಂದು ಹಂದಿ ತಿನ್ನುತ್ತಾರಾ" ...ಬ ಕುತೂಹಲದಿಂದ ಅಕ್ಕಪಕ್ಕದ ಗೂಡಂಗಡಿ ಜನ ...ದು ಬಗ್ಗಿ ನೋಡುತ್ತಿದ್ದರು.

ಆಗ ನಾನು ಹೋಟೆಲ್ ಮಾಲೀಕರಿಗೆ... "ಅಕ್ಕಾ ಈ ...ೀಟ್ಲ ಹಿಂಗ್ಯಾಕಿಟ್ಟಿದ್ದಿರಿ? ಒಂದಿಷ್ಟು ಚನ್ನಾಗಿದ್ರೆ ಹೋಗ್ತಾ ... ನಾವೂ ಬತ್ತಿವಿ" ಎಂದೆ.

"ಅಯ್ಯೋ ಇಲ್ಲಿ ಬರೋ ಆದಾಯದಲ್ಲಿ ಇನ್ನಂಗಿಡನಪ್ಪ ...ೀ ಆದಾಯ ಮಕ್ಕಳಿಗೆ ಫೀಜು ಕಟ್ಟಕ್ಕೆ ಸಾಲದಿಲ್ಲ" ...ಳು.


"ಮಕ್ಕಳೇನೋತ್ತಾ ಅವುರೆ?" ಎಂದೆ.

"ಮಗ ಇಂಜಿನಿಯರ್ ಓತ್ತಾ ಅವುನೆ, ಮಗಳು ...ನ್ಸಿ" ಎಂದಳು.

ಬಾಣಾವಾರದ ವರಾಹ ಸಂತತಿ ಜನ್ಮ ಸಾರ್ಥಕವಾಯ್ತು ...ಸಿತು. ಅದೇ ತರದ ಹೆಣ್ಣು ಮಗಳೊಬ್ಬಳು ಬೆಳ್ಳೂರ ...ನಲ್ಲಿದ್ದಳು. ಬಂದ ಗಿರಾಕಿಗಳಿಗೆ ವರಾಹ ಮಾತೆಯಂತೆ ...ಸುವ ಆ ತಾಯಿ ಮಾಂಸ ಬಡಿಸುವುದರಲ್ಲಿ ಚೌಕಾಸಿ ...ಡುವುದಿಲ್ಲ, ಬೆಂಗಳೂರಲ್ಲಿ 250 ರೂ. ಬೆಲೆಬಾಳುವ ...ರ್ ಮಟನ್ ಇಲ್ಲಿ ಕೇವಲ 50 ರೂ. ನೀವು ಕೇಳಿದ ...ನ್ನೇ ಹಾಕಿ ಕೊಡುತ್ತಾಳೆ, ರಸ್ತೆಗೆ ಚಾಚಿಕೊಂಡ ...ರಾಂಗಣವಲ್ಲದೆ ಒಳಕ್ಕೆ ಒಂದು ಕೋಣೆಯಿದೆ. ಬಗ್ಗಿ ...ಡಿದರೆ ಸಿಂಗಲ್ ಟೇಬಲ್ಲುಗಳಿವೆ. ಎರಡು ಮೂರು ... ಕುಳಿತು ಒರಿಜಿನಲ್ ಚಾಯ್ಸ್ ಪ್ಯಾಕೆಟ್ಟುಗಳನ್ನು ...ಕಿ ಪಿಚಕಾರಿಯಂತೆ ಗಂಟಲಿಗೆ ಹೊಡೆದುಕೊಂಡು ... ಲೋಟಕ್ಕೆ ಬಿಟ್ಟುಕೊಂಡು, ಏರಿಸಿಯೋ ಲೋಕಲ್ ...ಕಾರಣದ ವಿಷಯವನ್ನು ಅಗಿಯುತ್ತಿರುತ್ತಾರೆ.

ಆದರೆ ಇದೊಂದು ತಮ್ಮ ಆಹಾರ ಪದ್ಧತಿ. ಇದನ್ನು ...ಸುವುದರಲ್ಲಿ ಪುಳಿಯೋಗರೆ, ಪತ್ರೊಡೆ, ಪಾಯಸ ...ಸುವವರ ಆಹಾರದಷ್ಟೆ ಶ್ರೇಷ್ಠತೆ ಸಮಾನತೆಯಿದೆ ...ದು ಯಾರೂ ಭಾವಿಸಿದಂತೆ ಕಾಣುವುದಿಲ್ಲ, ಹಂದಿ ...ನುವವರು ಕೀಳೆಂಬ ಭಾವನೆ ತಿನ್ನುವವರಲ್ಲೇ ಇದ್ದಂತಿದೆ. ...ಗಿ ಈ ಹೋಟೆಲುಗಳು ರಾಜಬೀದಿಯಲ್ಲಿಲ್ಲ, ಹಂದಿ ...ಡಿ ಹುದುಕುವಂತೆ ಈ ಹೋಟೆಲುಗಳು ಕೂಡ ...ದ ಜಾಗದಲ್ಲಿ ತಲೆ ಮರೆಸಿಕೊಂಡಂತಿವೆ.

ಆದರೆ ಬೂಕನ ಬೆಟ್ಟದ ದನದ ಜಾತ್ರೆಯಲ್ಲಿ ಮಾತ್ರ ...ರ ರಥ ಎಳೆಯುವ ಬೀದಿಯಲ್ಲೇ ಇವೆ. ಅದೂ ... ಶ್ರೀರಂಗನಾಥ ಬಿಗ್ ಮಟನ್ ಹೋಟೆಲ್, ಹಿಂದೂ ... ಹೋಟೆಲ್ ಎಂಬ ಬೋರ್ಡು ತಗುಲಿಸಿಕೊಂಡಿ... ಗೆಳೆಯ ದಿನೇಶ್ ಸಾಕಿರುವ ಹಂದಿಗಳ ಪೈಕಿ



ವಿಚಿತ್ರ ಕೂಗು!



ಒಂದು ಇನ್ನೂರು ಕೆಜಿಗಿಂತಲೂ ಭಾರಿ ಗಾತ್ರ ಪಡೆದುಕೊಂಡಿತು. ಅದನ್ನು ಕುಯ್ದು ತಿಂದವರಿಗೆಲ್ಲಾ ಅದರ ನೆಣದ ಕಾರಣಕ್ಕೆ ಬೇಧಿ ಕಿತ್ತುಕೊಂಡು ಇನ್ನು ವರಾಹನ ಸಹವಾಸವೇ ಬೇಡ ಎನ್ನುವಂತಾಗಿತ್ತು. ಈಗ ದಿನೇಶನ ಬಳಿ 250 ಹಂದಿಗಳಿವೆ. ಇವೆಲ್ಲಾ ಉತ್ತಮ ಮಟ್ಟದ ಆಹಾರ ಸೇವಿಸಿ ಮಲಗಿರುವುದನ್ನು ನೋಡಿದರೆ, ವರಾಹ ಪ್ರಿಯ ಪಾಲಿಗೆ ಜೋಡಿಸಿಟ್ಟ ಕೇಕ್ ತರಹ ಕಾಣಿಸುತ್ತದೆ.


ಅಂದಹಾಗೆ ಹಿರೀಸಾವೆ ಕಡೆಯಿಂದ ದಿನೇಶನೂ ಪೋರ್ಕ್ ಪಾರ್ಸೆಲ್‌ನೊಂದಿಗೆ ಗೆಳೆಯನನ್ನು ಕರೆದುಕೊಂಡು ಸ್ಪಾಟಿಗೆ ಬಂದ.

ಬೆಂಗಳೂರಿಂದ ಬಂದವರ ಪೈಕಿ ಉಮೇಶ ಮತ್ತು ರಾಧೇಯನಿಗೆ ರಾತ್ರಿ ಸೌರವ್ಯೂಹದಲ್ಲಿನ ಚಮತ್ಕಾರಗಳನ್ನ ನೋಡುವ ಬಯಕೆ. ಅದರಲ್ಲೂ ಚಂದ್ರನಿಲ್ಲದ ರಾತ್ರಿಯಲ್ಲಿ ಬರೀ ನಕ್ಷತ್ರ ಪುಂಜದಿಂದ ಕಂಗೊಳಿಸುವ ಗಗನ ನೋಡುವುದೆಂದರೆ ಭಾರೀ ಕುತೂಹಲ. ಅರೆಬಂಡೆಯ ಮೇಲೆ ಅಂಗಾತ ಮಲಗಿ ಆಕಾಶ ವೀಕ್ಷಿಸುವ ಸಲುವಾಗಿ ಟೆಲಿಸ್ಕೋಪ್ ಕೂಡ ತಂದಿದ್ದರು. ಆಕಾಶ ಕಾಯಗಳ ಬಗ್ಗೆ ತುಂಬಾ ಓದಿಕೊಂಡಿರುವ ಅವರ ವಿಷಯಗಳೆಲ್ಲಾ ಗ್ರಹಗಳನ್ನು ಕುರಿತ ಸಂಗತಿಗಳಾಗಿರುತ್ತವೆ. ಅರೆ ಬಂಡೆಯ ಮೇಲೆ ಎಲ್ಲರೂ ಸುತ್ತಾ ಕುಳಿತು, ಅಪೂರ್ವ ಡ್ರಿಂಕ್ಸನ್ನು ಗುಟುಕರಿಸುತ್ತ ಅನರ್ಘ್ಯ ರತ್ನಗಳ ಪೀಸಿನಂತಿದ್ದ ಪೋರ್ಕಿಗೆ ಕೈಹಾಕಿ ಬಾಯಿಗಿಡುತ್ತಿದ್ದರೆ, ಈ ಜಗತ್ತಿನಲ್ಲಿ ಇಷ್ಟು ರುಚಿಕಟ್ಟಾದ ಮಾಂಸ ಇನ್ನೊಂದಿರಲಾರದು ಅನ್ನಿಸಿತು.

ಇನ್ನೂರೈವತ್ತು ಹಂದಿ ಸಾಕಿದ್ದ ದಿನೇಶ್ ಕೂಡ ಪಾರ್ಸೆಲ್ ತಂದಿದ್ದ. ಅದಕ್ಕೆ ಒಂದಿಷ್ಟು ಮಸಾಲೆ ಜಾಸ್ತಿಯಾಗಿತ್ತು, ಕುಡುಕರಿಗೆಂದೇ ಮಾಡುವ ಐಟಂಗೆ ಮಸಾಲೆ ಜಾಸ್ತಿ ಹಾಕಿರುತ್ತಾರಂತೆ. ಅರ್ಧ ರಾತ್ರಿಯಾಯ್ತು, ಅರ್ಧ ಚಂದ್ರ ಪಶ್ಚಿಮದಲ್ಲಿ ಕೆಳಕ್ಕಿಳಿಯುತ್ತಿದ್ದಂತೆ ಆಕಾಶದಲ್ಲಿ ನಕ್ಷತ್ರಗಳದೇ ಸಾಮ್ರಾಜ್ಯವಾಯ್ತು.

ಆಗ ತೋಟದ ಒಂದು ಮೂಲೆಯಿಂದ ನಾವೆಂದೂ ಕೇಳಿರದಿದ್ದ ನರಳುವ ದನಿಯೊಂದು ತೇಲಿಬಂತು. ಎಲ್ಲರೂ ಮೆಲುಕು ನಿಲ್ಲಿಸಿ ಆಲಿಸಿದರು. ಸೌದೆ ಬೆಳಕಿನಲ್ಲಿ ಎಲ್ಲರ ಮುಖಗಳನ್ನು ಆಲಿಸಿದೆ. ಗರ ಹೊಡೆದಂತೆ ಬಿಳಿಚಿಕೊಂಡ ಮುಖಗಳು ಸಂಪೂರ್ಣ ಅಧೈರ್ಯಗೊಂಡಂತೆ ಕಂಡವು. ಭೂಮಿ ಬಿಟ್ಟು ಆಕಾಶವನ್ನೆ ಅಧ್ಯಯನ ಮಾಡುತ್ತಿದ್ದವರೂ ಕೂಡ ಕೆಳಕ್ಕಿಳಿದು ಆಲಿಸತೊಡಗಿದರು. ಬಿಟ್ಟು ಬಿಟ್ಟು ಬರುತ್ತಿದ್ದ ಆ ನರಳು ದನಿಯ ಕಡೆಗೆ ಬ್ಯಾಟರಿ ಬೆಳಕು ಬಿಟ್ಟು ನೋಡಿದರು. ಅಲ್ಲೇನೂ ಕಾಣಲಿಲ್ಲ, ದನಿ ಮಾತ್ರ ಬರುತ್ತಿತ್ತು, "ಯಾರೂ ಹೆದರಬೇಡಿ, ಅದು ದೆವ್ವ ಅಲ್ಲ" ಎಂಡೆ.

ಆದಾಗಲೇ ನಾನು ಮೈದುಂಬಿದ್ದರಿಂದ "ನೋಡಿ, ಪಶು, ಪಕ್ಷಿ, ಪ್ರಾಣಿಗಳ ಧ್ವನಿ ಬರಬೇಕಾದರೆ ಧ್ವನಿ ಪೆಟ್ಟಿಗೆ ಬೇಕು. ಧ್ವನಿ ಪೆಟ್ಟಿಗೆ ಇರುವುದಾದರೆ ಅದರ ಪೋಷಣೆಯ ದೇಹವಿರಬೇಕು. ದೇಹವಿದ್ದರೂ ಅದು ನಮಗೆ ಕಾಣಬೇಕು. ಶೂನ್ಯದಿಂದ ಯಾವ ಶಬ್ದವೂ ಬರಲಾರದು. ಆದ್ದರಿಂದ ದೆವ್ವದ ಅಸ್ತಿತ್ವವೇ ಸುಳ್ಳು. ದೆವ್ವಗಳನ್ನು ಶೋಧಿಸಿದವರಿಗೆಲ್ಲಾ ಗೊತ್ತಾದ ವಿಷಯ ಯಾವುದೂ ಅಂದರೆ ದೆವ್ವದ ಕಲ್ಪನೆ ನಮ್ಮ ತಲೆಯೊಳಗಿದ್ದರೆ ಅದೇ ಆಟ ಆಡಿಸುತ್ತೆ, ಮೊದಲು ನಮ್ಮ ತಲೆಯಿಂದ ದೆವ್ವನ್ನ ತೆಗೀಬೇಕು" ಎಂದು ನಾನು ಎತ್ತರದ ದನಿಯಲ್ಲಿ ಮಾತನಾಡುತ್ತಿರಬೇಕಾದರೆ ಆ ದನಿ ನಿಲ್ಲದೆ ಲಯಬದ್ಧವಾಗಿ ಕೇಳುತ್ತಲೇ ಇತ್ತು, ಅದು ಗೂಬೆ ದನಿ ಎಂದರೆ ಗೂಬೆ ಕೂಗನ್ನ ಎಲ್ಲರೂ ಕೇಳಿದ್ದರು.



ಅಷ್ಟರಲ್ಲಿ ಹಂದಿಗಳ ಮಾಲೀಕ ಮತ್ತವನ ಗೆಳೆಯ "ನಾವು ಹೊರಡುತ್ತೇವೆ" ಎಂದು ತಮ್ಮ ಇಂಡಿಕಾ ಕಾರ್ ಸ್ಟಾರ್ಟ್ ಮಾಡಿಕೊಂಡು ಹೊರಟೇಬಿಟ್ಟರು. ಆ ವ್ಯಕ್ತಿ ಮಂಜಯ್ಯ ನಿಶರಾತ್ರಿಯಲ್ಲಿ ಬಹಳ ಕೂಗನ್ನು ಕೇಳಿದ್ದವನು. ಆದರೆ ಈ ದನಿಯನ್ನು ಮಾತ್ರ ಅವನು ಕೇಳಿರಲಿಲ್ಲವಂತೆ. ಆದ್ದರಿಂದ ಕೂಡಲೇ ಜಾಗ ಖಾಲಿ ಮಾಡಿದರು.

ಇನ್ನ ನಾನೇನಾದರೂ ಹೊರಟರೆ ಎಲ್ಲರೂ ವೇಗವಾಗಿ ತಮ್ಮ ಕಾರಿನ ಬಳಿ ಓಡುವವರಿದ್ದರು. ಆದ್ದರಿಂದ ನಾನು ಕೂಗು ಬರುತ್ತಿದ್ದ ಕಡೆಗೇ ಒಂದೆರಡು ಹೆಜ್ಜೆ ಹೋಗಿ ಬಂದು, ಬೆಂಕಿಯ ಬಳಿ ಮಟ್ಟಸವಾಗಿ ಕುಳಿತು "ನೋಡಪ್ಪ ಶರತ್, ನೀನು ನಮ್ಮ ಸಂಸ್ಕೃತಿಯಲ್ಲಿ ಬೆಳೆದ ಹುಡುಗ. ಆದ್ದರಿಂದ ಅಮೆರಿಕದಲ್ಲಿ ನೀನು ಯಾರನ್ನಾದರೂ ಪ್ರೀತಿಸಿ ಮದುವೆಯಾಗುವುದು ಕಷ್ಟ. ಅಲ್ಲಿನ ಕೌಟುಂಬಿಕ ಜೀವನ ಪತನವಾಗಿದೆ. ನನ್ನ ಗಂಡನ ಮಕ್ಕಳು ನನ್ನ ಮಕ್ಕಳು ಅನ್ನೋ ಸಂಸ್ಕೃತಿಯಲ್ಲಿ ಮಕ್ಕಳು ನಲುಗಿಹೋಗಿವೆಯಂತೆ" ಎಂದು ಎಣ್ಣೇ ಏಟಿನ ಉಪನ್ಯಾಸ ಕೊಡತೊಡಗಿದೆ.

"ನೀವು ಅಮೆರಿಕಕ್ಕೆ ಹೋಗಿದ್ರಾ ಅಂಕಲ್?" ಎಂದ. "ಇಲ್ಲ" ಎಂದೆ. "ಮತ್ತೆ ಅಮೆರಿಕ ನೋಡಿ ಬಂದೊರಂಗೆ ಮಾತಾಡ್ತಿರಿ?" ಎಂದ. "ನೋಡಪ್ಪ ನಮ್ಮ ದೇಶದಿಂದ ಅಮೆರಿಕಕ್ಕೆ ಹೋಗಿ ಬಂದೋರೆಲ್ಲ ಒಂದೊಂದು ಪುಸ್ತಕ ಬರದವ್ರುರೆ. ನಾನು ಕಳೆದ 30 ವರ್ಷದಿಂದ ಶಿವಮೊಗ್ಗದಲ್ಲಿದ್ದಿನಿ. ಅಲ್ಲಿನ ಬಿ.ಬಿ. ಸ್ಟ್ರೀಟ್, ಲಕ್ಷ್ಕರ್ ಮೊಹಲ್ಲ, ಅಣ್ಣಾನಗರ, ಚಾನಲ್ ಏರಿಯಾದ ಮರ್ಮ ತಿಳಿಯಕ್ಕೆ ಇವತ್ತಿಗೂ ಆಗಿಲ್ಲ, ಅಂತದ್ರಲ್ಲಿ ಅಮೆರಿಕಕ್ಕೆ ಹಿಂಗೋಗಿ ಅಂಗೆ ಬಂದೊರ‍್ಯಲ್ಲ ಪುಸ್ತಕ ಬರಿತರೆ ಅಂದ್ರೆ ಅದಿನ್ನಂಥ ದೇಶ ಅನ್ನಿಸ್ಯದೆ" ಎಂದು ದೇಶವಿದೇಶಗಳ ವಿಷಯ ಹೇಳುತ್ತಿರುವಾಗಲೂ ಅವರು ಭಯದಿಂದ ಮುಕ್ತರಾಗದೆ ಆ ನರಳು ದನಿ ಮಾಡುವ ಅನಾಹುತವನ್ನೇ ಆಲೋಚಿಸುತ್ತಿರುವಂತೆ ಕಂಡಿತು. ರಾತ್ರಿಯೆಲ್ಲಾ ಇರಲು ಬಂದವರು ಯಾಕೋ ಕೂಡಲೇ ಜಾಗ ಖಾಲಿ ಮಾಡುವ ತವಕ ವ್ಯಕ್ತ ಮಾಡಿದರು.

ತಂದ ಊಟ ಖಾಲಿಯಾಗಿರಲಿಲ್ಲ, ಡ್ರಿಂಕ್ಸ್ ಮಾತ್ರ ಖಾಲಿಯಾಗಿತ್ತು, "ನಮ್ಮ ಜನ ಊಟ ಉಳಿಸುತ್ತಾರೆ. ಆದರೆ ಎಣ್ಣೆಯನ್ನು ಮಾತ್ರ ಉಳಿಸುವುದಿಲ್ಲ ನೋಡಿ" ಎಂದು ನಗಿಸಲು ಯತ್ನಿಸಿದೆ. ಆದರೆ ಅರ್ಥೈಸಲಾಗದ ಆ ದನಿ ಅವರ ಧೈರ್ಯವನ್ನು ಉಡುಗಿಸಿದಂತೆ ಕಂಡಿತು. ಅನಿವಾರ್ಯವಾಗಿ ಎಲ್ಲರೂ ಪರಸ್ಪರ ಧೈರ್ಯ ಹೇಳಿಕೊಂಡು ಹೊರಡುತ್ತಿರಬೇಕಾದರೆ ಒಂದು ಬಡಕಲು ಬಿಳಿ ನಾಯಿ ಬಂತು. ಅಷ್ಟರಲ್ಲಿ ನರಳು ದನಿ ನಿಂತಿದ್ದರಿಂದ ಕೂಗಿ ಸಾಕಾದ ದೆವ್ವ ನಾಯಿ ರೂಪದಲ್ಲಿ ಬಂದಿದೆ ಎಂಬ ಗುಮಾನಿ ಅವರಲ್ಲಿ ಮೂಡತೊಡಗಿತು. ಹತ್ತಿರದಲ್ಲಿ ಊರಿಲ್ಲ ಆದರೂ ಈ ಅರ್ಧರಾತ್ರಿಯಲ್ಲಿ ಬಡಕಲು ನಾಯಿ ಬಂತು ಎಂದರೆ ಏನರ್ಥ ಎಂಬ ಮುಖಭಾವಗಳು ನಾಯಿಯನ್ನು ಸರಿಯಾಗಿ ನೋಡದೆ ಕಾರಿಗೆ ಹತ್ತಿಕೊಳ್ಳತೊಡಗಿದವು.

ಮರುದಿನ ನಾವು ಕೇಳಿದ ದನಿಯ ಸುದ್ದಿಯನ್ನು ಊರಲ್ಲಿ ಹೇಳಿದಾಗ ಯಾರಿಗೂ ಅಚ್ಚರಿಯಾಗಲಿಲ್ಲ, ಅಂತಹ ದನಿಗಳನ್ನೆಲ್ಲಾ ಅವರು ಕೇಳಿದ್ದರು. ಆದ್ದರಿಂದ ಯಾವ ಅನುಮಾನಗಳನ್ನು ವ್ಯಕ್ತಮಾಡದೆ ದೆವ್ವಗಳಿಂದ ತಮಗಾದ ಅನುಭವಗಳನ್ನು ಹೇಳತೊಡಗಿದರು. ನನ್ನ ಪ್ರಕಾರ ಅವ್ಯಾವೂ ನಿಜವಲ್ಲ.

ಒಮ್ಮೆ ನಮ್ಮ ಅಣ್ಣ ಹುಲ್ಲುಕೊಪ್ಪಲಲ್ಲಿ ಹುಲ್ಲು ಹಿರಿಯುತ್ತಿದ್ದ ಆದಾಗಲೆ ಮುಸ್ಸಂಜೆ. ಬೇಲಿಯೊಳಗೆ ದಢೂಂಬ ಶಬ್ದ ಬಂತು. ನೆಗೆದು ಒಂದೇ ಓಟಕ್ಕೆ ಮನೆಗೆ ಬಂದ. ಬಂದವನು "ದೆವ್ವ ಜೂಲು ನಾಯಿಯಂತೆ ಮ್ಯಾಲೆ ನೆಗೆಯಿತು" ಎಂದು ಸುಳ್ಳು ಹೇಳಿದ್ದ, ವಾಸ್ತವವಾಗಿ ಆಲಸಿನ ಮರದಿಂದ ಹಣ್ಣು ಬೇಲಿಗೆ ಬಿದ್ದಿತ್ತು. ಹೀಗೆ ಈ ಜನರೇಳುವ ದೆವ್ವಗಳ ಕತೆಯಲ್ಲಿ ಒಂದೂ ನಿಜವಿಲ್ಲ.

ನಮ್ಮೂರ ಜಯರಾಮ ಎಂಬ ಹುಡುಗ ಎಂತಹ ರಾತ್ರಿಯಲ್ಲೂ ಸುತ್ತಮುತ್ತಲ ಊರಿಗೆ ಒಬ್ಬನೇ ನಡೆದು ಹೋಗುತ್ತಾನೆ. ವಿಚಿತ್ರ ಶಬ್ದ ಬಂದ ಕಡೆಗೇ ಹೋಗಿ ಪರಿಶೀಲಿಸುತ್ತಾನೆ. ಆದರೆ ಅವನ ಬಳಿ ಒಂದೇ ಒಂದು ದೆವ್ವದ ಕತೆಯಿಲ್ಲ, ಆದರೆ ಪುಕ್ಕಲರ ಬಳಿ ಹೇರಳವಾದ ಕಥೆಗಳಿವೆ.

ಹಲವು ವರ್ಷಗಳ ಹಿಂದೆ ಬೆಳಗಿನ ಜಾವ ಒಂದು ವಿಚಿತ್ರವಾದ ದನಿ ನಮ್ಮ ಊರನ್ನೇ ನಡುಗಿಸಿತು. ಮಹಾ ಧೈರ್ಯವಂತರೆಲ್ಲಾ ಹೆದರಿಹೋದರು. ಎರಡೇ ಬಾರಿ ಬಂದ ಆ ಕೂಗು ಗಂಟಲು ಹೊಡಕ ಕುರಿಯದ್ದಾಗಿತ್ತು, ಮರಿ ಹಾಕುವಾಗ ನೋವಿನಿಂದ ಕೂಗಿದ ಆ ಕುರಿ ಊರಿನ ಸಿಂಹಗಳನ್ನೇ ಹೆದರಿಸಿತ್ತು. ಹಾಗೆಯೇ ನಾವು ಪಾರ್ಟಿ ಮಾಡುವಾಗ ಕೂಗಿಕೊಂಡದ್ದು ಯಾವುದೋ ನರಳು ಗೂಬೆಯಿದ್ದಿರಬಹುದು. ಆದರೇನು ಹೌದು ಎಂದರೆ ಕತೆ ಅಲ್ಲಿಗೇ ನಿಲ್ಲುತ್ತದೆ. ಇಲ್ಲ ಎಂದರೆ, ಅಂತ್ಯವಿಲ್ಲದ ಬೆಳೆಯುತ್ತದೆ. ಅಂತೂ ನಮ್ಮ ಬೆಂಗಳೂರು ಹುಡುಗರು ಇನ್ನಿತ್ತಡೆ ತಲೆ ಹಾಕಲಾರರು. ಇದು ನನ್ನ ಭಾಗಕ್ಕೆ ಭಾರಿ ನಷ್ಟ!

■ ಬಿ. ಚಂದ್ರೇಗೌಡ

ಮೋದಿಯ ಪ್ರಧಾನ ಗುರಿ ನಗದುರಹಿತ ಆರ್ಥಿಕತೆಯೆ?

2016ರ ನವೆಂಬರ್ 8ಕ್ಕೆ ಮುನ್ನ ಆಗಿರುವ ಕೆಲವೊಂದು ಬೆಳವಣಿಗೆಗಳ ಹಿನ್ನೆಲೆಯಲ್ಲಿ ನೋಡಿದಾಗ ಮೋದಿಯ ನೋಟು ರದ್ದತಿ ಕಾರ್ಯಾಚರಣೆಯ ಮೂಲ ಉದ್ದೇಶ ಅವರು ಹೇಳಿದಂತಿರದೆ, ದೇಶದಾದ್ಯಂತ ನಗದು ರಹಿತ ವಹಿವಾಟನ್ನು ಜಾರಿಗೆ ತರುವುದಾಗಿದೆ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಹಾಗಾದರೆ ಆ ಬೆಳವಣಿಗೆಗಳು ಯಾವುವೆಂದು ಮುಂದೆ ನೋಡೋಣ. ನವೆಂಬರ್ 8ರ ರಾತ್ರಿ ಹಠಾತ್ತಾಗಿ ದೇಶವನ್ನುದ್ದೇಶಿಸಿ ಮಾತನಾಡಿದ ಮೋದಿ ರೂ. 500 ಮತ್ತು ರೂ. 1,000ರ ನೋಟುಗಳನ್ನು ಅಮಾನ್ಯಗೊಳಿಸುವ ನಿರ್ಧಾರವನ್ನು ಪ್ರಕಟಿಸುತ್ತಾ ಆ ಮೂಲಕ ಭ್ರಷ್ಟಾಚಾರ, ಕಪ್ಪುಹಣ, ಖೋಟಾ ನೋಟು, ಭಯೋತ್ಪಾದನೆಗಳ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ಘೋಷಿಸಿದ. ಭ್ರಷ್ಟಾಚಾರದ ಪಿಡುಗಿನ ಭೂತೋಚ್ಚಾಟನೆ, ನಕಲಿ ನೋಟುಗಳ ಹಾವಳಿಗೆ ತಡೆ, ಭಯೋತ್ಪಾದನೆಯ ಜಾಡ್ಯದ ಅಂತ್ಯ ಇವೆಲ್ಲವೂ ಜನಸಾಮಾನ್ಯರ ಹೃದಯಕ್ಕೆ ಸಮೀಪವಾದ ವಿಷಯಗಳು. ಆದುದರಿಂದಲೆ ನೋಟು ರದ್ದತಿ ಬಗ್ಗೆ ಪ್ರತಿಕ್ರಿಯೆ ನೀಡಿದ ಅನೇಕರು "ಹೌದು ಕಷ್ಟ ಆಗಿದೆ. ಆದರೆ ಇಂತಹ ಪವಿತ್ರ ಉದ್ದೇಶಕ್ಕೋಸ್ಕರ ಕೊಂಚ ತ್ಯಾಗ ಮಾಡಲು ಸಿದ್ಧ" ಎಂಬರ್ಥದ ಮಾತುಗಳನ್ನಾಡಿರುವುದರಲ್ಲಿ ಸೋಜಿಗವಿಲ್ಲ.

ಆದರೆ ಅದೇ ಮೋದಿ ಮುಂದಿನ ಕೆಲವೇ ದಿನಗಳಲ್ಲಿ ವರಸೆ ಬದಲಾಯಿಸಿ ಭಾರತವನ್ನು ತುರ್ತಾಗಿ ನಗದುರಹಿತ ಆರ್ಥಿಕತೆಯ ದೇಶವಾಗಿ ಪರಿವರ್ತಿಸಬೇಕಾಗಿದೆ ಎನ್ನಲಾರಂಭಿಸಿದ. ಆದರೆ ವಾಸ್ತವವಾಗಿ ಪ್ರಾರಂಭದಿಂದಲೂ ಮೋದಿಯ ಪ್ರಧಾನ ಗುರಿ ನಗದುರಹಿತ ಆರ್ಥಿಕತೆಯೆ ಆಗಿತ್ತು ಎನ್ನುತ್ತಿವೆ ಇತ್ತೀಚೆಗೆ ಬಯಲಾಗಿರುವ ಮಾಹಿತಿಗಳು. ನೋಟು ರದ್ದತಿ ಮಾರ್ಗವನ್ನು ಅನುಸರಿಸಿರುವುದು ನಗದು ಹಣದ ಕೃತಕ ಅಭಾವ ಸೃಷ್ಟಿಸಿ ಆ ಮೂಲಕ ಜನ ಬೇರೆ ಆಯ್ಕೆ ಇಲ್ಲದೆ ನಗದುರಹಿತ ಆರ್ಥಿಕತೆಯನ್ನು ಒಪ್ಪಿಕೊಳ್ಳುವ ವಾತಾವರಣವನ್ನು ನಿರ್ಮಿಸುವುದಕ್ಕೋಸ್ಕರ ಎಂದು ತಿಳಿದುಬಂದಿದೆ. ಕಾಳಧನ, ಖೋಟಾನೋಟು, ಭಯೋತ್ಪಾದನೆ ನಿರ್ಮೂಲನದ ಮಾತುಗಳೆಲ್ಲ ದಿಕ್ಕು ತಪ್ಪಿಸುವ ತಂತ್ರವಾಗಿತ್ತೆ ಹೊರತು ಇನ್ನೇನೂ ಅಲ್ಲ ಎಂದು ನಂಬಲು ಬಲವತ್ತರ ಕಾರಣಗಳಿವೆ:

• ಮೊತ್ತಮೊದಲಾಗಿ ಮೋದಿ ಸರ್ಕಾರ ಎಂದೂ ಕಪ್ಪುಹಣ ಎಷ್ಟಿದೆ ಮತ್ತು ಎಷ್ಟು ಸಿಗಲಿದೆ ಎಂದು ತಿಳಿಸಿಲ್ಲ, ಇತ್ತೀಚೆಗೆ ಲಭ್ಯವಾಗಿರುವ ನಂಬಲರ್ಹ ಮಾಹಿತಿಗಳ ಪ್ರಕಾರ ನೋಟುಗಳನ್ನು ರದ್ದುಗೊಳಿಸಿದಾಗ ಚಲಾವಣೆಯಲ್ಲಿದ್ದ ಹಣದ ಶೇಕಡಾ 97ರಷ್ಟು (ರೂ 15.44 ಲಕ್ಷ ಕೋಟಿಯಲ್ಲಿ ಸುಮಾರು ರೂ. 14.97 ಲಕ್ಷ ಕೋಟಿ) ಬ್ಯಾಂಕುಗಳಿಗೆ ಮರಳಿ ಬಂದಾಗಿದೆ. ಇದರರ್ಥ ನಗದು ರೂಪದಲ್ಲಿದ್ದ ಹೆಚ್ಚುಕಮ್ಮಿ ಎಲ್ಲಾ ಕಪ್ಪುಹಣ ಬಿಳಿಯಾಗಿದೆ! ವಾಸ್ತವದಲ್ಲಿ ಮೋದಿಯ ನೋಟು ರದ್ದತಿ ಕಾರ್ಯಾಚರಣೆ ಕಪ್ಪುಹಣವನ್ನು ಹೊರತೆಗೆಯುವ ಬದಲು ಕಪ್ಪುಹಣ ಮಾಡುವ ಹೊಸಾ ಮಾರ್ಗಗಳಿಗೆ ಅವಕಾಶ ಕಲ್ಪಿಸಿಕೊಟ್ಟಿದೆ. ಹೊಸಾ ನೋಟುಗಳಲ್ಲೆ ಕಾಳದಂಧೆ ನಡೆದಿರುವುದು ಭ್ರಷ್ಟಾಚಾರ ಎಲ್ಲೂ ಹೋಗಿಲ್ಲ, ಅದಿನ್ನೂ ಜೀವಂತವಾಗಿದೆಯಲ್ಲದೆ ಚಟುವಟಿಕೆಯಿಂದ ಇದೆ ಎಂಬುದನ್ನು ಸೂಚಿಸುವುದಿಲ್ಲವೆ!? ಹಾಗಾದರೆ ಇಷ್ಟೊಂದು ಐಟಿ ದಾಳಿಗಳಾಗುತ್ತಿಲ್ಲವೆ, ಸುಮಾರು ರೂ. 4800 ಕೋಟಿಗೂ ಅಧಿಕ ಕಪ್ಪುಹಣವನ್ನು ವಶಪಡಿಸಿಕೊಳ್ಳಲಾಗಿಲ್ಲವೆ ಎಂಬ ಪ್ರಶ್ನೆಗಳು ಬರಬಹುದು. ಆದರೆ ಸುಮಾರು ರೂ. 4-5 ಲಕ್ಷ ಕೋಟಿಯಷ್ಟಿದೆ ಎಂದು ಅಂದಾಜಿಸಲಾದ ಕಪ್ಪುಹಣಕ್ಕೆ ಹೋಲಿಸಿದರೆ ಇದು ಏನೇನೂ ಅಲ್ಲ, ಅಸಲಿಗೆ ಹೆಚ್ಚಿನ ಐಟಿ ದಾಳಿಗಳು ಕೇವಲ ಬೆರಳೆಣಿಕೆಯಷ್ಟು ಸರಕಾರಿ ಅಧಿಕಾರಿಗಳು, ರಾಜಕಾರಣಿಗಳು, ಕಾಂಟ್ರಾಕ್ಟರ್‌ಗಳಿಗೆ ಸೀಮಿತವಾಗಿರುವುದನ್ನು ಮತ್ತು ಬಿಜೆಪಿಯೇತರ ಸರಕಾರಗಳನ್ನು ಗುರಿಯಾಗಿಸಿರುವುದನ್ನು ಕಾಣಬಹುದು. ಆದರೆ ಭ್ರಷ್ಟಾತಿಭ್ರಷ್ಟ ಕಾರ್ಪೋರೇಟುಕುಳಗಳ, ಭ್ರಷ್ಟ ಬಿಜೆಪಿ ಸರ್ಕಾರಗಳ, ಭ್ರಷ್ಟ ಸಂಘ ಪರಿವಾರಿಗರ ಕೂದಲು ಕೂಡಾ ಕೊಂಕಿಲ್ಲ ಎಂಬುದನ್ನು ಗಮನಿಸಬೇಕಾಗಿದೆ. ಜನಾರ್ದನ ರೆಡ್ಡಿ, ನಿತಿನ್ ಗಡ್ಕರಿಗಳಂಥವರ ಅದ್ದೂರಿ ಸಮಾರಂಭಗಳಿಗೆ ಖರ್ಚಾದ ದುಡ್ಡಿನ ಮೂಲ ತನಿಖೆಗೊಳಪಟ್ಟಿದೆಯೆ? ಅದಾನಿಯಂಥವರು ಕಲೆಹಾಕಿದ್ದಾರೆನ್ನಲಾದ ಸಾವಿರಾರು ಕೋಟಿ ಕಪ್ಪುಹಣದ ಮೇಲೆ ಯಾಕೆ ದಾಳಿಗಳಿಲ್ಲ? ಅಮಿತ್ ಶಾ ನಿರ್ದೇಶಕನಾಗಿರುವ ಅಹಮದಾಬಾದ್ ಜಿಲ್ಲಾ ಸಹಕಾರಿ ಬ್ಯಾಂಕಿನ ಅವ್ಯವಹಾರಗಳ ತನಿಖೆ ನಡೆದಿದೆಯೆ?

• ಎರಡನೆಯದಾಗಿ, ಹೊಸಾನೋಟುಗಳಲ್ಲಿ ಯಾವುದೇ, ಹೊಸಾ ಭದ್ರತಾ ಅಂಶಗಳು ಇಲ್ಲ, ಅವುಗಳನ್ನು ನಕಲಿ ಮಾಡುವ ಕೆಲಸ ಈಗಾಗಲೆ ಅದೂ ದೇಶದೊಳಗೇ ಶುರುವಾಗಿರುವಾಗ ಇನ್ನು ವಿದೇಶಗಳಿಂದ ಬರಲು ಕಷ್ಟವೇನಿದೆ? ಅಸಲಿಗೆ ನಕಲಿ ನೋಟುಗಳನ್ನು ನಾಶಪಡಿಸಲು ಈಗಿನ ಈ ಉಗ್ರ ವಿಧಾನದ ಬದಲು ಸೌಮ್ಯ ವಿಧಾನಗಳನ್ನು ಬಳಸಬಹುದಿತ್ತು,

• ಮೂರನೆಯದಾಗಿ ನೋಟು ರದ್ದತಿ ನಂತರ ಉಗ್ರರ ಅಟ್ಟಹಾಸ ನಿಂತಿಲ್ಲ ಎನ್ನುವುದಕ್ಕೆ ಉದಾಹರಣೆಯಾಗಿ ನಮ್ಮ ಮುಂದಿವೆ 2016ರ ನವೆಂಬರ್ 29ರಂದು ಜಮ್ಮುವಿನ ನಾಗ್ರೋತಾದಲ್ಲಿ ಭೂಸೇನೆಯ ನೆಲೆಯೊಂದರ ಮೇಲೆ ಮತ್ತು 2017ರ ಜನವರಿ 9ರ ಮುಂಜಾವ ಬತ್ತೋರ್‌ನಲ್ಲಿ ಭೂಸೇನೆಯ ಸಾಮಾನ್ಯ ರಿಸರ್ವ್ ಎಂಜಿನಿಯರ್ ಪಡೆಯ ಶಿಬಿರದ ಮೇಲೆ ನಡೆದ ದಾಳಿಗಳು.

ಹಾಗಾದರೆ ಮೋದಿ ಸರ್ಕಾರ ಯಾತಕ್ಕೋಸ್ಕರ ಭಾರತವನ್ನು ನಗದುರಹಿತ ಆರ್ಥಿಕತೆಯ ದೇಶವಾಗಿಸಲು ತವಕಿಸುತ್ತಿದೆ? ಇದರ ಉತ್ತರ ಮೋದಿ ಸರ್ಕಾರ ಅಮೆರಿಕದ ಜತೆ ಮಾಡಿಕೊಂಡಂಥ ವ್ಯೂಹಾತ್ಮಕ ಸಹಭಾಗಿತ್ವದ ಒಪ್ಪಂದದಲ್ಲಿ ಅಡಗಿದೆ. ಚೀನಾದ ನಾಗಾಲೋಟಕ್ಕೆ ಕಡಿವಾಣ ಹಾಕುವ ಸಮಾನ ಉದ್ದೇಶದೊಂದಿಗೆ ಸದರಿ ಒಪ್ಪಂದಕ್ಕೆ ಸಹಿಹಾಕಿದ ತರುವಾಯದಲ್ಲಿ ಒಂದು ಕುತೂಹಲಕಾರಿ ಬೆಳವಣಿಗೆ ನಡೆದಿದೆ. ಈ ಹೊತ್ತಿನ ಸನ್ನಿವೇಶದ ಬೆಳಕಿನಲ್ಲಿ ನೋಡಿದಾಗ ಅದರ ನಿಜವಾದ ಅರ್ಥ ಸ್ಪಷ್ಟವಾಗುತ್ತದೆ. ವಿಷಯ ಏನೆಂದರೆ ಅಕ್ಟೋಬರ್ 2016ರ ಸುಮಾರಿಗೆ ಅಮೆರಿಕದ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ (United States Agency for International Development; USAID) ಭಾರತದ ವಿತ್ತ ಸಚಿವಾಲಯವನ್ನು ಸಂಪರ್ಕಿಸಿ ಅದರೊಂದಿಗೆ ಕೆಲವು ಪರಸ್ಪರ ಸಹಕಾರದ ಒಡಂಬಡಿಕೆಗಳನ್ನು ಮಾಡಿಕೊಂಡಿದೆ. ಇವುಗಳ ಪೈಕಿ ಒಂದು ಒಡಂಬಡಿಕೆ ನಗದುರಹಿತ ಆರ್ಥಿಕತೆಗೆ ಸಂಬಂಧಪಟ್ಟುದಾಗಿದ್ದು ಅದರ ಮುಖ್ಯ ಉದ್ದೇಶ ಭಾರತದಲ್ಲಿ ಹಾಗೂ ವಿಶ್ವದಲ್ಲಿ ನಗದುರಹಿತ ಆರ್ಥಿಕತೆಯನ್ನು ಜಾರಿಗೆ ತರುವುದಾಗಿದೆ!






ನಗದುರಹಿತ ಆರ್ಥಿಕತೆಯನ್ನು ವ್ಯಾಪಕವಾಗಿ ಅನುಷ್ಠಾನಗೊಳಿಸುವ ಸಲುವಾಗಿರುವ ಈ ಒಡಂಬಡಿಕೆಯನ್ನು "ಕ್ಯಾಟಲಿಸ್ಟ್: 'ಸರ್ವರನ್ನು' ಒಳಗೊಳ್ಳುವ ನಗದುರಹಿತ ಪಾವತಿಯಲ್ಲಿ ಸಹಭಾಗಿತ್ವ" (Catalyst: Inclusive Cashless Payment Partnership) ಎಂದು ಕರೆಯಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಅಕ್ಟೋಬರ್ 14ರಂದು ನೀಡಲಾದ ಪತ್ರಿಕಾಹೇಳಿಕೆಯಲ್ಲಿಯೂ "ಈ ಒಪ್ಪಂದವನ್ನು ಮಾಡಿಕೊಂಡಿರುವುದು ಸರ್ವರನ್ನು ಆರ್ಥಿಕವಾಗಿ ಒಳಗೊಳ್ಳುವುದಕ್ಕಾಗಿ..." ಎನ್ನಲಾಗಿದೆ. USAID ಸಂಸ್ಥೆಯ ಭಾರತೀಯ ನಿರ್ದೇಶಕನಾಗಿರುವ ರಾಯಭಾರಿ ಜೊನಾತನ್ ಆಡಲ್‌ಟನ್, ಕ್ಯಾಟಲಿಸ್ಟ್ ಯೋಜನೆ ದೈನಂದಿನ ಖರೀದಿಗಳನ್ನು ನಗದುರಹಿತವಾಗಿಸುವ ಸವಾಲಿನ ಮೇಲೆ ಕೇಂದ್ರೀಕರಿಸಲಿದೆ ಎಂದಿದ್ದ.

ವರದಿಗಳ ಪ್ರಕಾರ USAID ಸಂಸ್ಥೆ ಕ್ಯಾಟಲಿಸ್ಟ್ ಯೋಜನೆಗೆ ಮೂರು ವರ್ಷಗಳ ಕಾಲ ಆರ್ಥಿಕ ನೆರವನ್ನೂ ಒದಗಿಸಲು ಒಪ್ಪಿಕೊಂಡಿದೆ. ಆದರೆ ಅದರ ಪ್ರಮಾಣವನ್ನು ಹೊರಗೆಡವಲಾಗಿಲ್ಲ, ಆ ಮಾಹಿತಿಯನ್ನು ರಹಸ್ಯವಾಗಿಡಲಾಗಿದೆ. ಈ ಹಿಂದೆ ವಾಷಿಂಗ್‌ಟನ್ ಮೂಲದ ವಿಶ್ವ ಸಂಪನ್ಮೂಲ ಸಂಸ್ಥೆಯಲ್ಲಿ (World Resources Institute) ಪ್ರಧಾನ ಕಾರ್ಯಾಚರಣಾ ಅಧಿಕಾರಿ (Chief Operating Officer) ಆಗಿದ್ದ ಅಲೋಕ್ ಗುಪ್ತಾ ಎಂಬಾತನನ್ನು ಕ್ಯಾಟಲಿಸ್ಟ್ ಯೋಜನೆಗೆ ನಿರ್ದೇಶಕನಾಗಿ ನೇಮಿಸಲಾಗಿದೆ. ಇದರ ಹಿಂದೆ USAID ಸಂಸ್ಥೆಯ ಕೈವಾಡವಿರುವುದು ಸ್ಪಷ್ಟ ಏಕೆಂದರೆ ವಿಶ್ವ ಸಂಪನ್ಮೂಲ ಸಂಸ್ಥೆಯ ಪ್ರಧಾನ ಪ್ರಾಯೋಜಕರಲ್ಲಿ USAID ಸಂಸ್ಥೆಯೂ ಒಂದು. ಮತ್ತೊಂದು ಪ್ರಮುಖ ವಿಚಾರ ಏನೆಂದರೆ ಅಲೋಕ್ ಗುಪ್ತಾ ಆಧಾರ್‌ಅನ್ನು ರೂಪಿಸಿದ ತಂಡದಲ್ಲಿ ಇದ್ದವನು! ನಗದುರಹಿತ ವಹಿವಾಟಿಗೆ ಆಧಾರ್ ಬಯೊಮೆಟ್ರಿಕ್ಸ್ ಬಳಸಲಾಗುವುದು ಎಂಬ ವರದಿಗಳ ಹಿನ್ನೆಲೆಯಲ್ಲಿ ಇದು ಮುಖ್ಯವಾಗುತ್ತದೆ. ಕ್ಯಾಟಲಿಸ್ಟ್‌ನ ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿಯಾಗಿ (Chief Executive Officer) ನೇಮಕಗೊಂಡಿರುವ ಬಾದಲ್ ಮಲ್ಲಿಕ್ ಇದಕ್ಕೆ ಮುಂಚೆ ಭಾರತದ ಆನ್‌ಲೈನ್ ಮಾರುಕಟ್ಟೆ ಸ್ನಾಪ್ ಡೀಲ್‌ನ (Snapdeal) ಉಪಾಧ್ಯಕ್ಷನಾಗಿದ್ದ! ಆಘಾತಕಾರಿ ಅಂಶವೆಂದರೆ USAID ಸಂಸ್ಥೆ ಮತ್ತು ಭಾರತದ ವಿತ್ತ ಸಚಿವಾಲಯ ಒಟ್ಟಾಗಿ ನಗದು ಆರ್ಥಿಕತೆ ಮೇಲೆ ಹೂಡಿರುವ ಈ ಯುದ್ಧದಲ್ಲಿ ಭಾರತ, ಅಮೆರಿಕ ಮತ್ತು ಇತರ ದೇಶಗಳ 35ಕ್ಕೂ ಅಧಿಕ ಖಾಸಗಿ ಕಂಪೆನಿಗಳು ಭಾಗಿಯಾಗಿರುವುದಾಗಿ ತಿಳಿದುಬರುತ್ತದೆ! ಸಹಜವಾಗೇ ಅವುಗಳಲ್ಲಿ ಹೆಚ್ಚಿನವು ಐಟಿ ಮತ್ತು ಪಾವತಿ ಸೇವಾಸಂಸ್ಥೆಗಳು! ಉದಾಹರಣೆಗೆ Gates Foundation (Microsoft), Omidyar Network (eBay), Dell Foundation, Mastercard, Visa, Metlife Foundation, The Better Than Cash Alliance. ವಾಸ್ತವ ಏನೆಂದರೆ ಅಮೆರಿಕದ ಐಟಿ ಮತ್ತು ಡಿಜಿಟಲ್ ಪಾವತಿ ಕ್ಷೇತ್ರದ ಕಾರ್ಪೋರೇಟುಗಳು ತಮ್ಮ ಕ್ಷೇತ್ರವನ್ನು ದೊಡ್ಡ ಮಟ್ಟದಲ್ಲಿ ವಿದೇಶಗಳಿಗೆ ವಿಸ್ತರಿಸಿ ಅಪಾರ ಲಾಭ ಗಳಿಸಲು ಹಾತೊರೆಯುತ್ತಿವೆ. ಅಮೆರಿಕ ಸರ್ಕಾರದ ಮೇಲೆ ಬಲವಾದ ಹಿಡಿತ ಹೊಂದಿರುವ ಇವು ಅದನ್ನು ಬಳಸಿಕೊಂಡು ತಮ್ಮ ಅಜೆಂಡಾವನ್ನು ಜಾರಿಗೊಳಿಸುತ್ತಿವೆ.

2015ರ ಡಿಸೆಂಬರ್‌ನಷ್ಟು ಹಿಂದೆಯೆ ಭಾರತದಲ್ಲಿ "ನಗದಿನ ಆಚೆ" (Beyond Cash) ಹೆಸರಿನ ಅಧ್ಯಯನವೊಂದನ್ನು ನಡೆಸಿರುವ USAID ಸಂಸ್ಥೆ ಅದರ ಅಂತಿಮ ವರದಿಯನ್ನು 2016ರ ಜನವರಿಯಲ್ಲಿ ಸರ್ಕಾರಕ್ಕೆ ಸಲ್ಲಿಸಿತ್ತು, "ವ್ಯಾಪಾರಿಗಳು, ಗ್ರಾಹಕರು ಹೆಚ್ಚಾಗಿ ನಗದು ವ್ಯವಹಾರಗಳಲ್ಲೆ ಮುಳುಗಿರುವುದರಿಂದ ನಗದುರಹಿತಕ್ಕೆ ಒಲವು ತೋರುತ್ತಿಲ್ಲ... ಹೀಗಾಗಿ ಹೊರಗಿನಿಂದ ಶಕ್ತಿಯುತ ಪ್ರಚೋದನೆ ಬೇಕಾಗಿದೆ..." ಎನ್ನುತ್ತದೆ ವರದಿ. ಆದರೆ ಹೊರಗಿನಿಂದ ಪ್ರಚೋದನೆ ನೀಡುವುದು ಹೇಗೆ ಎಂಬುದನ್ನು ಮೊದಲೆ ಬಹಿರಂಗಪಡಿಸುವಂತಿರಲಿಲ್ಲ, ಹೀಗಾಗಿ ಕ್ಯಾಟಲಿಸ್ಟ್ ಒಂದು ಕುಯುಕ್ತಿ ಮಾಡಿ ಸ್ಥಳೀಯವಾಗಿ ಒಂದು ಕ್ಷೇತ್ರೀಯ ಪ್ರಯೋಗ ನಡೆಸುವ ಮಾತುಗಳನ್ನಾಡಿತು. ಕ್ಯಾಟಲಿಸ್ಟ್‌ನ ಸಿಇಓ ಮಲ್ಲಿಕ್ ಮೊನ್ನೆ ಅಕ್ಟೋಬರ್‌ನಲ್ಲಿ "ಒಂದು ನಗರವನ್ನು ಆರಿಸಿಕೊಂಡು ಅಲ್ಲಿ 10ರಿಂದ 12 ತಿಂಗಳುಗಳೊಳಗೆ ನಗದುರಹಿತ ಪಾವತಿಯನ್ನು ಹೆಚ್ಚಿಸುವುದು ನಮ್ಮ ಗುರಿ" ಎಂದಿದ್ದ. ಆದರೆ ತದನಂತರದಲ್ಲಿ ಪ್ಲಾನ್ ಪೂರ್ತಿ ಬದಲಾಗಿ ನವೆಂಬರ್ 8ರಂದು ಮೋದಿ ಏಕಾಏಕಿ ನೋಟು ರದ್ದತಿ ಕಾರ್ಯಕ್ರಮವನ್ನು ಜಾರಿಗೊಳಿಸಿದ. ಚಲಾವಣೆಯಲ್ಲಿರುವ ಶೇಕಡಾ 86ರಷ್ಟು ನಗದನ್ನು ಅಮಾನ್ಯಗೊಳಿಸಿ, ಬ್ಯಾಂಕ್ ಖಾತೆಗಳಿಂದ ಹಣ ತೆಗೆಯಲು ಮಿತಿ ವಿಧಿಸಿರುವ ಈ ನಡೆಯನ್ನು ಬಾಹ್ಯ ಪ್ರಚೋದನೆ ಎನ್ನದೆ ಇನ್ನೇನೆಂದು ಕರೆಯಬೇಕು? ಇದಕ್ಕೆ ಪೂರಕವಾಗಿ ದಿನಾ ಅಪ್ಪಳಿಸುತ್ತಿವೆ ನಗದುರಹಿತ ವಹಿವಾಟಿನ "ಲಾಭ"ಗಳನ್ನು ಅರುಹುವ ಸರ್ಕಾರಿ ಹಾಗೂ ಖಾಸಗಿ ಜಾಹೀರಾತುಗಳು. ನೋಟು ರದ್ದತಿಯ ಪ್ರಧಾನ ಉದ್ದೇಶ ಏನೆಂದು ಈಗ ಸ್ಪಷ್ಟವಾಗು ತ್ತಿದೆಯೆ? ಮೋದಿಯ ಮಂಕುಬೂದಿಗೆ ಮರುಳಾದ ಕೆಲವು ಶಿಕ್ಷಣಸಂಸ್ಥೆಗಳೂ ಮೋದಿ ಸರ್ಕಾರದ ವಿಭಾಗಗಳಂತಾಗಿ ನಗದುರಹಿತ ಆರ್ಥಿಕತೆ ಪ್ರೋತ್ಸಾಹಿಸಲು ವಿದ್ಯಾರ್ಥಿಗಳ ಮೂಲಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿವೆ.

ಸ್ವಲ್ಪವೂ ಸಂಶಯಕ್ಕೆ ಎಡೆ ಇರದಂತೆ ನಡೆಸಿದ ಈ "ಸರ್ಜಿಕಲ್ ದಾಳಿ" ಯಾ "ಮಹಾಯಜ್ಞ"ದ ಫಲವಾಗಿ ಜನಸಾಮಾನ್ಯರು ಅತೀವ ಸಂಕಷ್ಟಕ್ಕೊಳಗಾಗಲಿರುವ ವಿಚಾರ ಅದರ ಸಿದ್ಧತೆಯಲ್ಲಿ ಭಾಗಿಯಾಗಿದ್ದ ಎಲ್ಲರಿಗೂ ತಿಳಿದಿತ್ತು, ಏಕೆಂದರೆ USAID ಸಂಸ್ಥೆಯು ಅಧ್ಯಯನದಲ್ಲಿ ಕಂಡುಬಂದಿರುವಂತೆ ಭಾರತದ ಶೇಕಡಾ 97ರಷ್ಟು ವಹಿವಾಟುಗಳು ನಗದಿನಲ್ಲಿ ನಡೆಯುತ್ತವೆ. ಶೇಕಡಾ 55ರಷ್ಟು ಭಾರತೀಯರು ಬ್ಯಾಂಕ್ ಖಾತೆ ಹೊಂದಿದ್ದಾರಾದರೂ ಹಿಂದಿನ 3 ತಿಂಗಳ ಅವಧಿಯಲ್ಲಿ ಬಳಕೆಯಲ್ಲಿದ್ದ ಖಾತೆಗಳ ಸಂಖ್ಯೆ ಬರೀ 29%. ಗ್ರಾಮಗಳ ಸಂಖ್ಯೆ ಸುಮಾರು 6.5 ಲಕ್ಷ ಇದ್ದರೆ ಗ್ರಾಮೀಣ ಪ್ರದೇಶಗಳಲ್ಲಿರುವ ಬ್ಯಾಂಕ್ ಶಾಖೆಗಳ ಸಂಖ್ಯೆ ಕೇವಲ 2 ಲಕ್ಷ. ದೇಶದಲ್ಲಿರುವ ಸುಮಾರು 2 ಲಕ್ಷ ಎಟಿಎಂಗಳ ಪೈಕಿ ಅತ್ಯಧಿಕ ನಗರಪ್ರದೇಶಗಳಿಗೆ ಸೀಮಿತವಾಗಿವೆ. ಹೀಗಾಗಿ ಎಣಿಸಿದ ಹಾಗೇ ನೋಟು ರದ್ದತಿ ಆದ ಮರುಗಳಿಗೆಯಿಂದ ನಗದಿನ ತೀವ್ರ ಅಭಾವ ತಲೆದೋರಿದೆ. ಪರಿಣಾಮವಾಗಿ ನಗರ ಪ್ರದೇಶಗಳಲ್ಲಿ ಕಾರ್ಡ್




ಉಜ್ಜುವ ಯಂತ್ರಗಳ ಬಳಕೆ ಅನಿವಾರ್ಯವಾಗಿ ಹೆಚ್ಚಿದೆ. ಇದೇ ವೇಳೆ ಬಡವರು, ರೈತರು, ಕಾರ್ಮಿಕರು, ದುರ್ಬಲರು ದೈನಂದಿನ ವೆಚ್ಚಗಳಿಗೆ ಬೇಕಿದ್ದ ದುಡ್ಡಿಗಾಗಿ ವಿಪರೀ ಒದ್ದಾಡಬೇಕಾದ ಸ್ಥಿತಿ ನಿರ್ಮಾಣವಾಯಿತು. ನೋಟು ರದ್ದತಿಯಿಂದಾಗಿ 100ಕ್ಕೂ ಅಧಿಕ ಜನ ಸತ್ತಿದ್ದಾರೆ, ಅನೌಪಚಾರಿಕ ವಲಯ (ದೇಶದ ಒಟ್ಟು ದುಡಿಯುವ ವರ್ಗದ ಸುಮಾರು 80ರಿಂದ 90 ಪ್ರತಿಶತದಷ್ಟು ಜನ ಇಲ್ಲಿದ್ದಾರೆ) ತೀವ್ರ ಸಂಕಷ್ಟಕ್ಕೆ ತುತ್ತಾಗಿದೆ, ಗಾರ್ಮೆಂಟ್, ನೇಕಾರಿಕೆ, ಚರ್ಮ, ಸೆಣಬು ಮೊದಲಾದ ಸಣ್ಣಪುಟ್ಟ ಉದ್ದಿಮೆಗಳು ನೆಲಕಚ್ಚಿವೆ, ಸಣ್ಣ ಕಸುಬುದಾರರು, ದಿನಗೂಲಿ ನೌಕರರು ಒಪ್ಪತ್ತು ಉಪವಾಸಕ್ಕೆ ಬದ್ದಿದ್ದಾರೆ, ವಲಸೆ ಕಾರ್ಮಿಕರು ಕೆಲಸವಿಲ್ಲದೆ ಊರಿಗೆ ಮರಳಿದ್ದಾರೆ, ಸಮಾರಂಭಗಳು ಮುಂದೂಡಲ್ಪಟ್ಟಿವೆ, ಖರೀದಿ ಇಲ್ಲದ ಬೆಲೆಗಳು ಇಳಿದ ಕಾರಣ ಹತಾಶರಾದ ರೈತರು ತರಕಾರಿಗಳನ್ನು ಬೀದಿಗೆ ಎಸೆಯತೊಡಗಿದ್ದಾರೆ, ರೈತರ ಆದಾಯದಲ್ಲಿ 50ರಿಂದ 70% ಇಳಿಕೆಯಾಗಿದೆ...

ನೋಟು ರದ್ದತಿ ತಂದಿತ್ತಿರುವ ಅವಾಂತರ ಹಾಗೂ ಅನಾಹುತಗಳನ್ನು ಕಂಡಾಗ ಮಾನವೀಯತೆ ಉಳ್ಳ ಯಾರದೇ ಆದರೂ ಮನ ಕಲಕದೆ ಇರದು. ಆದರೆ ಬಹುಸಂಖ್ಯಾತರ ಉದ್ಧಾರಕ್ಕಾಗಿ ಅಲ್ಪಸಂಖ್ಯಾತರನ್ನು, ಮೇಲ್ವರ್ಗಗಳ ಉದ್ಧಾರಕ್ಕಾಗಿ ಕೆಳವರ್ಗಗಳನ್ನು ಬಲಿಗೊಡಲು ಹೇಸದವ ಕಣ್ಣಾಲಿಗಳು ಒಂದಿನಿತಾದರೂ ಒದ್ದೆ ಆಗಿಲ್ಲ, ಅತ್ತ ಐಟಿ ವಲಯ ಮತ್ತು ಪಾವತಿ ಸೇವಾ ಕಾರ್ಪೋರೇಟ್ ಕಂಪೆನಿಗಳ ಸಂತಸಕ್ಕಂತೂ ಪಾರವೆ ಇಲ್ಲದಾಗಿದೆ. ಅವುಗಳ ಪಾಲಿಗೆ ಇದೀಗ ಸುಗ್ಗಿಯೊ ಸುಗ್ಗಿ. ನಗದಿನ ಕೊರತೆಯ ಪರಿಣಾಮ ವಾಗಿ ಕಾರ್ಡ್ ಉಜ್ಜುವ ಪಿಓಎಸ್ ಯಂತ್ರಗಳ ಬಳಕೆ ಹೆಚ್ಚಾಗಿರುವುದರಿಂದ ಅವುಗಳ ವ್ಯವಹಾರದಲ್ಲಿ ಹಲವು ಪಟ್ಟು ಏರಿಕೆಯಾಗಿದೆ. ವರದಿಗಳ ಪ್ರಕಾರ ನೋಟು ರದ್ದತಿ ಬಳಿಕ ಪೇಟಿಎಂ ಆದಾಯದಲ್ಲಿ ದೊಡ್ಡ ಪ್ರಮಾಣದ ಹೆಚ್ಚಳವಾಗಿದ್ದು ಅದಿಂದು ದಿನವೊಂದರ ಸುಮಾರು ರೂ. 120 ಕೋಟಿಯಷ್ಟಿದೆ ಎನ್ನಲಾಗಿದೆ. ಆದರೆ ಎಟಿಎಂ, ಕಾರ್ಡ್ ಇತ್ಯಾದಿಗಳು ಡಿಜಿಟಲ್ ಆರ್ಥಿಕತೆ ಎಡೆಗಿನ ಪಯಣದಲ್ಲಿ ಒಂದು ತಾತ್ಕಾಲಿಕ ಮಜಲು ಎನ್ನಲಾಗುತ್ತದೆ. ನೀತಿ ಆಯೋಗದ ಅಧ್ಯಕ್ಷ ಅಮಿತಾಭ ಕಾಂತ್ ಜನವರಿ 7ರಂದು ಬೆಂಗಳೂರಿನಲ್ಲಿ "ಪ್ರವಾಸಿ ಭಾರತೀಯ ದಿವಸ್" ಸಂದರ್ಭದಲ್ಲಿ ಆಡಿರುವ ಮಾತುಗಳು ಇದನ್ನು ಪುಷ್ಟೀಕರಿಸುತ್ತವೆ. ಕಾಂತ್ ಪ್ರಕಾರ ನಗದುರಹಿತ ವಹಿವಾಟಿನ ತಂತ್ರಜ್ಞಾನದಲ್ಲಿ ಆಗಲಿರುವ ಆವಿಷ್ಕಾರಗಳ ಫಲವಾಗಿ 2020ರೊಳಗೆ ಈಗಿನ ಎಟಿಎಂ, ಪಿಓಎಸ್ ಮುಂತಾದವು ಮೂಲೆಗುಂಪಾಗಲಿವೆ. ಅಂದರೆ ಡಿಜಿಟಲ್ ಆರ್ಥಿಕತೆ ಬರಲಿದೆ ಎಂದರ್ಥ. ಆ ಮೂಲಕ ಒಂದು ಕಡೆ ಕಾರ್ಪೋರೇಟುಗಳಿಗೆ ಲಾಭದ ಸುರಿಮಳೆ; ಇನ್ನೊಂದು ಕಡೆ ಕಾರ್ಪೋರೇಟುಸ್ನೇಹಿ ಪ್ರಭುತ್ವಕ್ಕೂ ಬೇರೊಂದು ವಿಧದಲ್ಲಿ ಲಾಭ. ಭಾರತದಲ್ಲಿ ನಗದಿನ ಬಳಕೆ ಕಮ್ಮಿಯಾಗಿ ಡಿಜಿಟಲ್ ಪಾವತಿ ಹೆಚ್ಚಾದಂತೆ ಸರ್ಕಾರಕ್ಕೆ ಜನರ ಮೇಲೆ, ಅವರ ಆರ್ಥಿಕ ವಹಿವಾಟುಗಳ ಮೇಲೆ ಕಣ್ಣಿಡುವುದು ಸುಲಭವಾಗಲಿದೆ. ಮೋದಿ ಸರ್ಕಾರವಂತೂ ವೈಯಕ್ತಿಕ ಮಾಹಿತಿಗಳನ್ನು ಬಳಸಿಕೊಂಡು ಏನೂ ಮಾಡಬಹುದು. ವ್ಯಕ್ತಿಗಳನ್ನು, ಸಂಸ್ಥೆಗಳನ್ನು ಬ್ಲಾಕ್‌ಮೇಲ್ ಮಾಡಬಹುದು; ತನಗಾಗದವರಿಗೆ ಕಿರುಕುಳ ನೀಡಬಹುದು; ನಿರ್ನಾಮಗೊಳಿಸಬಹುದು... ಹೀಗೆ ದೇಶದ ಆಗಸದ ಮೇಲೆ ಸರ್ವಾಧಿಕಾರ ಆವರಿಸುತ್ತಿರುವಾಗ ಅಸಹಾಯಕರಾಗಿ ಒಪ್ಪಿಕೊಳ್ಳಬೇಕೆ ಅಥವಾ ಛಲದಿಂದ ಹಿಮ್ಮೆಟ್ಟಿಸಬೇಕೆ? ದೇಶದ ಜನರು ತೀರ್ಮಾನಿಸಬೇಕು.

■ ಸುರೇಶ್ ಭಟ್ ಬಾಕ್ರಬೈಲ್

(ಆಧಾರ: *4.1.2017ರ NewsClick.in* ನಲ್ಲಿ ನಾರ್ಬರ್ಟ್ ಹೇರಿಂಗ್ ಲೇಖನ: *Is Washington Behind India's Brutal Experiment of Abolishing Cash-* ಮತ್ತು ಇನ್ನಿತರ ಮೂಲಗಳು)




ಪುರಾಣದ ಪೂರಣ

ಪ್ರತಿಯೊಂದು ನಾಗರಿಕತೆ ಅಥವಾ ಸಂಸ್ಕೃತಿ, ಮುದಾಯಗಳೂ ಪ್ರಕೃತಿ ಜನ್ಯವೇ. ನಾವಿದನ್ನು ಎಂದಿಗೂ ರೆಯಲಾಗದು. ಆದರೆ, ಮನುಷ್ಯ ಪ್ರಕೃತಿಯಿಂದ ದೂರ ರಿದಂತೆ, ತನ್ನದೇ ಮನುಷ್ಯ ನಿರ್ಮಿತ ಕಟ್ಟುಪಾಡುಗಳಲ್ಲಿ ರಸ್ಪರ ಬಂಧಿಸಿಕೊಳ್ಳಲು ಯತ್ನಿಸುತ್ತಾನೆ. ಆಗಲೇ ಯಾವುದೇ ಕಾಸದ ಸೂಚನೆಗಳೇ ಇಲ್ಲದಂತಹ ಚೌಕಟ್ಟುಗಳು ರ್ಮಾಣವಾಗುತ್ತಾ ಹೋಗುತ್ತವೆ. ಅದು ಸಾಮಾಜಿಕ, ಂಸ್ಕೃತಿಕ, ಧಾರ್ಮಿಕ, ರಾಜಕೀಯ; ಹೀಗೇ ಹಲವು ಸರುಗಳುಳ್ಳ ಹಲವು ಕ್ಷೇತ್ರಗಳಾಗಿ ಮೂಡುತ್ತವೆ. ವುಗಳಲ್ಲೂ ಪ್ರಕೃತಿಯ ಮೂಲ ಸೆಲೆಯನ್ನು ಬಿಟ್ಟುಕೊಡದ ಾಗೇ, ಅಂದರೆ ಗಾಳಿಪಟದ ಸೂತ್ರವು ಒಂದು ೈಯಲ್ಲಿರುವ ಹಾಗೆ, ಪ್ರಕೃತಿಯ ನಿಯಮ ಅಥವಾ ಗುಣ ರ್ಮದ ಅರಿವಿನ ಕೈಗಿತ್ತಿದ್ದೇ ಆಗಿದ್ದರೆ, ಯಾವ ಕ್ಷೇತ್ರವೂ ೂಡ ತನ್ನ ಮೌಲಿಕವಾದಂತಹ ಸ್ಥಾನದಿಂದ ಲ್ಲಟವಾಗುವುದಿಲ್ಲ.

ಪುರಾಣಗಳೂ ಕೂಡ ಮೇಲೆ ತಿಳಿಸಿದಂತಹ ಎಲ್ಲಾ ೇತ್ರಗಳ ನೆಲೆಯಿಂದ ಮೂಡಿಬಂದಿರುತ್ತವೆ. ಮತ್ತೂ ಮುಂದುವರಿದಂತೆ ಅಧ್ಯಾತ್ಮವೆಂದು ಅಸ್ತಿತ್ವದ ಮನಶಾಸ್ತ್ರ ನ್ನೂ, ಮನುಷ್ಯನ ಮನಶಾಸ್ತ್ರವನ್ನೂ ಕೂಡ ವಿವರಿಸಲು ುತ್ನಿಸುತ್ತದೆ. ಹಾಗಾಗಿಯೇ ಯಾವುದೇ ದೇಶದ, ಯಾವುದೇ ಲದ, ಯಾವುದೇ ಸಂಸ್ಕೃತಿಯ ಪುರಾಣವನ್ನು ಬರಿಯ ಯಾವುದೇ ಒಂದು ಆಯಾಮದಿಂದ ವಿವರಿಸಲು ಧ್ಯವಾಗುವುದೇ ಇಲ್ಲ.







ಆಯಾ ಸ್ಥಳೀಯ ಆಚರಣೆ ಮತ್ತು ಸಂಪ್ರದಾಯಗಳು ರಾಣದ ಹೂರಣವನ್ನು ಬಿಚ್ಚಿಟ್ಟು ನಿಜವಾದ ಕಥೆಗಳನ್ನು ೇಳುತ್ತವೆ. ಮೌಖಿಕವಾಗಿ ಬಂದಿರುವಂತಹ ಜಾನಪದ ಷಯಗಳು, ಆಚರಣೆಗಳು ತಮ್ಮ ಮೂಲದಲ್ಲಿನ ಸ್ತವತೆಯನ್ನು ಮರೆತರೂ ಕೂಡ ಸುಳಿವನ್ನು ಳಿಸಿಕೊಂಡಿರುತ್ತವೆ.

ದೇವರು ಕೊಡುವ ಮಗು

ಮಹಾಭಾರತದಲ್ಲಿ ಕಾರಣಾಂತರಗಳಿಗೆ ಒಳಪಟ್ಟು ರಪುರುಷನಿಂದ ಜನಿಸಿದ ಕಾನೀನ ಶಿಶುವಿನ ಬಗ್ಗೆ ತಿಳಿದರೆ ಥವಾ ತನ್ನ ಗಂಡನಿಗೆ ಮಕ್ಕಳನ್ನು ಮಾಡುವ ಮರ್ಥ್ಯವಿಲ್ಲದಿರುವಾಗ ಪರ ಪುರುಷನಿಂದ ಅದೇ ಕೆಲಸಕ್ಕೆ ಾತ್ರವೇ ಕೂಡಿ ಮಕ್ಕಳನ್ನು ಪಡೆಯುವ ನಿಯೋಗ ದ್ಧತಿಯಾಗಲಿ ಅಥವಾ ದಕ್ಷಿಣ ಭಾರತದಲ್ಲಿ ದೇವರೇ ಕ್ಕಳನ್ನು ಕರುಣಿಸುವನು ಎಂದು ದೇವರ ಜಾತ್ರೆಯಲ್ಲಿ ತ್ರಿಯ ಹೊತ್ತು ಹೆಣ್ಣು ಯಾರೊಂದಿಗೋ ಮಲಗಿ ಕ್ಕಳನ್ನು ಪಡೆಯುವಂತಹ ಸಂಪ್ರದಾಯಗಳು ಹೆಣ್ತನವು ಟ್ಕಾರಕವಾಗಿದ್ದು, ಅದು ಹಾಗೆಯೇ ನಿಷ್ಫಲವಾಗಿ ೋಗಬಾರದೆಂಬ ಸದುದ್ದೇಶವೇ ಅದರಲ್ಲಿದೆ. ಹಾಗಾಗಿಯೇ ದು ಸಾಮಾಜಿಕವಾಗಿಯೂ ಆಗ ಒಪ್ಪಿತವಾಗಿತ್ತು. ಆ ಯಿಂದ ಅಥವಾ ಆ ಮೂಲದಿಂದ ಪುರುಷನೂ ತ್ತು ಸ್ತ್ರೀಯೂ ತಮಗೆ ಮತ್ತು ತಮ್ಮ ಜೀವನಕ್ಕೆ



ವರದಾನವಾಗಿರುವಂತಹ ಶಿಶ್ನವನ್ನು ಗೌರವದಿಂದಲೂ ಕಾಣುತ್ತಿದ್ದರು. ಪೂಜಿಸುತ್ತಿದ್ದರೂ ಕೂಡ.

ತಾಂತ್ರಿಕ ಸಾಧನೆಯಲ್ಲಿ ತಮ್ಮ ಶಕ್ತಿಯ ಆವಿರ್ಭಾವಕ್ಕೆ ಯೋನಿ ಪೂಜೆ ಮಾಡುವಂತೆ, ಇಲ್ಲಿ ಶಿಶ್ನಪೂಜೆ ನಡೆಯುತ್ತಿತ್ತು, ಆ ಶಿಶ್ನವು ಬಹು ಮುಗುದ. ಕಾಮುಕವಲ್ಲ, ದೇವರೇ ತೋರಿಸಿರುವಂತಹ ಕರಣ ಮತ್ತು ಮಕ್ಕಳಿಲ್ಲದ ವರಿಗೆ ತೋರಿಸಿರುವಂತಹ ದಾರಿ. ಹಾಗೆಯೇ ಇಂತಹ ಸಂಪ್ರದಾಯಗಳು ಮತ್ತೆಲ್ಲಿವೆ ಎಂದು ಹುಡುಕುತ್ತಾ ಹೋದರೆ, ರೋಮ್, ಗ್ರೀಕ್ ಮತ್ತು ಜಪಾನ್ ಹೀಗೆ ಅನೇಕ ಸಂಸ್ಕೃತಿಗಳಲ್ಲಿ ಸಿಗುವುದು. ರೋಮ್‌ನಲ್ಲಿಯೂ ಕೂಡ ಶಿಶ್ನಾರಾಧನೆ ಬಹಳ ವ್ಯಾಪಕವಾಗಿತ್ತು, ಬಚ್ಚು ಎಂದು ಕರೆಯುತ್ತಿದ್ದರು.

ಜುದೇಯದಲ್ಲಿ ಜಕರೀಯನೆಂಬ ಯಾಜಕನಿದ್ದ. ಆತನ ಹೆಂಡತಿಯ ಹೆಸರು ಎಲಿಜಬೆತ್. ಎಲಿಜಬೆತ್‌ಳ ಸ್ನೇಹಿತೆ ಯೇಸುವಿನ ತಾಯಿ ಮರಿಯಾ. ಜಕರೀಯ ಮತ್ತು ಎಲಿಜಬೆತ್ ಇಬ್ಬರೂ ಮುದುಕರಾಗುತ್ತಿದ್ದರು. ಅಲ್ಲಿನ ದೇವಾಲಯದಲ್ಲಿ ಮಕ್ಕಳಿಲ್ಲದ ಅವರಿಗೆ ದೇವರಿಂದ ಮಕ್ಕಳಾಗುವ ಸೂಚನೆ ದೇವದೂತನಿಂದ ತಿಳಿಯಿತು. ಎಲಿಜಬೆತ್ ಬಸುರಾದಾಗ ಮತ್ತೊಂದು ಪ್ರಾಂತ್ಯವಾದ ನಜರೇತ್‌ನಲ್ಲಿದ್ದ ಮರಿಯಾ ಬಹಳ ಕಾಲದ ನಂತರ ಮಕ್ಕಳಾಗುತ್ತಿರುವ ಸಂಭ್ರಮವನ್ನು ಹಂಚಿಕೊಳ್ಳಲು ಅವಳಲ್ಲಿಗೆ ಬಂದಳು. ಜುದೇಯದ ಗುಡ್ಡಗಾಡಿನಲ್ಲಿರುವಂತಹ ಅದರಲ್ಲೂ ಊರ ಹೊರಗೆ ಜನ ಸಂಪರ್ಕವಿಲ್ಲದೇ ಮಿಡಿತೆಗಳನ್ನು ತಿಂದುಕೊಂಡು, ಕೂದಲಿನ ಕಂಬಳಿಯನ್ನು ಹೊದ್ದುಕೊಂಡು ತಮ್ಮದೇ ಆದಂತಹ ಆಧ್ಯಾತ್ಮಿಕ ಸಾಧನೆಗಳಲ್ಲಿ ಮುಳುಗಿದ್ದಂತಹ ಬೈರಾಗಿಗಳು ಇರುತ್ತಿದ್ದರು. ಅವರಿಗೆ ಸಂಸಾರದ ಕಟ್ಟುಪಾಡುಗಳಿರಲಿಲ್ಲ. ದೇವರ ಪ್ರತಿನಿಧಿಗಳಂತೆ, ದೂತರಂತೆ ಅವರೇ ಮಾತಾಡುತ್ತಿದ್ದದ್ದು. ರೆಕ್ಕೆಗಳುಳ್ಳ ದೇವದೂತರು ದೇವಲೋಕದಿಂದ ಬರುತ್ತಿದ್ದವರೇನಲ್ಲ. ಅಂತವರಲ್ಲಿ ಒಬ್ಬರು ವ್ಯಾಸ ಗಾಂಧಾರಿಗೆ ಕೊಟ್ಟಂತೆ ಅಥವಾ ಕುಂತಿ ವಿವಿಧ ಪ್ರಕೃತಿಯ ಶಕ್ತಿಯೆಂದು ಕರೆಯಲಾಗುತ್ತಿದ್ದ ಪ್ರಕೃತಿಯಲ್ಲಿ ನೆಲಸಿದ್ದ ಗುಡ್ಡಗಾಡಿನ ಆಧ್ಯಾತ್ಮವ್ಯಕ್ತಿಗಳಿಂದ ಮಕ್ಕಳನ್ನು ಪಡೆದಂತೆ ಎಲಿಜಬೆತ್ ಕೂಡಾ ಮಗುವನ್ನು ಪಡೆದಳು. ಅವನೂ ಕೂಡಾ ಗುಡ್ಡಗಾಡಿನ ಆಧ್ಯಾತ್ಮ ಪುರುಷ, ಪರಮ ಬೈರಾಗಿಯಂತೆಯೇ ಜೀವನ ನಡೆಸಿದನು. ಸ್ನಾನಿಕ ಯೋವಾನ್ನನೆಂದು ಹೆಸರು ಪಡೆದನು. ಈ ಸ್ನಾನಿಕ ಯೋವಾನನ ತಾಯಿ ಎಲಿಜಬೆತ್‌ಳ ಸ್ನೇಹಿತೆ ಮರಿಯಾ ಅಲ್ಲಿಂದ ಬಂದ ಮೇಲೆ ಗರ್ಭ ಧರಿಸಿದಳು.

ದೂರ್ವಾಸರಿಂದ ತನಗೆ ತನ್ನ ಗಂಡನಿಂದ ಮಕ್ಕಳಾಗದಿದ್ದರೆ ಮಕ್ಕಳನ್ನು ಪಡೆಯಲು ಒಂದು ದಾರಿಯನ್ನು ಕಂಡುಕೊಂಡಿದ್ದ ಕುಂತಿ ಕುತೂಹಲದಿಂದ ಸೂರ್ಯ ಸಂಪ್ರದಾಯದವರನ್ನು ಗುಡ್ಡಗಾಡಿನಲ್ಲಿ ಸಂಧಿಸಿ ತನ್ನ ಮದುವೆಯ ಮುಂಚೆಯೇ ಕರ್ಣನ ಪಡೆದಳು. ಅವಳು ತಳೆದ ಕುತೂಹಲವೇ ಕನ್ಯೆ ಮರಿಯಾಳನ್ನೂ ಕಾಡಿದ್ದರೆ ಆಶ್ಚರ್ಯವಿಲ್ಲ, ಅವಳಿಗೆ ಫಲಾನುಭವಿಯಾದ ಎಲಿಜಬೆತ್‌ಳ ಸ್ನೇಹವಿತ್ತು. ಅವಳು ಅಲ್ಲಿಗೆ ಹೋಗಿದ್ದಳು ಕೂಡ. ಮುದುಕಿಯಾದ ಎಲಿಜಬೆತ್‌ಗೆ ಕಾರಣವಿತ್ತು. ಆದರೆ ಮರಿಯಾಗೆ ಯಾವುದೇ ಕಾರಣವಿರದಿದ್ದರೂ ಕುಂತಿಗಿದ್ದಂತಹ ಕುತೂಹಲವಿದ್ದಿರಬಹುದು. ಆ ಬೀಜದಾನಿಗಳಿಗೆ ಬಂದವರಿಗೆ ದಾನ ಮಾಡುವುದು ಒಂದು ಪವಿತ್ರ ಕೈಂಕರ್ಯವಷ್ಟೇ. ಹಾಗಾಗಿಯೇ ಜೋಸೆಫನೂ ಕೂಡ ಮರಿಯಾ ಗರ್ಭಿಣಿಯಾದ ವಿಷಯವನ್ನು ತಿಳಿದಾಗ ಅದನ್ನು ಹಾದರ ಎಂದು ತಿಳಿಯಲಿಲ್ಲ, ಅದು ಅಕ್ರಮ ಸಂಬಂಧದ ಫಲವಾಗಿರದೇ ಆಧ್ಯಾತ್ಮ ವ್ಯಕ್ತಿಗಳ ಪ್ರಸಾದ ಶಿಶು ಎಂಬುದನ್ನು ಅರಿತ ಮೇಲೆ ಮನ್ನಿಸಿದ ಕೂಡ.

ಕಾಲ ಬದಲಾದಂತೆ ಶಿಶ್ನರೂಪದ ನಾಗರಿಕತೆಯ ಮೆರಗು ಪಡೆದಂತೆ ಎಂದೋ ಆಚರಣೆಯಲ್ಲಿದ್ದಂತಹ ಸಾಮಾಜಿಕ ವ್ಯವಸ್ಥೆಗಳು, ಸಾಂಸ್ಕೃತಿಕ ಪದ್ಧತಿಗಳು ಪೌರಾಣಿಕ, ಆದರಲ್ಲೂ ಪವಾಡದ ರೂಪಗಳನ್ನು ಪಡೆದುಕೊಳ್ಳುತ್ತವೆ. ಶಿಷ್ಟಾಚಾರದ ಭೂತದ ಭಯವೇ ಚರಿತ್ರೆಯನ್ನು ಹಾಳುಗೆಡವಿರುವುದು ಮತ್ತು ಮೌಢ್ಯಕ್ಕೆ ತಳ್ಳಿರುವುದು.

ಹಾಗಾಗಿಯೇ ರಾಮ ಮತ್ತು ಅವನ ಸಹೋದರರು ಪಾಯಸದಿಂದ ಹುಟ್ಟುತ್ತಾರೆ. ಕರ್ಣ ಮತ್ತು ಇತರ ಪಾಂಡವರು ಮಂತ್ರದಿಂದ ಹುಟ್ಟುತ್ತಾರೆ. ದೇವರ ವಾಕ್ಯದಿಂದ ಯೇಸು ಹುಟ್ಟುತ್ತಾನೆ. ಇಂತಹ ಮೌಢ್ಯವನ್ನು ಒಡೆಯುವ ಮೌಖಿಕ ಪರಂಪರೆಯ ಒಗಟೊಂದು ಸ್ಪಷ್ಟ ದನಿ ಎತ್ತುತ್ತದೆ "ಮಂತ್ರಕ್ಕೆ ಮಾವಿನ ಕಾಯಿ ಉದುರಲ್ಲ" ಎಂದು.

ಗುಡ್ಡಗಾಡು ಪ್ರದೇಶಗಳಲ್ಲಿದ್ದ ಜನರು ಹೆಚ್ಚು ನಿಸರ್ಗಕ್ಕೆ ಹತ್ತಿರವಾಗಿಯೇ ಇರುತ್ತಿದ್ದರು. ಅರಣ್ಯಪ್ರದೇಶದ ವಸತಿಗಳಿಂದ ದೂರವಾಗಿ ಗ್ರಾಮ ಮತ್ತು ಪಟ್ಟಣಗಳನ್ನೇ ಹೆಚ್ಚು ಅವಲಂಬಿಸುವವರು ಜನರಿಗೆ ಪ್ರೀತಿಯಾಗುವಂತಹ, ಶಿಷ್ಟಾಚಾರದ ವರ್ತನೆಗಳನ್ನು ಮತ್ತು ನಿಯಮಗಳನ್ನು ರೂಪಿಸಿಕೊಳ್ಳಬೇಕು. ಏಕೆಂದರೆ ಅವರೇ ಅವರ ವಸತಿ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವುದು. ಸ್ವಾಭಾವಿಕವಾಗಿರುವಂತಹ ಪ್ರಾಣಿಗಳಲ್ಲವಲ್ಲ! ಹಾಗೆಯೇ ಶಿಷ್ಟಾಚಾರದ ಜನ ತಮ್ಮಲ್ಲಿ ಮೂಲಭೂತವಾಗಿರುವಂತಹ ಪ್ರಾಣಿಗಳ ಗುಣಗಳನ್ನು ಮುಕ್ತವಾಗಿ ಪ್ರದರ್ಶಿಸಲಾಗದೇ ಗುಪ್ತವಾಗಿ ಸಾಧಿಸಿಕೊಳ್ಳಲು ಯತ್ನಿಸುತ್ತಿದ್ದರು. ಆಗ ಅದನ್ನು ಅಕ್ರಮ ಎನ್ನಲಾಯಿತು. ಇನ್ನೂ ಮುಂದುವರಿದು, ಪಶುವಿನಂತೆ ವರ್ತಿಸಿದ, ಮೃಗೀಯ ಪ್ರವೃತ್ತಿ ತೋರಿದ ಎಂದು ನಕಾರಾತ್ಮಕವಾಗಿ ಹೇಳಲಾರಂಭಿಸಿದೆವು. ಆಶ್ಚರ್ಯ ಪಡುವಷ್ಟೇನೂ ಇಲ್ಲ, ಮನುಷ್ಯನ ಶಿಷ್ಟಾಚಾರದ ಕೃತಕತೆಯನ್ನು ಹೊರಲಾರದೇ ತನ್ನ ಸಹಜವಾದ ಪ್ರವೃತ್ತಿಯನ್ನು ತೋರಿಬಿಡುತ್ತಿದ್ದ. ಆದರೆ ಅವನ ಮೃಗೀಯ ಪ್ರವೃತ್ತಿಯ ಪ್ರದರ್ಶನದ ಅಥವಾ ಅನುಭವದ ನಂತರ ಅವನು ಅಪರಾಧ ಪ್ರಜ್ಞೆಯಲ್ಲಿ ಇರುವಂತಾಗುತ್ತಿತ್ತು.


ಯಾತಕ್ಕೆ ರಗಳೆ? ಪ್ರಕೃತಿಯ ಇತರ ಸೃಷ್ಟಿಗಳ ಕಡೆಗೆ ಮನುಷ್ಯನ ದೃಷ್ಟಿ ಹರಿಯಿತು. ಮರಗಿಡಗಳು, ಸೂರ್ಯ, ನದಿಯಂತಹ ಪ್ರಕೃತಿಯದೇ ಸಂಪನ್ಮೂಲಗಳು ಮತ್ತೊಂದು ಬಗೆಯ ಎನ್ನುವುದಕ್ಕಿಂತ ಮೃಗಗಳಿಗಿಂತ ಮತ್ತಷ್ಟು ವಿಕಸಿಕ ಗುಣಧರ್ಮಗಳನ್ನು ಹೊಂದಿದ್ದವು. ಅದೆಂದರೆ ಪ್ರತಿಫಲಾಪೇಕ್ಷೆಗಳಿಲ್ಲದೇ ತನ್ನ ಸಾಮರ್ಥ್ಯ ಮತ್ತು ಉತ್ಪನ್ನಗಳನ್ನು ಮುಕ್ತವಾಗಿ ಕೊಡುವುದು. ಕೊಡಲಿ ತಂದರೂ ಕೆಡವ ಬಂದರೂ ತನ್ನ ನೆರಳನ್ನು ನೀಡುವ ಮರವಾಗಲಿ, ಪಾಪಾತ್ಮನಾಗಲಿ, ಪುಣ್ಯಾತ್ಮನಾಗಲಿ ತನ್ನ ಸೌರಭವ ಬೀರುವ ಪುಷ್ಪವಾಗಲಿ, ಯಾವುದೇ ಎಡೆಯಾಗಲಿ, ಎಂಥದ್ದೇ ದೇಶ, ಜನವಾಗಲಿ ಬೆಳಕು ಬೀರುವ ಸೂರ್ಯನಾಗಲಿ ಮಹೋನ್ನತ ಪ್ರಾಕೃತಿಕ ಮಾದರಿಗಳಾಗಿ ನಿಂತರು. ದಾನ, ಕರುಣೆ, ಮೈತ್ರೀಭಾವಗಳನ್ನು ಇವುಗಳಿಂದ ಪಡೆಯಲಾಯಿತು.

ಇದನ್ನು ಗುರುತಿಸಿದ ಮನುಷ್ಯ ಇವೇ ಹಿತವಾದ ಪ್ರಕೃತಿಯ ಗುಣಗಳನ್ನೇ ಅಭ್ಯಾಸ ಮಾಡಲು ತೊಡಗಿದ. ಅವುಗಳನ್ನು ಮನುಷ್ಯನಲ್ಲದೇ ಇತರ ಜೀವಜಂತುಗಳ ಜೊತೆಗೂ ಅಭ್ಯಾಸ ಮಾಡಲು ತೊಡಗಿ ಮೈತ್ರೀಭಾವ ಸಾಧಿಸಲು ಯತ್ನಿಸಿದ. ಹಲವಾರು ಮಂದಿ ಇದರಲ್ಲಿ ಯಶಸ್ವಿಯನ್ನೂ ಪಡೆದರು.

ಪ್ರಕೃತಿಯಿಂದ ದೂರಾಗಿ ಮನುಷ್ಯ ಧರ್ಮಕ್ಕೆ

ಯಾವುದೇ ಆಧ್ಯಾತ್ಮಿಕ ಅಥವಾ ಧಾರ್ಮಿಕತೆಯೂ ಕೂಡ ಪ್ರಕೃತಿಯಿಂದ ಪ್ರೇರಿತವಾಗಿರುವುದೇ ಹೊರತು ಹೊರಗಿನಿಂದ ಹೇಗೆ ಸಾಧ್ಯ? ಆದರೆ ಅವುಗಳು ಕಲುಷಿತಗೊಂಡಿದ್ದು ಮನುಷ್ಯ ತನ್ನ ಗೀಳುಗಳ ಸಂಕೋಲೆಯಲ್ಲಿ ಬಂಧಿತನಾದಾಗ. ಆ ಗೀಳುಗಳು ಇಂದು ಅಧ್ಯಾತ್ಮ ಮತ್ತು ಧಾರ್ಮಿಕತೆಯನ್ನು ಪ್ರಕೃತಿಯಿಂದ ಹೊರಗೆ, ತೀರಾ ದೂರಕ್ಕೆ, ಇನ್ನೂ ತಮಾಷೆಯೆಂದರೆ ಎಂದೂ, ಎಲ್ಲೂ ನೋಡದ ಲೋಕಕ್ಕೆ ಕರೆದುಕೊಂಡು ಹೋಗಿವೆ.

ಮನುಷ್ಯನು ತನ್ನ ಮೂಲ ಪ್ರಕೃತಿಯನ್ನು ಬಿಟ್ಟು ನಾನಾ ಕಾರಣಗಳಿಂದ ಸಂಘರ್ಷಗಳಿಗೆ ಒಳಗಾದ ಕಥೆಗಳನ್ನು, ಕವಲುಗಳನ್ನು, ಶೋಷಣೆಗಳನ್ನು, ರಾಜಕೀಯಗಳನ್ನು, ಒಳನೋಟಗಳನ್ನು ವಿವರಿಸುವಂತಹ ಸೂಕ್ಷ್ಮಗಳು ಪುರಾಣಗಳಲ್ಲಿವೆ. ದೇವರ ಕಥೆಯನ್ನು ಹೇಳುತ್ತಾ ತನ್ನ ಸಮಾಜದ ಮತ್ತು ಸಮುದಾಯದ ಕಥೆಗಳನ್ನು ಅವು



ಹೇಳುತ್ತವೆ. ಪೌರಾಣಿಕ ಸನ್ನಿವೇಶಗಳನ್ನು ವಿವರಿಸುತ್ತಾ ತಾವು ಬದುಕಿದ ವ್ಯವಸ್ಥೆಯನ್ನು, ಅವ್ಯವಸ್ಥೆಯನ್ನು ಬಿಚ್ಚಿಡುತ್ತವೆ. ಯುದ್ಧ ಸಂಧಾನಗಳನ್ನು ಬಣ್ಣಿಸುತ್ತಾ ತಮ್ಮೊಳಗಿನ ಮತ್ತು ಸಾಮಾಜಿಕ ದ್ವಂದ್ವಗಳನ್ನು, ಸಂಘರ್ಷಗಳನ್ನು ತಿಳಿಸುತ್ತವೆ.

ಹಾಗಾಗಿಯೇ ಈ ಪೂರಣದ ಹೂರಣವು ಒಂದು ಪರಿಚಯಾತ್ಮಕವಾಗಿ ಪುರಾಣದ ಕತೆಗಳನ್ನು ಮತ್ತು ಒಗಟುಗಳನ್ನು ವಿವಿಧ ನೆಲೆಗಟ್ಟುಗಳಿಂದ ವಿಶ್ಲೇಷಿಸಲು ಸಾಧ್ಯವಾಗುವಂತಹ ಲೇಖನ ಮಾಲೆ ಇದಾಗಬೇಕಿತ್ತು ಎಂಬುದೇ ಉದ್ದೇಶವಾಗಿತ್ತು. ಹಲವು ಸೂಕ್ಷ್ಮ ಮತ್ತು ಸ್ಥೂಲ ವಿಚಾರಗಳನ್ನು ಪ್ರಸ್ತಾಪಿಸುತ್ತಾ ಬರೀ ಪರಿಚಯವಷ್ಟೇ ಆಯಿತು ಎಂಬುದಷ್ಟೇ ನನಗೆ ಅನ್ನಿಸುತ್ತದೆ. ಏಕೆಂದರೆ ಗ್ರೀಕ್, ರೋಂ, ಬ್ಯಾಬಿಲೋನಿಯನ್, ಅಸ್ಸಿರಿಯನ್, ಸುಮೇರಿಯನ್, ಈಜಿಪ್ಟ್ ಇವುಗಳೆಲ್ಲದರ ಪೌರಾಣಿಕ ವಿಷಯಗಳ ಪ್ರಭಾವವೂ ನಮ್ಮ ಭಾರತದ ಪುರಾಣಗಳ ಮೇಲಾಗಿವೆ. ಅಂತೆಯೇ ಪುರಾಣಗಳ ನಿರೂಪಣಾಕಾರರು ತೀವ್ರ ಚಟುವಟಿಕೆಯಲ್ಲಿ ತೊಡಗಿದ್ದಾಗ ಬೌದ್ಧ, ಚಾರ್ವಾಕ, ಜೈನ, ಕ್ರೈಸ್ತ ಮತ್ತು ಇಸ್ಲಾಂ ಧರ್ಮ ಮತ್ತು ಸಂಸ್ಕೃತಿಗಳು ಹರಡುತ್ತಿದ್ದಂತಹ ಸಂದರ್ಭಗಳಲ್ಲಿಯೂ ಪುರಾಣದ ಕತೆಗಳು ಮಗ್ಗುಲುಗಳನ್ನು ಬದಲಾಯಿಸಿದವು.

ಪುರಾಣದ ಉತ್ಖನನ

ಶ್ರದ್ಧಾ ನಂಬಿಕೆ ಎಂಬ ಕಣ್ಕಟ್ಟಾಟವನ್ನು ಬಿಟ್ಟು ಪೂರ್ವಾಗ್ರಹಗಳಿಲ್ಲದೇ ನಮ್ಮದೇ ವಿಷಯವನ್ನು ನಾವೇ ವಿಶ್ಲೇಷಿಸಿಕೊಳ್ಳಲು ಸಾಧ್ಯವಾಗುವವರೆಗೂ ಭಾರತದ ಪುರಾಣಗಳು ಮೌಢ್ಯದ ಕೊಳಗಗಳಲ್ಲಿ ಕೊಳೆಯುತ್ತಾ ಹೋಗುತ್ತವೆ. ಅವುಗಳ ಫಲವತ್ತಾದ ಬೀಜಗಳು ಜಾತಿವಾದಿಗಳ, ಪುರೋಹಿತರ, ಅರ್ಚಕರ, ಧರ್ಮಾಂಧರ- ಹೀಗೆ ಯಾರ್ಯಾರಿಗೋ ಆಹಾರವಾಗಿ ಹೋಗುತ್ತವೆ.

ಬಿ.ವಿ.ವಿದ್ಯಾನಂದ ಶೆಣೈ ಎಂಬುವರ ಭಾರತ ದರ್ಶನ ಎಂಬ ಮಹಾನ್ ಗ್ರಂಥ ರಾಷ್ಟ್ರೋತ್ಥಾನ ಸಾಹಿತ್ಯದ ಕಾಣ್ಕೆ. ಈ ಪುಸ್ತಕದಲ್ಲಿ ಭಾರತದ ದರ್ಶನವು ಬರಿಯ ಮೌಢ್ಯ ಮತ್ತು ವೈದಿಕ ದೃಷ್ಟಿಕೋನಗಳಿಂದ ಮಾತ್ರವೇ ಆಗುತ್ತದೆ. ಇವರ ಪಾಲಿಗೆ ಯಾವ ಮಂಟೇ ಸ್ವಾಮಿ ಇಲ್ಲ ಮಹದೇಶ್ವರ ಇಲ್ಲ, ಜನಪದ ಎಂಬುದಾಗಲಿ, ಈ ನೆಲದ ಮಣ್ಣಿನ ಘಮಲಾದ ಮೌಖಿಕ ಪರಂಪರೆಯ ಮಾತೇ ಇಲ್ಲ. ಇಂತಹ ಏಕಮುಖ ವಿಶ್ಲೇಷಣೆ ಮತ್ತು ಪರಿಚಯಗಳಿಂದಾಗಿಯೇ ನಮ್ಮ ಸಮಕಾಲಿನ ಯುವಕರು ಮಾರುಹೋಗುತ್ತಿರುವುದು. ಏಕೆಂದರೆ ಅವರಿಗೆ ಬೇರೆಯದನ್ನು ನೋಡಲು ಪುರುಸೊತ್ತಿಲ್ಲ, ನಮಗೂ ಹೇಳಲು ವ್ಯವಧಾನವಿಲ್ಲ.

ಒಟ್ಟಾರೆ ಕೊನೆಯದಾಗಿ ಹೇಳಬೇಕೆಂದರೆ, ಪುರಾಣವೆಂಬುದು ಯಥಾವತ್ತಾಗಿ ತೆಗೆದುಕೊಂಡರೆ ಮಾತ್ರವೇ ಪುಂಡರ ಗೋಷ್ಠಿಯಾಗುತ್ತದೆಯೇ ಹೊರತು, ಅಧ್ಯಯನದ ವಸ್ತುವಾಗಿ ತೆಗೆದುಕೊಂಡರೆ ನಾವು ಬಾಳಿ ಬದುಕಿದ ಮನೆಯ ಉತ್ಖನನದಲ್ಲಿ ನಮ್ಮ ಪೂರ್ವಜರು ನಮಗಾಗಿ ಬಿಟ್ಟು ಹೋಗಿರುವಂತಹ ಸಂಪತ್ತನ್ನು ಹೊರದೆಗೆಯಬಹುದು. ಪುರಾಣದ ಹೂರಣದೊಂದಿಗೆ ಪೂರಣವನ್ನೂ ಕಾಣಬಹುದು.

■ (ಮುಗಿಯಿತು)

‘ಮೈ ಮೇಟಿಂಗ್ ಹೋಲ್’ ಎನ್ನುವ ಬೃಹಸ್ಪತಿ ಮೋದಿ

ಕಳೆದ ಸಂಚಿಕೆಯಲ್ಲಿ ಪ್ರವೀಣ್ ಎಸ್ ಶೆಟ್ಟಿ ಅವರು ಬರೆದಿರುವಂತೆ ಸಹರಾ ಡೈರಿಯಲ್ಲಿ ನಮೂದಿಸಲಾಗಿರುವ ಲಂಚ ಪಡೆದಿರುವವರ ಹೆಸರುಗಳಾದ ಕಾಂಗ್ರೆಸ್ಸಿನ ಶೀಲಾ ದೀಕ್ಷಿತ್ ಅಥವಾ ವೀರಪ್ಪ ಇವರಲ್ಲಿ ಒಬ್ಬರಾದರೂ ಆತ್ಮಹತ್ಯಾ ಬಾಂಬರ್‌ಗಳಾಗಿ ಸಹರಾ ಕಂಪನಿಯಿಂದ ತಾವು ಪಡೆದಿರುವ ಲಂಚವನ್ನು ಒಪ್ಪಿಕೊಂಡು ಸಹರಾ ಡೈರಿಯಲ್ಲಿ ತಮ್ಮೊಂದಿಗಿರುವ ಸಹ-ಲಂಚಕೋರ ನರೇಂದ್ರ ಮೋದಿಯನ್ನೂ ಎಳೆದುಕೊಂಡು ಹರಾಕಿರಿ ಮಾಡಿಕೊಂಡರೆ ಅದರಿಂದ ಈ ಎರಡು ಕಾಂಗ್ರೆಸ್ಸಿನವರಿಗೆ ವೈಯಕ್ತಿಕವಾಗಿ ಕೆಟ್ಟದಾದರೂ



ದೇಶಕ್ಕೆ ಒಳ್ಳೆಯದಾಗುತ್ತದೆ ಎಂಬುದು ಸರಿ.

ಇನ್ನು ಈ ನರೇಂದ್ರ ಮೋದಿಯ ಅಲ್ಪಬುದ್ಧಿಯ ಬಗ್ಗೆಯೂ ಲೇಖಕರು ಹೇಳಿರುವುದು ಸರಿಯಾಗಿದೆ. ಇತರ ನೇತಾರರ ಭಾಷೆ ಹಾಗೂ ಉಚ್ಚಾರವನ್ನು ಅಪಹಾಸ್ಯ ಮಾಡುವುದನ್ನೇ ಹಾಸ್ಯಪ್ರಜ್ಞೆ ಎಂದು ಮೋದಿ ತಪ್ಪಾಗಿ ತಿಳಿದಿರುವಂತಿದೆ. ಹಿಂದಿನ ಎಲ್ಲಾ ಪ್ರಧಾನಿಗಳು ತಮ್ಮ ವಿರೋಧ ಪಕ್ಷದ ನೇತಾರರಿಗೆ ಯಾವಾಗಲೂ ಗೌರವ ಕೊಡುತ್ತಿದ್ದರು. ಅವರು ತಮ್ಮ ಭಾಷಣದಲ್ಲಿ ಎಂದೂ ಸಭ್ಯತೆಯ ಎಲ್ಲೆ ಮೀರಿ ಎದುರಾಳಿಯ ವ್ಯಕ್ತಿತ್ವದ ಪರಿಹಾಸ್ಯ ಎಂದೂ ಮಾಡುತ್ತಿರಲಿಲ್ಲ. ಆದರೆ ಈ ಮೋದಿ ಅಸಭ್ಯವಾಗಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ಹಿಂದಿ ಉಚ್ಚಾರದ ಪರಿಹಾಸ್ಯ ಮಾಡಿದ್ದಾನೆ. ನೋಟು ರದ್ದತಿಯ ತನ್ನ ಶತಮೂರ್ಖತನವನ್ನು ವೇದಿಕೆಗಳಲ್ಲಿ ಮುಚ್ಚಿಡಲು ಈ ಮೋದಿ ಪರಿಹಾಸ್ಯದ ಮೊರೆ ಹೋಗಿದ್ದಾನೆ ಮತ್ತು ಬಂಗಾಳದಲ್ಲಿ ಇತ್ತೀಚಿಗೆ ತನ್ನ ಭಕ್ತ ಕುರಿಗಳ ಒಂದು ಸಭೆಯಲ್ಲಿ ಮಮತಾ ಬ್ಯಾನರ್ಜಿಯವರ ಬಂಗಾಳಿ ಉಚ್ಚಾರದ ಹಿಂದಿಯನ್ನೇ ಅಪಹಾಸ್ಯ ಮಾಡುವ ಅಲ್ಪತನ ತೋರಿದ್ದಾನೆ. ‘ಪರಿವರ್ತನ್’ ಎಂಬ ಶಬ್ದವನ್ನು ಮಮತಾರವರು ‘ಪೊರಿವರ್ತನ್’ ಎಂದು ಉಚ್ಚರಿಸಿದನ್ನೇ ಮೋದಿ ತನ್ನ ಭಾಷಣದಲ್ಲಿ ಅನೇಕ ಸಾರಿ ಅಪಹಾಸ್ಯ ಮಾಡಿ ತೋರಿಸಿದನು. ಈತನ ಈ ಅಲ್ಪಬುದ್ಧಿ ಅದೇನೋ ದೊಡ್ಡ ಪರಾಕ್ರಮ ಎಂಬಂತೆ ಕೇಸರಿ ಭಕ್ತರು ಮೋದಿಯ ಈ ಭಾಷಣವನ್ನು ಯೂಟ್ಯೂಬ್‌ನಲ್ಲಿ ಅಪ್ಲೋಡ್ ಮಾಡಿ ‘ಮಮತಾ ಬ್ಯಾನರ್ಜಿ ಮಿಮಿಕ್ರಿ ಬೈ ಮೋದಿ’ ಎಂದು ಹೆಸರು ಕೊಟ್ಟು ತಮ್ಮ ವಿಕೃತ ಸಂತೋಷ ಮೆರೆದಿದ್ದಾರೆ.


ಮೂಲತಃ ಬಂಗಾಳಿಗಳು ವಿಪರೀತ ಸ್ವಾಭಿಮಾನಿಗಳು ಹಾಗೂ ತಮ್ಮ ಭಾಷೆಯ ಬಗ್ಗೆ ಅಪರಿಮಿತ ಅಭಿಮಾನವುಳ್ಳವರಾಗಿದ್ದಾರೆ. ಹಾಗಾಗಿ ಮೋದಿಯ ಈ ಅವಮಾನಕರ ಅಲ್ಪಬುದ್ಧಿ ಸಮಸ್ತ ಬಂಗಾಳಿಗಳನ್ನು ತುಂಬಾ ಕೆರಳಿಸಿದೆ.

ಯಾಕೆಂದರೆ ಬಂಗಾಳಿ ಭಾಷೆಯ ವ್ಯಾಕರಣದಂತೆಯೇ ‘ಅ’ ಕಾರವು ‘ಒ’ ಕಾರವಾಗಿ ಉಚ್ಚರಿಸಲ್ಪಡುತ್ತದೆ. ಅದುವೇ ಆ ಭಾಷೆಯ ಸೌಂದರ್ಯ. ಭಾರತ ಹಾಗೂ ಬಾಂಗ್ಲಾ ದೇಶದ ಎಲ್ಲಾ ಬಂಗಾಳಿಗಳೂ ಈ ರೀತಿಯೇ ಉಚ್ಚರಿಸುವುದು. ಅದರಲ್ಲಿ ಪರಿಹಾಸ್ಯ ಮಾಡುವುದು ಏನೂ ಇಲ್ಲ. (ಅಸ್ಸಾಂ ಭಾಷಿಕರೂ ಹೀಗೆಯೇ ಉಚ್ಚರಿಸುವುದು). ಭಾರತದ ಪ್ರತಿಯೊಂದು ರಾಜ್ಯದವರೂ ಇಂಗ್ಲಿಷ್ ಅಥವಾ ಹಿಂದಿ ಮಾತನಾಡುವಾಗ ಅವರವರ ಮಾತೃಭಾಷೆಗೆ ಅನುಗುಣವಾಗಿ ವಿಶಿಷ್ಟ ಉಚ್ಚಾರದಲ್ಲಿಯೇ ಇಂಗ್ಲಿಷ್-ಹಿಂದಿ ಮಾತನಾಡುತ್ತಾರೆ. ಅದನ್ನು ಇತರ ರಾಜ್ಯದ ಸಭ್ಯರು ಎಂದೂ ಪರಿಹಾಸ್ಯ ಮಾಡುವುದಿಲ್ಲ. ಆದರೆ ಈ ಮೋದಿ ತನ್ನ ಪ್ರಧಾನಿ ಹುದ್ದೆಯ ಘನತೆಯನ್ನೂ ಮರೆತು ಬೀದಿ ಬದಿಯ ಪುಡಿ ನೇತಾರನಂತೆ ಮಮತಾ ಬ್ಯಾನರ್ಜಿಯವರ ಹಿಂದಿ ಉಚ್ಚಾರವನ್ನು ಅಪಹಾಸ್ಯ ಮಾಡಿದ್ದಾನೆ.

ವಿಪರ್ಯಾಸವೆಂದರೆ ಸ್ವತಃ ಮೋದಿಯ ಹಿಂದಿ ಹಾಗೂ ಇಂಗ್ಲಿಷ್ ಉಚ್ಚಾರವೇ ಸರಿಯಿಲ್ಲ. ಎಲ್ಲಾ ಅರೆ-ಸಾಕ್ಷರ ಗುಜರಾತಿಗಳಂತೆ ಈತನಿಗೂ ಶ-ಕಾರ ಮತ್ತು ಆ-ಕಾರ ಸರಿಯಾಗಿ ಉಚ್ಚಾರ ಮಾಡಲು ಬರುವುದಿಲ್ಲ. ಎಲ್ಲಾ ಗುಜರಾತಿಗಳಂತೆ ಈತ ಸಹ ‘ಶೋಷಣೆ, ಸುಷ್ಮಾ ಸ್ವರಾಜ್’ ಈ ಶಬ್ದಗಳನ್ನು ‘ಸೋಸನ’ ಮತ್ತು ‘ಸುಸ್ಮಾ ಸ್ವರಾಜ್’ ಎನ್ನುತ್ತಾನೆ. ಇಂಗ್ಲಿಷಿನ ‘ರ್‍ಯಾಲಿ, ರ್‍ಯಾಕೆಟ್, ರೈಸ್’ **(Rally, Racket, Rice)** ಈ ಶಬ್ದಗಳನ್ನು ರೇಲಿ, ರೋಕೆಟ್, ರೆಯಿಸ್ ಎಂದು ತಪ್ಪಾಗಿ ಗುಜರಾತಿ ಮಾದರಿಯಲ್ಲಿ ಮೋದಿ ಉಚ್ಚರಿಸುತ್ತಾನೆ. ‘ಮೈ ಮೀಟಿಂಗ್ ಹಾಲ್’ ಎಂಬ ಶಬ್ದವನ್ನು ‘ಮೈ ಮೇಟಿಂಗ್ ಹೋಲ್’ ಎನ್ನುತ್ತಾನೆ ಬೃಹಸ್ಪತಿ ಮೋದಿ. ಈ ನರೇಂದ್ರ ಮೋದಿ ದೇಶದ ಪ್ರಧಾನಿಯಾದ ಮೇಲೂ ವೇದಿಕೆಯ ಮೇಲೆ ಬಾಲಿಶವಾಗಿ ಟಿವಿಯ ಒಬ್ಬ ಸ್ಟ್ಯಾಂಡ್-ಅಪ್ ಕಾಮೆಡಿಯನ್ ತರಹ ವರ್ತಿಸುವುದನ್ನು ಬಿಟ್ಟಿಲ್ಲ ಎಂಬುದು ನಮ್ಮ ದೇಶದ ಜನರೆಲ್ಲಾ ತಲೆತಗ್ಗಿಸುವಂತಹ ವಿಚಾರ. ಅದೇ ಪಕ್ಷದ ಅಡ್ವಾಣಿಯವರು ಪ್ರಧಾನ ಮಂತ್ರಿ ಆಗಿದ್ದರೆ ಬಹುಶಃ ಮೋದಿಯಷ್ಟು ಅಸಭ್ಯವಾಗಿ ಹಾಗೂ ಬಾಲಿಶವಾಗಿ ವರ್ತಿಸುತ್ತಿರಲಿಲ್ಲ. ಮೇಲಾಗಿ ಅಡ್ವಾಣಿಯವರು ಅರ್ಥಶಾಸ್ತ್ರವನ್ನು ಅನರ್ಥ-ಶಾಸ್ತ್ರ ಎಂದು ತಿಳಿದು ನೋಟು ರದ್ದತಿಯನ್ನು ಜನರ ಮೇಲೆ ಹೇರಿ ಇಡೀ ದೇಶದ ಜನರ ಜೀವನ ದುರ್ಭರ ಮಾಡುತ್ತಿರಲಿಲ್ಲ ಎಂಬುದೂ ನಿಜ.

ಮಮತಾ ಬ್ಯಾನರ್ಜಿಯವರೇ ಮೊನ್ನೆ ಹೇಳಿರುವಂತೆ ಬಿಜೆಪಿ ಪಕ್ಷದ ಅಡ್ವಾಣಿ ಅಥವಾ ಯಾವುದಾದರೂ ಪ್ರಬುದ್ಧ ನೇತಾರ ಪ್ರಧಾನ ಮಂತ್ರಿ ಪದವಿಯನ್ನು ವಹಿಸಿಕೊಂಡು ಈ ಮೋದಿಯನ್ನು ಗುಜರಾತಿಗೆ ಮರಳಿ ರವಾನಿಸುವುದು ದೇಶದ ಹಿತದ ದೃಷ್ಟಿಯಿಂದ ಉತ್ತಮ. ಅದಕ್ಕೆ ಕಾಲ ಸನ್ನಿಹಿತ ಆಗಿರುವಂತೆ ಕಾಣುತ್ತಿದೆ.


- ಅಭಿಷೇಕ್ ಪಡಿವಾಳ್, ಸುಳ್ಯ



ಎರಡನೇ ಕುತಂತ್ರಕ್ಕೆ ಹಾದಿ ಸುಗಮ

ಕೆಲ ವರ್ಷಗಳ ಹಿಂದೆ ದೇಶದಲ್ಲಿ ಎರಡನೇ ಸ್ವಾತಂತ್ರ್ಯ ಸಂಗ್ರಾಮ ಭಾರೀ ಸುದ್ದಿ ಮಾಡಿತ್ತು. ಅದೇ ಅಣ್ಣಾ ಹಜಾರೆ ಮುಂದಾಳತ್ವದಲ್ಲಿ ಹುಟ್ಟಿದ ಭ್ರಷ್ಟಾಚಾರ ವಿರೋಧಿ ಚಳವಳಿ. ದೇಶದಲ್ಲಿ ಹಳ್ಳಿ ನಗರಗಳನ್ನೂ ಬಿಡದೇ ಎಲ್ಲೆ… ಸರ್ವವ್ಯಾಪಿಯಾಗಿ ಹಬ್ಬಿರುವ ಭ್ರಷ್ಟಾಚಾರದ ವಿರುದ್ಧ ಎ… ಣ್ಣಾ ಹೂಂಕಾರಕ್ಕೂ ನೊಂದ ದೇಶದ ಜನತೆ ಸರಿಯಾಗಿಯೇ… ಸ್ಪಂದಿಸಿದ್ದರಾದರೂ ಈ ಎರಡನೇ ಸ್ವಾತಂತ್ರ್ಯ ಸಂಗ್ರಾಮ… ನಂತರದ ದಿನಗಳಲ್ಲಿ ತನ್ನ ಮೊದಲಿನ ಆರಂಭಿಕ ಜೋಷನ್ನು… ಉಳಿಸಿಕೊಳ್ಳಲಿಲ್ಲವೆಂಬುದು ಬೇರೆ ವಿಚಾರ. ಆದರ… ದೇಶದಲ್ಲಿ ನಿಜವಾದ ಎರಡನೇ ಸ್ವಾತಂತ್ರ್ಯ ಸಂಗ್ರಾಮ… ಭವಿಷ್ಯದಲ್ಲಿ ಎದುರಾಗಲಿದೆಯೆಂಬ ಸೂಚನೆಯನ್ನು ಕೆಲವರು… ಕಾಣುತ್ತಿದ್ದಾರೆ. ಯಾಕೆಂದರೆ ಇದಕ್ಕೆ ಮುನ್ಸೂಚನೆಯಾಗಿ… ಈ ದೇಶವು ಈಗ ಎರಡನೇ ಪರತಂತ್ರ ವ್ಯವಸ್ಥೆಯಲ್ಲಿ… ಸಿಕ್ಕಿಕೊಳ್ಳುವ ಲಕ್ಷಣಗಳು ನಿಚ್ಚಳವಾಗಿ ಭ್ರಮೆಯ ಮಂಕು… ಕವಿದ ಕೆಲವರನ್ನು ಬಿಟ್ಟು (ಅಂತವರಿಗೂ ಇದೀಗ… ಜ್ಞಾನೋದಯವಾಗುತ್ತಿರುವ ಶುಭ ಸುದ್ದಿಯಿದೆ) ಎಲ್ಲರಿಗೂ… ಗೋಚರಿಸತೊಡಗಿವೆ.

ಒಬ್ಬನಿಗೆ ತಾನು ಒಳ್ಳೆಯವನಲ್ಲವೆಂದು ತನಗೆ ಖಾತ್ರಿಯಿದ್ದರೆ ಆತ ತನ್ನ ಒಳ್ಳೆಯತನದ ಬಗ್ಗೆ ಉತ್ಪ್ರೇಕ್ಷಿತವಾಗಿ… ಅಥವ ನಾಟಕೀಯವಾಗಿ ಹೆಚ್ಚೆಚ್ಚು ಬಿಂಬಿಸಿಕೊಳ್ಳ… ಹೋಗುತ್ತೇನೆ. ರಾಜಕೀಯ ನಾಯಕನೊಬ್ಬ ಜನಾನುರಾಗಿ…



‘ಮಾತಂಗ ಸಾಹಿತ್ಯ ಪರಿಷತ್ತು’-ಒಂದು ಸ್ಪಷ್ಟೀಕರಣ

ಮಾನ್ಯ ಸಂಪಾದಕರು,

ದಿನಾಂಕ **4** ಜನವರಿ **2017**ರ **14, 15** ಮತ್ತು **16**ನೇ ಪುಟಗಳಲ್ಲಿ ಸುದೀರ್ಘವಾಗಿ ಪ್ರಕಟವಾಗಿರುವ ‘ಮಾತಂಗ ಸಾಹಿತ್ಯ ಪರಿಷತ್ತು’ ಕೇರೀಕರಣ- ಎಂಬ ಲೇಖನದ ಬಗೆಗೆ ಮಾತಂಗ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ಕೆಲವು ಸ್ಪಷ್ಟೀಕರಣ ಕೊಡಬೇಕಾಗಿದೆ. ಡಾ. ವಡ್ಡಗೆರೆ ನಾಗರಾಜಯ್ಯನವರು ‘ಕಪೋಲ ಕಲ್ಪಿತ’ ವರದಿ ರೂಪದ ಲೇಖನಕ್ಕೆ ಪ್ರತಿಕ್ರಿಯೆ ನೀಡಬೇಕಾಗಿರುವುದು ಅನಿವಾರ್ಯ. ಮೊದಲಿಗೆ ‘ಮಾತಂಗ ಸಾಹಿತ್ಯ ಪರಿಷತ್ತು’ ಯಾವುದೇ ರಾಜಕೀಯ ಪಕ್ಷದ ಪ್ರಭಾವ-ಪ್ರೇರಣೆಯಿಂದಾಗಲಿ ಮತ್ತು ಯಾವುದೋ ಸಂಘಟನೆಯ ಹಿತಾಸಕ್ತಿಯಿಂದಾಗಲಿ ಮತ್ತು ಯಾವುದೇ ಮಠದ ಪ್ರತ್ಯಕ್ಷ ಪರೋಕ್ಷ ಬೆಂಬಲದಿಂದಾಗಲಿ ಜನ್ಮ ತಾಳಿರುವುದಿಲ್ಲ. ಇದರ ಅರಿವು ಇಲ್ಲದೆ ಏನೆಲ್ಲ ಮಾತನಾಡುವ ಅಗತ್ಯ ಲೇಖಕರಿಗೆ ಬೇಕಿಲ್ಲ.

2015ರ ನವಂಬರ್ ತಿಂಗಳಲ್ಲಿ ಮೈಸೂರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಎರಡು ದಿನಗಳ ರಾಷ್ಟ್ರಮಟ್ಟದ ವಿಚಾರಸಂಕಿರಣ ಏರ್ಪಡಿಸಿದ್ದು ಸರಿಯಷ್ಟೆ. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನಾನು ಮತ್ತು ಮೈಸೂರಿನ, ತುಮಕೂರಿನ ಗೆಳೆಯರು ಸೇರಿ ಮಾತಂಗ ಸಮುದಾಯದ ಕವಿಗಳು, ಲೇಖಕರನ್ನು ಒಗ್ಗೂಡಿಸುವ ಹಂತದಲ್ಲಿ ಸಾಹಿತ್ಯ ಸಂಘಟನೆ ಹುಟ್ಟುಹಾಕಬೇಕೆಂದು ಒಂದೆಡೆ ಕೂತು ಚರ್ಚಿಸಿದೆವು ಮತ್ತು ಮಾತಂಗ ಸಾಹಿತ್ಯ ಪರಿಷತ್ತು ಎನ್ನುವ ಘಟಕ ಪ್ರಧಾನವಾಗಿ ಮಾತಂಗ ಸಮುದಾಯ ಅಥವಾ ಮಾದಿಗ- ಆದಿ ಜಾಂಬವ ಸಮುದಾಯದ ಹಿನ್ನೆಲೆಯಲ್ಲಿ ಮಹತ್ವದ ಕವಿಗಳು ಲೇಖಕರಿಗೆ ಪ್ರಾತಿನಿಧ್ಯ ಎಲ್ಲಾ ಸಿಗದಿರುವುದನ್ನು ಅರಿತೇ ಈ ಸಾಹಿತ್ಯ ಪರಿಷತ್ತನ್ನು ಹುಟ್ಟುಹಾಕಲು ನಿರ್ಣಯಿಸಿದೆವು. ಹಾಗಂತ ‘ಮಾತಂಗ ಸಾಹಿತ್ಯ ಪರಿಷತ್ತು’ ಎನ್ನುವ ಘಟಕ ‘ಕನ್ನಡ ಸಾಹಿತ್ಯ ಪರಿಷತ್ತು’, ‘ಶರಣ ಸಾಹಿತ್ಯ ಪರಿಷತ್ತು’ ಮತ್ತು ‘ದಲಿತ ಸಾಹಿತ್ಯ ಪರಿಷತ್ತಿ’ಗೆ ಪರ್ಯಾಯವಾಗಿಯಾಗಲಿ, ವಿರೋಧವಾಗಲಿ ಹುಟ್ಟಿಕೊಂಡದ್ದಲ್ಲ ಮತ್ತು ಏಕಾಏಕಿ ಒಬ್ಬನೇ ವ್ಯಕ್ತಿ ತೆಗೆದುಕೊಂಡ ನಿರ್ಣಯವಲ್ಲ.

ಈ ಬಗೆಗೆ ಚರ್ಚಿಸಲು ಮೈಸೂರು, ತುಮಕೂರು ಮತ್ತು ಚಿತ್ರದುರ್ಗದಲ್ಲಿ 5-6 ಸಭೆ ನಡೆಸಲಾಯಿತು. ಡಾ.ಎಲ್. ಹನುಮಂತಯ್ಯ, ಕೆ.ಬಿ. ಸಿದ್ದಯ್ಯ ಮತ್ತು ಪ್ರೊ.ಹೆಚ್. ಗೋವಿಂದಯ್ಯ ಪ್ರೊ. ಟಿ.ಎಲ್ಲಪ್ಪ ಭೂತಯ್ಯ ಮುಂತಾದವರೊಂದಿಗೆ ನಾವು ಕೆಲವರು ಚರ್ಚಿಸಿ, ಗಂಭೀರ ಚಿಂತನೆಯ ಹಿನ್ನೆಲೆಯಲ್ಲಿ ಮಾತಂಗ ಸಾಹಿತ್ಯ ಪರಿಷತ್ತು ಕಟ್ಟಲು ಮುಂದಾದೆವು. ಇದರಲ್ಲಿ ಸಾಹಿತಿಗಳು, ಸಾಹಿತ್ಯಾಸಕ್ತರು, ಪ್ರಾಧ್ಯಾಪಕರು ಮತ್ತು ಸಮಾನ ಮನಸ್ಕರ ತಂಡವು ಸೇರಿದೆ. ರಾಜಕೀಕರಣಗೊಳಿಸುವುದಾಗಲಿ, ಕೇಸರೀಕರಣಗೊಳಿಸುವುದಾಗಲೀ, ಕೇರೀಕರಣಗೊಳಿಸುವುದಾಗಲಿ- ಈ ಯಾವುದೇ ವಸ್ತು ವಿಷಯ ಕುರಿತು ಚರ್ಚಿಸಲಿಲ್ಲ.

ಲೇಖಕರು ಆರೋಪಿಸಿರುವ ಗಂಭೀರ ವಿಷಯವೆಂದರೆ ಈ ಸಂಘಟನೆ ಕಟ್ಟಿದ ಯಾರೂ ಮಹತ್ವದವರಲ್ಲ, ಯಾವುದೇ ಚಳವಳಿಯಲ್ಲಿ ಗುರುತಿಸಿಕೊಂಡಿಲ್ಲ, ಎನ್.ಜಿ.ಓ. ಏಜೆಂಟ್- ಮುಂತಾದ ವ್ಯಕ್ತಿಗಳು ಮತ್ತು ವಿಷಯ ಕುರಿತು ವಿಷ ಕಾರಿದ್ದಾರೆ. ಈ ಮಾತಂಗ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಯಾವುದೇ ಹಿನ್ನೆಲೆ ಇಲ್ಲದವರೆಂದು ಗುರುತಿಸಿದ್ದಾರೆ. ಅವರ ಹೇಳಿಕೆಗಳ ಅಗತ್ಯ ನಮಗಿಲ್ಲ. ನಾನು ಕರ್ನಾಟಕದ 6 ಜಿಲ್ಲೆಗಳಲ್ಲಿ 34 ವರ್ಷಗಳ ಕಾಲ ಕನ್ನಡ ಪ್ರಾಧ್ಯಾಪಕ, ಪ್ರಾಂಶುಪಾಲನಾಗಿ ಸೇವೆ ಸಲ್ಲಿಸಿ- ಕಳೆದ ಮೂರು ವರುಷದ ಹಿಂದೆ ನಿವೃತ್ತನಾಗಿರುವೆ. ಮತ್ತೆ ಡಾ. ಶಿವಾನಂದ ಕೆಳಗಿನಮನಿ ಅವರು ಕುವೆಂಪು ವಿ.ವಿ. ಕನ್ನಡ ಪ್ರಾಧ್ಯಾಪಕರು. ಡಾ. ಎಂ.ಶ್ರೀನಿವಾಸಮೂರ್ತಿ, ಮೈಸೂರು ವಿ.ವಿ.- ಬಾಬು ಜಗಜೀವನರಾಂ ಅಧ್ಯಯನ ಕೇಂದ್ರದ ಸಹ-ಪ್ರಾಧ್ಯಾಪಕರು. ಡಾ. ಶರಣಪ್ಪ ಮಾಳಗಿ ಅವರು ಗುಲ್ಬರ್ಗ ವಿ.ವಿ.ಯ ಕನ್ನಡ ಪ್ರಾಧ್ಯಾಪಕರು. ಕಾರ್ಯದರ್ಶಿಯಾಗಿರುವ ಶ್ರೀ ಸಿ.ಎಸ್. ಪಾರ್ಥಸಾರಥಿಯವರು ದಲಿತ ಚಳವಳಿಯ ಪ್ರಮುಖರು. ಶ್ರೀ ದಾನಪ್ಪ ಸಿ. ನಿಲೋಗಲ್ ಅವರೂ ಕೂಡ ಕವಿ, ಹೋರಾಟಗಾರ- ದಲಿತ ಸಂಘರ್ಷ ಸಮಿತಿಯ… ಸಂಸ್ಥಾಪಕರಲ್ಲಿ ಒಬ್ಬರು. ಹೀಗೆಯೇ ಮಾತಂಗ ಸಾಹಿತ್ಯ… ಪರಿಷತ್ತಿನಲ್ಲಿ ಕಾರ್ಯಕಾರಿಣಿಯಲ್ಲಿ ದುಡಿಯುತ್ತಿರುವವರು… ನಮಗೆ ಅಜೆಂಡಾಗಳಿಗಿಂತ, ಅಸ್ಮಿತೆಗಳ ಹುಡುಕಾಟಕ್ಕಿಂತ… ಮತ್ತು ‘ಐಡೆಂಟಿಟಿಯ’ ಹಪಾಹಪಿಕೆಗಿಂತ ಮಾತಂಗ… ಸಮುದಾಯದ ಪ್ರಮುಖ ಲೇಖಕರು, ಕವಿಗಳು… ಕಲಾವಿದರನ್ನು ಈ ನಾಡಿಗೆ ಪರಿಚಯಿಸಬೇಕಾಗಿದೆ… ನಮಗೊಂದು ಈ ಅರ್ಥದಲ್ಲಿ ಒಂದು ಮಿತಿ ಇದೆ… ನಾವೇನು ಸಮಾಜದ ವಿಘಟನೆಗೆ ಹೊರಟವರಲ್ಲ… ಯಾವುದೇ ‘ವಾದ’ ‘ಅಹಂ’ಗಳಿಗೆ ಬದ್ಧರಾಗುತ್ತಿಲ್ಲ. ಶೋಷಿತ… ಸಮುದಾಯದ ಬಹುಸಂಖ್ಯಾತ ಜನಾಂಗವಾಗಿಯೂ… ನಿರ್ಲಕ್ಷ್ಯಕ್ಕೆ ಒಳಗಾಗಿರುವವರನ್ನು ಒಂದು ವೇದಿಕೆಯಡಿ… ತರುವುದು ಪರಿಷತ್ತಿನ ಉದ್ದೇಶ.

ಸ್ವಾಮ್ಯ ಲೇಖಕರು ಆರೋಪಿಸಿರುವಂತೆ ಯಾರಿಂದಲೂ… ಲಕ್ಷಾಂತರ ಹಣ ದೇಣಿಗೆ ಪಡೆದಿಲ್ಲ. ಕನ್ನಡ ಅಭಿವೃದ್ಧಿ… ಪ್ರಾಧಿಕಾರದವರು ಸಹಜವಾಗಿ ಎರಡು ದಿನಗಳ ಕಾರ್ಯಕ್ರಮಕ್ಕೆ… 70 ಸಾವಿರ ಬಿಡುಗಡೆ ಮಾಡಿರುವುದು ನಿಜವಾದರೂ… ಅದರ ಹಣ ಲೋಪವಾಗದಂತೆ ಬಳಕೆ ಮಾಡಲಾಗಿದೆ… ಮತ್ತೆ ಎರಡು ದಿನದ ಕಾರ್ಯಕ್ರಮದಲ್ಲಿ ಕೆಲವು ಸಮಾನ… ಮನಸ್ಕರು ಪ್ರಾಯೋಜಕರಾಗಿ ಕಾರ್ಯಕ್ರಮಕ್ಕೆ ಸಹಾಯ… ಮಾಡಿದ್ದಾರೆ. ಜಿಲ್ಲಾಧಿಕಾರಿಗಳು, ಶಿಕ್ಷಣಾಧಿಕಾರಿಗಳು… ತಹಸೀಲ್ದಾರರು, ಉಪ ವಿಭಾಗಾಧಿಕಾರಿಗಳಿಂದ ಹಣ… ಪಡೆದಿರುವುದಿಲ್ಲ. ಅವರೆಲ್ಲ ನಮ್ಮ ಸಮುದಾಯಕ್ಕೆ… ಸೇರಿದವರೆಂಬ ಕಾರಣಕ್ಕೆ ಆಮಂತ್ರಣ ಪತ್ರಿಕೆಯಲ್ಲಿ ವಿಶೇಷ… ಆಹ್ವಾನಿತರನ್ನಾಗಿ ಸೇರಿಸಲಾಗಿದೆ. ಇವರಾರಿಂದಲೂ ಹಣ… ಪಡೆದಿರುವುದಿಲ್ಲ. ಹಾಗಿದ್ದರೆ ಸಾಕ್ಷ್ಯ ಸಮೇತ ಲೇಖಕರು… ಆರೋಪಿಸಬಹುದಿತ್ತು.

ನಮ್ಮ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಿಗೆ… ಯಾವುದೇ ಅಜೆಂಡಾ ಕೇರೀಕರಣ, ಕೇಸರೀಕರಣ… ರಾಜಕೀಯಕರಣ ಮಾಡುವ ಉದ್ದೇಶಗಳಿಲ್ಲ. ಇದನ್ನು… ಮತ್ತೊಮ್ಮೆ ಹೇಳಬೇಕಾಗಿದೆ. ಚಿತ್ರದುರ್ಗದ ಮಾದಾರ…



ಸಿನಿಮಾ ರಂಗವನ್ನೇ ಬಿಡಬೇಕೆಂದು ತೀರ್ಮಾನಿಸಿದ್ದೆ: ಪ್ರೇಮಾ


ಕನ್ನಡದ ಬಹುತೇಕ ಸ್ಟಾರ್ ನಟರ ಜತೆ ತೆರೆ ಹಂಚಿಕೊಂಡ ಹೆಗ್ಗಳಿಕೆ ಪ್ರೇಮಾ ಅವರದ್ದು. ಕೇವಲ ಕನ್ನಡದಲ್ಲಿ ಮಾತ್ರವಲ್ಲ, ತಮಿಳು ಮತ್ತು ತೆಲುಗಿನಲ್ಲೂ ತಮ್ಮ ಛಾಪು ಮೂಡಿಸಿದವರು. 'ಕ್ಷಣ ಕ್ಷಣ' ಚಿತ್ರದ ನಂತರ ಸ್ಯಾಂಡಲ್‌ವುಡ್‌ನಿಂದ ದೂರವಾದ ಈ ನಟಿ, ಮತ್ತೆ ಕಾಣಿಸಿಕೊಂಡಿದ್ದು ಬರೋಬ್ಬರಿ ಹತ್ತು ವರ್ಷಗಳ ಬಳಿಕ. ಅದರಲ್ಲೂ ಹದಿನೆಂಟು ವರ್ಷಗಳ ನಂತರ ಉಪೇಂದ್ರ ಜತೆ ಈಗ ತೆರೆ ಹಂಚಿಕೊಳ್ಳುತ್ತಿದ್ದಾರೆ. ಸಿನಿಮಾ ರಂಗವೇ ಬೇಡವೆಂದಿದ್ದ ಇವರು ಮತ್ತೆ ಸಿನಿಮಾ ರಂಗಕ್ಕೆ ಬರಲು ಕಾರಣಗಳನ್ನು ನೀಡಿದ್ದಾರೆ.

** ಯಾವ ಕಾರಣಕ್ಕಾಗಿ ನೀವು ಸಿನಿಮಾ ರಂಗದಿಂದ ದೂರ ಸರಿದಿರಿ?*

ನಾನು ಬಹುತೇಕ ಕಲಾವಿದರ ಜತೆ ತೆರೆ ಹಂಚಿಕೊಂಡ ನಟಿ. ನನ್ನದೇ ಆದ ಅಭಿಮಾನಿ ಬಳಗವಿತ್ತು, ಕೈ ತುಂಬಾ ಕೆಲಸ. ನಾನು ಸಿನಿಮಾ ರಂಗಕ್ಕೆ ಬಂದಾಗ ಹದಿನೆಂಟರ ವಯಸ್ಸು. ಬಣ್ಣದ ಪ್ರಪಂಚದ ಹೊರತಾಗಿ ನನಗೇನೂ ಗೊತ್ತಿರಲಿಲ್ಲ. ಸಿನಿಮಾದ ಹೊರತಾಗಿ ಬೇರೆ ಯೋಚಿಸುವ ಶಕ್ತಿ ಕೂಡ ನನಗಿರಲಿಲ್ಲ. ಇದೇ ಸಿನಿಮಾ ರಂಗವನ್ನು ಬಿಡುವಂತೆ ಮಾಡಿತು. ಅದೇ ಕತೆ, ಅದೇ ಪಾತ್ರ ಅಂದಾಗ ಎಷ್ಟು ಅಂತ ನಟಿಸಲಿ. ಅದೇ ಟೈಮ್‌ನಲ್ಲಿ ಮದುವೆ ಆಯಿತು. ಸಿನಿಮಾ ರಂಗ ತೊರೆಯಲು ಇದು ಸಕಾಲ ಅಂತ ಬಿಟ್ಟೆ.

** ಸಿನಿಮಾ ರಂಗವನ್ನು ಬಿಟ್ಟವರು ಮತ್ತೆ ಈಗ ಬಂದಿದ್ದು ಯಾಕೆ?*

ಎಲ್ಲರೂ ಇದು ಕಮ್‌ಬ್ಯಾಕ್ ಎಂದು ಕರೆಯುತ್ತಾರೆ. ಆದರೆ ನಾನು ಸಿನಿಮಾ ರಂಗಕ್ಕೆ ಬರಬೇಕು ಅಂತ ಯಾವಾಗಲೂ ಅಂದುಕೊಂಡಿದ್ದೆ. ಅಲ್ಲದೇ ಮೂರು ವರ್ಷಗಳ ಹಿಂದೆಯೇ ನಾನು 'ಶಿಶಿಲ್ಪ' ಚಿತ್ರದಲ್ಲಿ ನಟಿಸಿದ್ದೆ. ಆನಂತರ ನನಗೆ ಒಪ್ಪುವಂತಹ ಪಾತ್ರಗಳು ಸಿಗಲಿಲ್ಲ. ಹಾಗಾಗಿ ಚಿತ್ರರಂಗದಲ್ಲಿ ಕಾಣಿಸಿಕೊಳ್ಳಲಿಲ್ಲ. ಈಗ ಉಪೇಂದ್ರ ಜತೆ ನಟಿಸುತ್ತಿದ್ದೇನೆ. ಒಳ್ಳೆಯ ಕತೆ ಮತ್ತು ಪಾತ್ರ ಸಿಕ್ಕಿದೆ. ಹಾಗಾಗಿ ಒಪ್ಪಿಕೊಂಡೆ.



** ಹದಿನೆಂಟು ವರ್ಷಗಳ ನಂತರ ಉಪೇಂದ್ರ ಜತೆ ತೆರೆ ಹಂಚಿಕೊಳ್ಳುತ್ತಿದ್ದೀರಿ. ಈ ಕುರಿತು ಹೇಳಿ.*

ಈ ಸಿನಿಮಾವನ್ನು ಒಪ್ಪಿಕೊಳ್ಳಲು ಕಾರಣ ನನ್ನ ತಾಯಿ ಮತ್ತು ಆ ಚಿತ್ರದ ನಿರ್ದೇಶಕರು. ಮೂಲ ಸಿನಿಮಾವನ್ನು ನನಗೆ ತೋರಿಸಿದರು. ಅಲ್ಲದೇ ನಾಯಕನ ಪಾತ್ರದಲ್ಲಿ ಉಪೇಂದ್ರ ಕಾಣಿಸಿಕೊಳ್ಳಲಿದ್ದಾರೆ ಅಂತಾನೂ ಹೇಳಿದರು. ಮೂರ್‍ನಾಲ್ಕು ಬಾರಿ ಸಿನಿಮಾ ನೋಡಿ ಚಿತ್ರ ಒಪ್ಪಿಕೊಂಡೆ. ಇಲ್ಲಿ ಫ್ಯಾಮಿಲಿ ಕತೆ ಇದೆ. ಯಾವುದೇ ಕಾರಣಕ್ಕೂ ಗ್ಲಾಮರ್ ಇಲ್ಲ.

** ಎಲ್ಲ ಕಲಾವಿದರ ಜೀವನದಂತೆಯೇ ನಿಮ್ಮ ಲೈಫ್‌ನಲ್ಲೂ ವಿವಾದಗಳು ಎದ್ದವು. ಗಾಸಿಪ್‌ಗೆ ಗುರಿಯಾದಿರಿ. ಅವೆಲ್ಲವನ್ನು ಒಪ್ಪಿಕೊಳ್ಳುವ ಮನಸ್ಥಿತಿ ನಿಮ್ಮಲ್ಲಿ ಇದೆಯಾ?*

ಸಿನಿಮಾ ರಂಗಕ್ಕೆ ಬಂದಾಗ ಈ ಬಗ್ಗೆ ನನಗೇನೂ ಗೊತ್ತಿರಲಿಲ್ಲ, ಆನಂತರ ಗಾಸಿಪ್ ಮತ್ತು ವಿವಾದಗಳ ಬಗ್ಗೆ ತಿಳಿಯುತ್ತಾ ಹೋದೆ. ಸೆಲಿಬ್ರಿಟಿಗಳ ಜೀವನದಲ್ಲಿ ಅದು ಸಹಜ ಅಂತ ಗೊತ್ತಾದ ಮೇಲೆ ಎದುರಿಸುವ ಶಕ್ತಿ ಬಂತು. ಇಂತಹ ಸುದ್ದಿಗಳು ನನ್ನ ಕಿವಿಗೆ ಬಿದ್ದಾಗ ಸುಮ್ಮನೆ ನೆಗ್ಲೆಟ್ ಮಾಡುತ್ತೇನೆ. ನಕ್ಕು ಸುಮ್ಮನಾಗುತ್ತೇನೆ. ಆ ಮನಸ್ಥಿತಿ ಈಗ ನನಗೆ ಬಂದಿದೆ.

** ಮತ್ತೆ ಸಿನಿಮಾ ರಂಗದಲ್ಲೇ ಮುಂದುವರೆಯುತ್ತೀರಾ?*

ಹತ್ತು ವರ್ಷಗಳ ಹಿಂದೆ ಸಿನಿಮಾ ರಂಗವನ್ನೇ ತೊರೆಯುವ ನಿರ್ಧಾರ ತೆಗೆದುಕೊಂಡಿದ್ದೆ. ಯಾವುದೇ ಕಾರಣಕ್ಕೂ ಸಿನಿಮಾ ರಂಗಕ್ಕೆ ಬರುವುದು ಬೇಡ ಅನ್ನುವುದೇ ನನ್ನ ತೀರ್ಮಾನ ಆಗಿತ್ತು. ಆದರೆ, ಅಭಿಮಾನಿಗಳು ಒತ್ತಾಯ ಮಾಡಿದರು. ನನ್ನ ತಾಯಿ ಪ್ರೋತ್ಸಾಹ ನೀಡಿ ಮತ್ತೆ ಸಿನಿಮಾ ಮಾಡು ಅಂತ ಬೆನ್ನು ತಟ್ಟಿದರು. ಹಾಗಾಗಿ ಮತ್ತೆ ಸಿನಿಮಾ ರಂಗಕ್ಕೆ ಬರಬೇಕಾಯಿತು. ಒಳ್ಳೊಳ್ಳೆ ಪಾತ್ರಗಳು ಸಿಕ್ಕರೆ ಖಂಡಿತಾ ಮುಂದುವರೆಯುತ್ತೇನೆ. ಯಾವುದೇ ಕಾರಣಕ್ಕೂ ಸಿಕ್ಕ ಎಲ್ಲಾ ಪಾತ್ರಗಳನ್ನು ಒಪ್ಪಿಕೊಳ್ಳಲಾರೆ.

** 'ಮತ್ತೆ ಹುಟ್ಟಿ ಬಾ ಉಪೇಂದ್ರ' ಚಿತ್ರದಲ್ಲಿ ನಿಮ್ಮದು ಎಂತಹ ಪಾತ್ರ?*

ಹೋಮ್ಲಿ ಪಾತ್ರವದು. ಒಂದಷ್ಟು ತರ್ಲೆ ತಮಾಷೆಗಳು ಇವೆ. ಅದರಲ್ಲೂ ಉಪೇಂದ್ರ ಜತೆ ಪಾತ್ರ ಮಾಡಿದ್ದೇನೆ ಅನ್ನುವ ಖುಷಿ ಇದೆ. 'ಉಪೇಂದ್ರ' ಸಿನಿಮಾದಲ್ಲಿದ್ದ ಉಪೇಂದ್ರ ಅವರಿಗೂ ಈ ಸಿನಿಮಾದ ಉಪೇಂದ್ರರಿಗೂ ತುಂಬಾ ವ್ಯತ್ಯಾಸವಿದೆ. ■

...ವಾಗಿ, ಹಮ್ಮುಬಿಮ್ಮು ಬಿಟ್ಟು ಜನರೊಂದಿಗೆ ಬೆರೆಯುವವನು, ಜನಪರ ಕಾಳಜಿಯುಳ್ಳವನು, ಸರಳ ಸಜ್ಜನ ಆಗಿದ್ದರೆ ಅದನ್ನು ಜನರೇ ಗುರುತಿಸಿ ಹೇಳಬೇಕೇ ಹೊರತು ಆತನೇ ತಾನು ಫಕೀರ ಎಂದೋ, ತಾನು ಪ್ರಧಾನಮಂತ್ರಿಯಲ್ಲ ಪ್ರಧಾನ ಸೇವಕ ಎಂದೋ ನಾಟಕೀಯವಾಗಿ ಬಿಂಬಿಸಿಕೊಂಡರೆ ಸಾಲದು. ಕಳೆದ ಚುನಾವಣಾ ಪ್ರಚಾರಕ್ಕೆ ದೇಶದ ಕಳ್ಳ ಉದ್ಯಮಿಗಳನ್ನು ಸಂಪೂರ್ಣವಾಗಿ ಅವಲಂಬಿಸಿಕೊಂಡು ಗೆದ್ದ ಬಳಿಕ ಹುಲಿ ಸವಾರಿಮಾಡಿದಾತನ ರೀತಿಯಲ್ಲಿ ಇಕ್ಕಟ್ಟಿಗೆ ಸಿಕ್ಕಿಬಿದ್ದು ಅವರ ತಾಳಕ್ಕೆ ಕುಣಿಯುವ ಅನಿವಾರ್ಯತೆ ತಂದು ಕೊಂಡಾತ ಈಗ ಓಟು ಹಾಕಿ ಗೆಲ್ಲಿಸಿದ ಪ್ರಜೆಗಳ ಪ್ರಧಾನ ಸೇವಕನೋ ಇಲ್ಲಾ ಅಂಬಾನಿ ಅದಾನಿಗಳದ್ದೋ ಎಂಬುದು ನಿಧಾನವಾಗಿಯಾದರೂ ಗೋಚರವಾಗತೊಡಗಿದೆ.

ತನ್ನ ಕಾರ್ಯದ ಮೇಲೆ ನಂಬಿಕೆಯಿದ್ದರೆ ಮಾಧ್ಯಮದೆದುರು ಇಲ್ಲಾ ಸಂವಿಧಾನಬದ್ಧ ಸಂಸತ್ತಿನಲ್ಲಿಯಾದರೂ ಈ ಬಗ್ಗೆ ಉತ್ತರಿಸಬಹುದಾಗಿದ್ದ ಇಲ್ಲ ಉತ್ತರಿಸಲೇಬೇಕಿದ್ದ ಈ 'ಜನ ಸೇವಕುಡು' ತಪ್ಪಿಸಿಕೊಂಡದ್ದಾದರೂ ಯಾಕೆ? ಯಾವ ವಿತ್ತೀಯ ಪರಿಣತರಲ್ಲಿಯೂ ಸಮಾಲೋಚಿಸದೇ ಕೇವಲ ಉದ್ಯಮಿಗಳ ಹಿಕ್ಮತ್ತಿಗೆ ಬಲಿಯಾಗಿ ತೆಗೆದುಕೊಂಡ ಅಪ್ರಬುದ್ಧ ನಿರ್ಣಯಗಳು ಈತ ಹೇಳಿಕೊಂಡಂತೆ ಯಾವ ಕಪ್ಪುಹಣ, ಖೋಟಾನೋಟು, ಭಯೋತ್ಪಾದನೆ, ಭ್ರಷ್ಟಾಚಾರ ಯಾವುದಕ್ಕೂ ಹೊಡೆತ ನೀಡಲಿಲ್ಲ, ಯಾವ್ನೊಬ್ಬ ಕಪ್ಪುಹಣದ ಕುಳವೂ ಬ್ಯಾಂಕಿನ ಕ್ಯೂನಲ್ಲಿ ಕಾಣಿಸಲೇ ಇಲ್ಲ. ಈತ ನವೆಂಬರ್ 8 ರಂದು ಬಿಟ್ಟ ಭ್ರಷ್ಟಾಚಾರ ಕಪ್ಪುಹಣದ ಭೋಂಗು ನಿಜಕ್ಕೂ ಪ್ರಾಮಾಣಿಕವಾಗಿದ್ದರೆ ಆ ಸಮಯದಲ್ಲೇ ಈತನನ್ನು ಅಣಕಿಸುವಂತೆ ಮಗಳ ಮದುವೆ ಮಾಡಿದ ರೆಡ್ಡಿ ಇಪ್ಪತ್ನಾಲ್ಕು ಗಂಟೆಯಲ್ಲಿ ಜೈಲು ಪಾಲಾಗಿರುತ್ತಿದ್ದ.

ಇಂತಹ ನಿದರ್ಶನಗಳೇ ಸಾಕು ನಮ್ಮ ಈ ಪ್ರಧಾನ ಸೇವಕುಡುವಿನ ಅನಾಣ್ಯೀಕರಣದ ಹಿಂದಿರುವುದು ದೇಶದ ಉನ್ನತಿಗಿಂತ ತನ್ನ ಗೆಲ್ಲಿಸಿದ ಉದ್ಯಮಿಗಳ ಋಣ ಸಂದಾಯದ ಬಾಬ್ತು ಎಂಬುದು. ಅದಕ್ಕೇ ಇರಬೇಕು ತನ್ನ ಹಿಂಬಾಲಕರೆದುರು ಭಾಷಣದಲ್ಲಿ ಆತ ಹೇಳಿದ್ದು "ಕೆಲವರು ಗುಡ್ಡ ಅಗೆದು ಇಲಿ ಹಿಡಿದರು ಎನ್ನುತ್ತಾರೆ ಆದರೆ, ನನ್ನ ಉದ್ದೇಶ ಇದ್ದದ್ದೇ ಇಲಿ ಹಿಡಿಯುವುದರಲ್ಲಿ" ಎಂದು.

"ಸ್ವಾತಂತ್ರ್ಯ ಸಿಕ್ಕ ಎಪ್ಪತ್ತು ವರ್ಷಗಳಲ್ಲಿ ದೇಶ ಎಕ್ಕುಟ್ಟಿ ಹೋಗಿದೆ. ಈ ದೇಶ ಸುಧಾರಿಸುವ ಸಾಧ್ಯತೆಯೇ ಡೌಟು. ಹಾಗಾಗಿ ಈ ನಮ್ಮ ದೇಶವನ್ನು ಮರಳಿ ಪರತಂತ್ರಕ್ಕೊಯ್ಯೋಣ. ದೇಶವನ್ನು ಅಂಬಾನಿ ಅದಾನಿಗಳ ಕೈಯಲ್ಲಿಟ್ಟು ಅಂಬಾನಿ ಮನೆಮಗ ಊರ್ಜಿತ್ ಪಟೇಲನಂತವರನ್ನಿಟ್ಟುಕೊಂಡು ದೇಶವನ್ನು ಮತ್ತಷ್ಟು ಊರ್ಜಿತಗೊಳಿಸುವುದೇ ನಮ್ಮ ಮುಂದಿನ ಗುರಿ" ಎನ್ನುತ್ತಿದ್ದಾರಂತೆ ನಮ್ಮೀ ಪ್ರಧಾನ ಸೇವಕರು. ಅಂತೂ ದೇಶ 'ಗುರಿ' ತಲುಪೋದು ಗ್ಯಾರಂಟಿ ಅಂತಾಯ್ತು. ಅಂದಹಾಗೆ ನಮ್ಮ ತುಳುವಿನಲ್ಲಿ ಗುರಿ ಎಂದರೆ ಗುಂಡಿ ಪ್ರಪಾತ ಎಂದರ್ಥ.

ಪ್ಯಾರ್‌ಸೆ ಭೋಲೋ ನಮೋ ನಮೋ?
ಜೋರ್‌ಸೆ ಭೋಲೋ ಲಭೋ ಲಭೋ?

- ಓದುಗ, ಮಂಗಳೂರು

ತನ್ನಯ್ಯ ಸ್ವಾಮೀಜಿಯವರು ಇದರ ಪ್ರತ್ಯಕ್ಷ ಪರೋಕ್ಷ ಬೆಂಬಲ ಇರುವುದಿಲ್ಲ. ಅಸಲಿಗೆ ಈ ವಿಷಯ ಅವರೊಂದಿಗೆ ಚರ್ಚಿಸಿಲ್ಲ. ಬಿಜೆಪಿ-ಕಾಂಗ್ರೆಸ್-ಜನತಾದಳ ಈ ಯಾವುದೇ ಪಕ್ಷದವರೊಂದಿಗೆ ನಮ್ಮ ಸಂಪರ್ಕ ಇರುವುದಿಲ್ಲ. ನಮ್ಮಲ್ಲಿ ಯಾರಾದರೂ ಯಾವುದೇ ಪಕ್ಷದೊಂದಿಗೆ ಗುರುತಿಸಿಕೊಂಡಿದ್ದರೂ ಅದು ಅವರ ವೈಯಕ್ತಿಕ ವಿಚಾರ. ಇದು ಪ್ರಜಾಪ್ರಭುತ್ವ. ವ್ಯಕ್ತಿಯ ಆಯ್ಕೆ ಅವರವರಿಗೆ ಬಿಟ್ಟ ವಿಚಾರ. ಮಾತಂಗ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಸಾಮಾಜಿಕ ಹೋರಾಟದ ಹಿನ್ನೆಲೆಯಲ್ಲಿ ಬಂದವರು.

ಲೇಖಕರು ತಿಳಿವಳಿಕೆ ಹೇಳಿ ನಮಗೆ 'ಮಾತಂಗ ಸಾಹಿತ್ಯ ಪರಿಷತ್ತು' ವಿಸರ್ಜಿಸಲು ತಿಳಿಸಿದ್ದಾರೆ. ಯಾವುದೇ ಕಾರಣಕ್ಕೆ 'ಮಾತಂಗ ಸಾಹಿತ್ಯ ಪರಿಷತ್ತು' ವಿಸರ್ಜನೆಗೊಳ್ಳುವುದಿಲ್ಲ, ಮತ್ತಷ್ಟು ಗಟ್ಟಿಯಾಗುತ್ತೆ, ಸಂಘಟನೆ ಆಗುತ್ತೆ, ವಿಘಟನೆ ಆಗುವುದಿಲ್ಲ. ಜಿಲ್ಲಾ ಪರಿಷತ್ತು- ಎಲ್ಲಾ ಕಡೆಯೂ ಉದ್ಘಾಟನೆಗೊಳ್ಳಲಿವೆ ಮತ್ತು ಸಾಹಿತ್ಯಿಕ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತವೆ.

ನಮಗೆ ಯಾವುದೇ 'ಐಡೆಂಟಿಟಿ'ಯ ಅಗತ್ಯವಿಲ್ಲ, ನಮ್ಮ ಪದಾಧಿಕಾರಿಗಳೆಲ್ಲ 'ಪ್ರಗತಿಪರ' ಚಿಂತನೆ ಒಳಗೊಂಡವರಷ್ಟೆ. ಹಿತಮಿತ ಮೃದುವಾಗಿ ಕಾರ್ಯಕ್ರಮ ನಡೆಯುತ್ತವೆ. ಲೇಖಕರು ಧಾರವಾಡದ ಸಾಹಿತ್ಯ ಸಂಭ್ರಮ, ಬೆಂಗಳೂರು ಸಾಹಿತ್ಯೋತ್ಸವ ಮುಂತಾದ ಸಾಹಿತ್ಯಿಕ ಚಟುವಟಿಕೆಗಳನ್ನು ಟೀಕಿಸುವ ಧೈರ್ಯ ತೋರಬೇಕು. ಹಾಗಾಗದ ಇವರು ಹತ್ತು ತಿಂಗಳ ಹಿಂದೆ ಹುಟ್ಟಿಕೊಂಡ ನಮ್ಮ ಸಾಹಿತ್ಯ ಪರಿಷತ್ತಿಗೆ ಸಂಬಂಧ ವಿರದ ನೂರೆಂಟು ಅಪಾದನೆ ಹೊರಿಸುವ ಯಾವ ನೈತಿಕತೆ ಯಿದೆಯೆಂದು ಅರ್ಥವಾಗುತ್ತಿಲ್ಲ. ನಮಗೆ ಎಡ-ಬಲ ಪಂಥಕ್ಕಿಂತ ಮಧ್ಯಮದ ಪಂಥದ- ಪಥದಲ್ಲಿ ನಡೆಯುವ ಆರೋಗ್ಯಕರ ಲಕ್ಷಣ ಗಳೊಂದಿಗೆ ಹೊರಟಿದ್ದೇವೆ. ವ್ಯಕ್ತಿಗತ ನಿಂದನೆ-ಆರೋಪಗಳಿಗೆ ನಾವು ಬೆಲೆ ಕೊಡುವುದಿಲ್ಲ, ಸಕಾರಾತ್ಮಕ-ಸಹಕಾರಣ ಮತ್ತು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೆ ಚರ್ಚೆಗೆ ಸಿದ್ಧರಿದ್ದೇವೆ.

- ಪ್ರೊ.ಎ.ಕೆ. ಹಂಪಣ್ಣ,
ಅಧ್ಯಕ್ಷರು, ಮಾತಂಗ ಸಾಹಿತ್ಯ ಪರಿಷತ್ತು

ರೈತರ ಕಷ್ಟನಷ್ಟ

ರೈತ ಕಷ್ಟಪಟ್ಟು ಬೆಳೆದ ಬೆಳೆಗೆ ಸಿಗುವ ಬೆಲೆಯಲ್ಲಿ ಅವನು ಮಾಡಿದ ಖರ್ಚು, ವೆಚ್ಚ, ಅವನು ಹಾಕಿದ ಶ್ರಮ, ವ್ಯಯಿಸಿದ ಕಾಲ, ಮಾರುಕಟ್ಟೆಗೆ ಸಾಗಿಸಲು ವೆಚ್ಚ ಎಲ್ಲಾ ಹೋಗಿ, ಅವನ ಜೀವನ ನಿರ್ವಹಣೆಗೂ ಹಣ ಉಳಿಯಬೇಕು. ಆಗ ಮಾತ್ರ ರೈತ ಬದುಕಲು ಸಾಧ್ಯ



ಆದರೆ ಈಗ ರೈತನಿಗೆ ಸಿಗುತ್ತಿರುವುದು ಟಮಾಟೋ ಕೆ.ಜಿಗೆ 40 ಪೈಸೆ; ಈರುಳ್ಳಿ ಕೆ.ಜಿಗೆ 80 ಪೈಸೆ ಮಾತ್ರ! ಇದು ಮಾರುಕಟ್ಟೆಗೆ ಸಾಗಿಸಲು ಮಾಡುವ ಖರ್ಚಿಗೂ ಸಾಲುವುದಿಲ್ಲ! ಹೀಗಾದರೆ ರೈತರು ಹೇಗೆ ಜೀವಿಸಬೇಕು?

ರೈತರಿಲ್ಲದೆ ನಾವು (ಅಂದರೆ ಕಾರ್ಮಿಕರು, ನೌಕರರು, ವ್ಯಾಪಾರಿಗಳು, ಉದ್ಯಮಿಗಳು, ಕಲಾವಿದರು, ಮಾಧ್ಯಮದವರು, ಕ್ರೀಡಾಪಟುಗಳು, ರಾಜಕಾರಣಿಗಳು ಮುಂತಾದವರೆಲ್ಲಾ) ಯಾರೂ ಜೀವಿಸಲು ಸಾಧ್ಯವಿಲ್ಲ. ರೈತನಿಲ್ಲದೆ ಆಹಾರವಿಲ್ಲದೆ ಯಾರೂ ಸಹ ಬದುಕಿರಲು ಸಾಧ್ಯವಿಲ್ಲ! ಇದನ್ನಾದರೂ ನಾವು ಅರ್ಥಮಾಡಿಕೊಳ್ಳಬೇಕು... ಟಮಾಟೋ ಬೆಳೆದ ರೈತನಿಗೆ ಕೆ.ಜಿ.ಗೆ 40 ಪೈಸೆ ಸಿಕ್ಕಿದರೆ ಗ್ರಾಹಕರಾದ ನಾವು ಅದೇ ಟಮಾಟೋಗೆ ಕೊಡುವುದು ಕೆ.ಜಿಗೆ 10 ರೂ. ಆದರೂ ಬೇರೆ ದಿನಬಳಕೆ ವಸ್ತುಗಳ ಬೆಲೆಗಳಿಗೆ ಹೋಲಿಸಿದರೆ 10 ರೂ. ಕಡಿಮೆಯೇ. ಆದ್ದರಿಂದ 10 ರೂ.ಗೆ ಟಮಾಟೋ, 20 ರೂ.ಗೆ ಈರುಳ್ಳಿ ಸಿಗುವುದಕ್ಕೆ ಖುಷಿ ಪಡುವುದಕ್ಕಿಂತ ರೈತನ ಹಿತವನ್ನು ಕಾಪಾಡುವ ಬಗ್ಗೆ ಆಳವಾಗಿ ಚಿಂತಿಸಬೇಕು.

ಪರಿಸ್ಥಿತಿ ಹೀಗಿದ್ದರೂ ಹಣ್ಣು ತರಕಾರಿ ಮತ್ತು ಆಹಾರ ಪದಾರ್ಥಗಳನ್ನು ನಾವೇ ಆರಿಸಿಕೊಂಡಿರುವ, ನಮ್ಮ ಜನಪ್ರಿಯ ಸರ್ಕಾರಗಳು (?) ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿವೆ. ಅದನ್ನು ಕೂಡಲೆ ನಿಷೇಧಿಸಬೇಕು.

ಮತ್ತೊಂದು ವಿಷಯವೆಂದರೆ ರೈತನಿಗೆ ಸಿಗುವ 40 ಪೈಸೆಗೂ ಗ್ರಾಹಕರು ಕೊಡುವ 10 ರೂ.ಗೂ ಇರುವ ಅಂತರ ಅನಿವಾರ್ಯ ಎನಿಸುತ್ತದೆ; ಏಕೆಂದರೆ ತರಕಾರಿ ವ್ಯಾಪಾರ ಮಾಡುವ ಸಣ್ಣ ವ್ಯಾಪಾರಿಗಳು ಜೀವಿಸಲು ಅದು ಅನಿವಾರ್ಯ ಇರಬಹುದು. ಈ ವಿಷಯದಲ್ಲಿ ರೈತನಿಗೆ ಮಾಡಿದಂತೆ ವ್ಯಾಪಾರಿಗಳಿಗೆ ಅಷ್ಟು ಸುಲಭವಾಗಿ ಮೋಸ ಮಾಡಲು ಸಾಧ್ಯವಿಲ್ಲ.

ಅದೇನೇ ಆಗಲಿ ರೈತರೆಲ್ಲ ಒಂದಾಗಿ, ಒಗ್ಗಟ್ಟಾಗಿ ಆಯಾ ಕ್ಷೇತ್ರದ ಎಮ್ಮೆಲ್ಲೆ/ಸಂಸದರ ಮನೆಗಳಿಗೆ ಮುತ್ತಿಗೆ ಹಾಕಿ, ಹಣ್ಣು ತರಕಾರಿ ಮುಂತಾದ ವ್ಯವಸಾಯೋತ್ಪನ್ನಗಳ ಆಮದನ್ನು ನಿಷೇಧಿಸುವಂತೆ ಕ್ರಮ ಕೈಗೊಳ್ಳಲು ಒತ್ತಾಯಿಸಬೇಕು.

ಸರ್ಕಾರ ಇದಕ್ಕೆ ಒಪ್ಪದಿದ್ದರೆ ರೈತರು ಬೆಳೆದ ಬೆಳೆಯಲ್ಲಿ ಅರ್ಧ ಭಾಗವನ್ನು ತಿಪ್ಪೆಗೆ ಸುರಿಯಬೇಕು! ಹೌದು, ತಿಪ್ಪೆಗೆ ಸುರಿಯಬೇಕು!! ದಾನ ಮಾಡುವುದಾಗಲೀ, ಜನರಿಗೆ ಹಂಚುವುದಾಗಲೀ ಮಾಡಬಾರದು!!! ಆಗ ಏನಾಗಬಹುದು??? ಊಹಿಸಿ!!!

ವ್ಯವಸಾಯೋತ್ಪನ್ನಗಳಿಗೆ ಎಲ್ಲೆಲ್ಲೂ ಬರ ಪ್ರಾರಂಭವಾಗುತ್ತದೆ. ಆಗ ಹಣ ಕೊಟ್ಟರೂ ಹಣ್ಣು ಸಿಕ್ಕಲ್ಲ, ತರಕಾರಿ ಸಿಕ್ಕಲ್ಲ; ಆಹಾರ ಪದಾರ್ಥಗಳು ಸಿಗುವುದಿಲ್ಲ, ಆಗ ಆಹಾರ ಪದಾರ್ಥಗಳಿಗೆ ಜನರು ಕೇಳಿದಷ್ಟು ಹಣ ಕೊಡುತ್ತಾರೆ.... ರೈತ ತನ್ನ ಪೂರ್ತಿ ಮಾಲಿಗೆ ಪಡೆಯಬೇಕೆಂದಿದ್ದ ಹಣವನ್ನು ತನ್ನಲ್ಲಿ ಈಗ ಉಳಿದಿರುವ ಅರ್ಧದಷ್ಟು ಮಾಲಿನಿಂದಲೇ ಪಡೆದುಕೊಳ್ಳಬಹುದು.

ಇದು ಕಷ್ಟವೇನಲ್ಲ, ನಮ್ಮ ರೈತ ಸಂಘಗಳು ಒಂದು ಕಡೆ ಕುಳಿತು ಚರ್ಚಿಸಿ, ಸ್ವಲ್ಪ ಪ್ಲಾನ್ ಮಾಡಬೇಕಷ್ಟೆ. ರೈತ ನಾಯಕರುಗಳು ಕೂಡಲೆ ಈ ಕಡೆ ಗಮನ ಹರಿಸಬೇಕು.

- ವೀರಯ್ಯಾತಯ್ಯ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 25-01-2017 RNI No. KARKAN2005/14

ದ್ವಾರಕೀಶ್‌ಗಾಗಿ ಒಂದಾದವರು

ಕನ್ನಡ ಸಿನಿಮಾ ರಂಗ ಒಗ್ಗಟ್ಟು ತೋರಿಸುವುದು ತೀರಾ ಕಡಿಮೆ. ಅದರಲ್ಲೂ ಕಲಾವಿದರು ಮತ್ತು ತಂತ್ರಜ್ಞರು ಒಂದಾಗುವುದು ಇನ್ನೂ ವಿರಳ. ಅದರ ಇವರೆಲ್ಲರೂ ಒಟ್ಟಾಗಿ ಕೆಲಸ ಮಾಡಿರುವ ಅಪರೂಪದ ಪ್ರಸಂಗ 'ಚೌಕ' ಸಿನಿಮಾದಲ್ಲಿ ಆಗಿದೆ. ಕನ್ನಡದ ಬಹುತೇಕ ಟಾಪ್ ಸಂಗೀತ ನಿರ್ದೇಶಕರು ಈ ಚಿತ್ರಕ್ಕಾಗಿ ಸಂಗೀತ ನೀಡಿದ್ದಾರೆ. ತಲಾ ಒಂದೊಂದು ಹಾಡನ್ನು ಕಂಪೋಸ್ ಮಾಡುವ ಮೂಲಕ ಒಗ್ಗಟ್ಟಿನ ಪ್ರದರ್ಶನ ತೋರಿಸಿದ್ದಾರೆ. ಇದೆಲ್ಲವೂ ದ್ವಾರಕೀಶ್ ಮೇಲಿನ ಗೌರವಕ್ಕಾಗಿ ಅನ್ನುವುದು ವಿಶೇಷ.



ದ್ವಾರಕೀಶ್ ಬ್ಯಾನರ್‌ನಲ್ಲಿ 'ಚೌಕ' ಸಿನಿಮಾ ಮೂಡಿಬಂದಿದ್ದು, ಇದು ಈ ಬ್ಯಾನರ್‌ನ ಐವತ್ತನೇ ಚಿತ್ರ. ಹಾಗಾಗಿ ಸಂಗೀತ ನಿರ್ದೇಶಕರಾದ ವಿ.ಹರಿಕೃಷ್ಣ, ಅರ್ಜುನ್ ಜನ್ಯ ಗುರುಕಿರಣ್, ಅನೂಪ್ ಸೀಳೀನ್ ಮತ್ತು ವಿ.ಶ್ರೀಧರ್ ಒಟ್ಟಾಗಿ ಕೆಲಸ ಮಾಡಿದ್ದಾರೆ. ಇವರ ಸಂಗೀತ ಸಂಯೋಜನೆಯಲ್ಲಿ ಮೂಡಿ ಬಂದ ಬಹುತೇಕ ಹಾಡುಗಳು ಹಿಟ್ ಲಿಸ್ಟ್‌ನಲ್ಲಿವೆ. ಅದರಲ್ಲೂ ಅರ್ಜುನ್ ಜನ್ಯ ಸಂಗೀತ ಸಂಯೋಜನೆಯ 'ಅಪ್ಪ ಐ ಲವ್ ಯೂ' ಹಾಡು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಬಹುತೇಕ ಹಾಡುಗಳಿಗೆ ಯೋಗರಾಜ್ ಭಟ್ ಅವರ ಸಾಹಿತ್ಯವಿದೆ. 'ಅಲ್ಲಾಡ್ಸು ಅಲ್ಲಾಡ್ಸು' ಹಾಡಿಗೆ ಹರಿಕೃಷ್ಣ ಕಂಪೋಸ್ ಮಾಡಿದ್ದರೆ, ತುರ್ತಿನಲ್ಲಿ ಗೀಚಿದ ಗೀತೆಯನ್ನು ಶ್ರೀಧರ್ ಸಂಯೋಜನೆ ಮಾಡಿದ್ದಾರೆ. ದ್ವಾರಕೀಶ್‌ಗಾಗಿಯೇ ಗುರುಕಿರಣ್ ಹಾಡೊಂದನ್ನು ಪ್ರೆಸೆಂಟ್ ಮಾಡಿದ್ದಾರಂತೆ. ಈ ಎಲ್ಲಾ ಹಾಡುಗಳ ಬಗ್ಗೆ ಚಿತ್ರದ ನಿರ್ದೇಶಕ ತರುಣ್ ಸುಧೀರ್ ಹೇಳುವುದು ಹೀಗೆ: "ಎಲ್ಲರೂ ಒಟ್ಟಾಗಿ ಸಂಗೀತ ಸಂಯೋಜನೆ ಮಾಡಿದ್ದು ನಿಜಕ್ಕೂ ಖುಷಿ ಆಗುತ್ತಿದೆ. ಇದೆಲ್ಲ ಸಾಧ್ಯವಾಗಿದ್ದು ದ್ವಾರಕೀಶ್ ಅವರ ಮೇಲಿನ ಅಭಿಮಾನಕ್ಕಾಗಿ."

ಕನ್ನಡ ಮೀಡಿಯಂ ರಾಜು

'ಫಸ್ಟ್ ರ್‍ಯಾಂಕ್ ರಾಜು' ಖ್ಯಾತಿಯ ಗುರುನಂದನ್ ಮತ್ತೊಬ್ಬ ರಾಜುವಾಗಿ ಪ್ರೇಕ್ಷಕರ ಮುಂದೆ ಬರಲಿದ್ದಾರೆ. ಈ ಬಾರಿ ನಿರ್ದೇಶಕರು ರಾಜುವನ್ನು ಕನ್ನಡ ಮೀಡಿಯಂಗೆ ಸೇರಿಸಿದ್ದಾರೆ. ಹಾಗಾಗಿಯೇ ಚಿತ್ರಕ್ಕೂ 'ರಾಜು ಕನ್ನಡ ಮೀಡಿಯಂ' ಎಂದು ಹೆಸರಿಡಲಾಗಿದೆ. ಕನ್ನಡ ಮೀಡಿಯಂ ಹುಡುಗರ ಬಗ್ಗೆ ನಾನಾ ಕತೆಗಳನ್ನು ಕೇಳಿದ್ದೇವೆ. ಅವರನ್ನು ಗೇಲಿ ಮಾಡುವಂತಹ ಘಟನೆಗಳನ್ನು ನೋಡಿದ್ದೇವೆ. ಅದನ್ನೇ ಸಿನಿಮಾ ಮಾಡಿದ್ದಾರಂತೆ ನಿರ್ದೇಶಕ ನರೇಶ್ ಕುಮಾರ್. 'ಫಸ್ಟ್ ರ್‍ಯಾಂಕ್ ರಾಜು' ರೀತಿಯಲ್ಲೇ ಈ ಸಿನಿಮಾ ಕೂಡ ಹ್ಯೂಮರೆಸ್ ಆಗಿದೆಯಂತೆ. ಚಿತ್ರಕ್ಕೆ ಅಂತಹ ಶೀರ್ಷಿಕೆ ಇಟ್ಟಿದ್ದರೂ ಯಾರನ್ನೂ ಕಿಂಡಲ್ ಮಾಡುವುದಕ್ಕೆ ಹೋಗಿಲ್ಲವಂತೆ.

ಈ ಸಿನಿಮಾದಲ್ಲಿ ಸ್ಪೆಷಲ್ ಜೋಡಿ ಕಾಣಿಸಿಕೊಂಡಿದೆ. ಗುರುನಂದನ್ ಮತ್ತು 'ರಂಗಿತರಂಗ'ದ ಹುಡುಗಿ ಅವಂತಿಕಾ ಶೆಟ್ಟಿ ಒಟ್ಟಾಗಿ ನಟಿಸುತ್ತಿದ್ದಾರೆ. 'ಶಿವಲಿಂಗ' ಚಿತ್ರ ಖ್ಯಾತಿಯ ನಿರ್ಮಾಪಕ ಕೆ.ಎ.ಸುರೇಶ್ ಈ ಸಿನಿಮಾಗೆ ಹಣ ಹೂಡಿದ್ದಾರೆ.

ಅನನ್ಯ ಪಾತ್ರದಲ್ಲಿ ಶ್ರದ್ಧಾ

'ಯೂ ಟರ್ನ್' ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಟ್ಟವರು ಶ್ರದ್ಧಾ ಶ್ರೀನಾಥ್. ಸದ್ಯ ಸಾಮಾಜಿಕ ಜಾಲತಾಣದಲ್ಲಿ ಇವರದ್ದೇ ಮಾತು. ಇವರು ನಾಯಕಿಯಾಗಿ ನಟಿಸಿರುವ 'ಆಪರೇಷನ್ ಅಲಮೇಲಮ್ಮ' ಚಿತ್ರದ ಟೀಸರ್ ಮೊನ್ನೆಯಷ್ಟೇ ರಿಲೀಸ್ ಆಗಿದ್ದು, ಈ ಚಿತ್ರದಲ್ಲಿ ಇವರು ಎರಡು ಶೇಡ್ ಪಾತ್ರ ನಿರ್ವಹಿಸಿದ್ದಾರೆ. ಎರಡು ಕೂಡ ವಿಭಿನ್ನವಾಗಿವೆ.

'ಆಪರೇಷನ್ ಅಲಮೇಲಮ್ಮ' ಸಿನಿಮಾದಲ್ಲಿ ಟೀಚರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಶ್ರದ್ಧಾ. ಟೀಚರ್ ಅಂದಾಕ್ಷಣ ಗುರುಭಕ್ತಿ ಮೂಡುವುದು ಸಾಮಾನ್ಯ. ಆದರೆ, ಈ ಪಾತ್ರ ಹಾಗಿಲ್ಲವಂತೆ. ಕೌಟುಂಬಿಕವಾಗಿ ಈ ಕ್ಯಾರೆಕ್ಟರ್ ಮೌನವಾಗಿದ್ದರೂ, ಆಚೆ ಸ್ವಚ್ಛಂದದ ಹುಡುಗಿ. ಅವಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಂತೆ. ಇಂತಹ ಪಾತ್ರಕ್ಕೆ ಶ್ರದ್ಧಾ ಜೀವ ತುಂಬಿದ್ದಾರೆ ಅಂತಾರೆ ನಿರ್ದೇಶಕರು.

'ಸಿಂಪಲ್ಲಾಗೊಂದ್ ಲವ್ ಸ್ಟೋರಿ' ಖ್ಯಾತಿಯ ಸುನಿ ಈ ಚಿತ್ರದ ನಿರ್ದೇಶಕರು. ಮನೀಶ್ ರಿಷಿ ನಾಯಕರಾಗಿ ಕಾಣಿಸಿಕೊಂಡಿದ್ದಾರೆ. ರಾಜೇಶ್ ನಟರಂಗ ಸೇರಿದಂತೆ ಹಲವು ಹೆಸರಾಂತ ಕಲಾವಿದರು ಸಿನಿಮಾದಲ್ಲಿದ್ದಾರೆ. ಅಭಿಷೇಕ್ ಕಾಸರಗೋಡು ಸಿನಿಮಾಟೋಗ್ರಫಿಯಲ್ಲಿ ಚಿತ್ರ ಮೂಡಿಬಂದಿದೆ.



ಅಂಡರ್‌ವರ್ಲ್ಡ್‌ಗೆ ಇಳಿದ ಉಪೇಂದ

ವಿಭಿನ್ನ ಸಿನಿಮಾ ಮತ್ತು ಪಾತ್ರಗಳ ಮೂಲಕ ಗುರುತಿಸಿಕೊಂಡವ ಉಪೇಂದ್ರ. ಈ ಬಾರಿ ಅವರು ಅಂಡರ್‌ವರ್ಲ್ಡ್ ಡಾನ್ ಎಂ.ಪಿ.ಜಯರಾ ಕುರಿತಾದ ಚಿತ್ರ ಮಾಡುತ್ತಿದ್ದಾರೆ. ಈ ಸಿನಿಮಾದಲ್ಲಿ ಜಯರಾಜ್ ಪಾತ್ರವ ಮಾಡಲಿದ್ದಾರೆ ರಿಯಲ್ ಸ್ಟಾರ್. ಈವರೆಗೂ ಈ ಸಿನಿಮಾದ ಬಗ್ಗೆ ಗ ಸುದ್ದಿ ಇತ್ತು, ಈಗದು ಅಧಿಕೃತವಾಗಿದೆ. 'ಮಮ್ಮಿ' ಸಿನಿಮಾದ ನಿರ್ದೇಶಕ ಲೋಹಿತ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಲಿದ್ದಾರೆ.




ಎಲ್ಲವೂ ಅಂದುಕೊಂಡಂತೆ ಆಗಿದ್ದರೆ, ಡಾನ್ ಜಯರಾಜ್ ಕುರಿತಾದ ಸಿನಿಮಾವನ್ನು ಸ್ವತಃ ಅವರ ಮಗ ಅಜಿತ್ ಮಾಡಬೇಕಿತ್ತು, ಈಗದು ಉಪೇಂದ್ರ ಪಾಲಾಗಿದೆ. ಅದಕ್ಕೆ ಅಜಿತ್ ಒಪ್ಪಿಗೆ ಕೂಡ ಇದೆಯಂತೆ.

ಭೂಗತ ಜಗತ್ತಿನ ಕತೆಯನ್ನು ಈಗಾಗಲೇ ತಮ್ಮ ಸಿನಿಮಾಗಳ ಮೂಲಕ ಹೇಳಿದ್ದಾರೆ ಉಪೇಂದ್ರ. ಆದರೆ ಅವರು ಇಂತಹ ಪಾತ್ರಗಳಲ್ಲಿ ಕಾಣಿಸಿಕೊಂಡಿರಲಿ ಇದೇ ಮೊದಲ ಬಾರಿಗೆ ನೈಜ ಘಟನೆಯನ್ನು ಆಧರಿಸಿದ ಚಿತ್ರದಲ್ಲಿ ನಟಿಸುತ್ತಿದ್ದಾ ಅಲ್ಲದೇ ಜಯರಾಜ್ ಪಾತ್ರಕ್ಕಾಗಿ ಅವರು ತಯಾರಿಯನ್ನೂ ಮಾಡಿಕೊಳ್ಳಲಿದ್ದಾ ಕನ್ನಡದಲ್ಲಿ ಈಗಾಗಲೇ ಭೂಗತ ಜಗತ್ತಿನ ಕತೆಗಳು ಸಿನಿಮಾ ಆಗಿವೆ. ಅಲ್ಲದ ಮುತ್ತಪ್ಪ ರೈ ಅವರ ಜೀವನವನ್ನು ಆಧರಿಸಿದ ಸಿನಿಮಾ ಕೂಡ ಕನ್ನಡದ ಮೂಡಿಬರುತ್ತಿದೆ. ಇದರ ಹಿಂದೆಯೇ ಜಯರಾಜ್ ಅವರ ಸಿನಿಮಾದ ಸು ಕುತೂಹಲ ಮೂಡಿಸಿದೆ.

ಡಾನ್ ಆದ ಗಡ್ಡಪ್ಪ

'ತಿಥಿ' ಸಿನಿಮಾದ ಪಾತ್ರಧಾರಿಗಳನ್ನು ಸ್ಯಾಂಡಲ್‌ವುಡ್‌ನ ಕೆಲವರು ಬೇಕಾಬಿ ಬಳಸಿಕೊಳ್ಳುತ್ತಿದ್ದಾರೆಂದು 'ತಿಥಿ' ಚಿತ್ರದ ಕತೆಗಾರ ಈರೇಗೌಡ ಆರೋಪಿಸಿದ್ದರು ಅವರು ತಮ್ಮ ನೋವನ್ನು ಬಹಿರಂಗವಾಗಿಯೇ ಹೊರಗೆ ಹಾಕಿದ್ದರು. ಆದರೂ ಈ ನಡೆ ನಿಂತಿಲ್ಲ. ಈವರೆಗೂ 'ತಿಥಿ' ಸಿನಿಮಾದ ಗಡ್ಡಪ್ಪ, ಸೆಂಚುರಿ ಗೌಡ ಅವರನ್ನು ಡಬಲ್ ಮೀನಿಂಗ್ ಡೈಲಾಗ್ ಹೇಳಿಸಿದ್ದ ನಿರ್ದೇಶಕರು, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅವರಿಗೆ ಡಾನ್ ಪಾತ್ರಗಳನ್ನೂ ಕೊಟ್ಟಿದ್ದಾರೆ. 'ಗಡ್ಡಪ್ಪನ ಸರ್ಕಲ್' ಚಿತ್ರದಲ್ಲಿ ಗಡ್ಡಪ್ಪ ಕೈಯಲ್ಲಿ ಲಾಂಗ್ ಹಿಡಿದಿದ್ದಾರೆ. ಈಗಾಗಲೇ ರಿಲೀಸ್ ಆಗಿರುವ 'ತರ್ಲೆ ವಿಲೇಜ್' ಚಿತ್ರದಲ್ಲಿ



ಗಡ್ಡಪ್ಪನಿಂದ ಅಶ್ಲೀಲ ಮಾತುಗಳನ್ನು ಆಡಿಸಿದ್ದರು. ಇನ್ನೂ ತೆರೆ ಕಾಣಬೇಕಿರು 'ಏನ್ ನಿನ್ನ ಪ್ರಾಬ್ಲಮ್' ಚಿತ್ರದಲ್ಲೂ ಇಂಥದ್ದೇ ಸಂಭಾಷಣೆಗಳು ಇವೆ. ಈ ಮಾಸ್ ಡೈಲಾಗ್ ಹೊಡೆಯುತ್ತಿದ್ದಾರೆ ಗಡ್ಡಪ್ಪ ಮತ್ತು ಸೆಂಚುರಿ ಗೌಡ. ಈ ಹಿಂದಿನ ಸಿನಿಮಾಗಳಲ್ಲಿ ಇಬ್ಬರೂ ಜತೆ ಜತೆಯಾಗಿ ಕಾಣಿಸಿಕೊಂಡಿದ್ದರ 'ಗಡ್ಡಪ್ಪನ ಸರ್ಕಲ್' ಸಿನಿಮಾದಲ್ಲಿ ಎದುರಾಳಿಗಳು. ಇಂತಹ ಪಾತ್ರಗಳನ್ನು ಸೃಷ್ಟಿ ಮಾಡಿ ಸಿನಿಮಾ ಮಾಡಿದ್ದಾರೆ ನಿರ್ದೇಶಕ ಬಿ.ಆರ್.ಕೇಶವ್.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com